ಸಾಹಿತ್ಯ ದಾಸೋಹ ೨೧೩

ಮೇ ೨೦೨೩

೨೭/೦೫/೨೦೨೩ರಂದು ನಡೆದ
ದಾಸೋಹದ ಬರಹಗಳ ಸಂಕಲನ









ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೧೩



ಗೂಗಲ್ ಮೀಟ್‌ನಲ್ಲಿ

ದಿನಾಂಕ : ೨೭/೦೫/೨೦೨೩
ಶನಿವಾರ ಮಧ್ಯಾಹ್ನ ೩.೩೦ಕ್ಕೆ

ಅಧ್ಯಕ್ಷತೆ:
ಶ್ರೀ ಶ್ರೀಧರ ಬಾಣಾವರ

ಕತೆ,ಕವನ,ಪ್ರಬಂಧ,ಲೇಖನ,ಕೀರ್ತನೆ ಇತ್ಯಾದಿಗಳ ಸ್ವಂತ ರಚನೆಗಳಿಗೆ ಮಾತ್ರ ಸ್ವಾಗತ.

ಪ್ರಸ್ತುತಪಡಿಸುವವರು ಮೊದಲೇ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಲೇಖನಗಳನ್ನು ಅಧ್ಯಕ್ಷರ ದೂರವಾಣಿ ಸಂಖ್ಯೆ 9449209498ಗೆ ೨೫/೦೫/೨೦೨೩ ಗುರುವಾರದೊಳಗೆ ಕಳಿಸಿಕೊಡಬೇಕು. ಇಲ್ಲದಿದ್ದರೆ ಪ್ರಸ್ತುತಿಗೆ ಅವಕಾಶವಿಲ್ಲ.

ಪ್ರಸ್ತುತಿಗೆ ಗರಿಷ್ಠ ಕಾಲಮಿತಿ ಆರು ನಿಮಿಷಗಳು.

ಪ್ರೇಕ್ಷಕರಾಗಿ ಭಾಗವಹಿಸಲೂ ಸ್ವಾಗತವಿದೆ.

ದಾಸೋಹದಲ್ಲಿ ಪ್ರಸ್ತುತಿಯಾದ ಲೇಖನಗಳನ್ನು ಒಂದು ವಾರದೊಳಗೆ ಶ್ರೀ ಶೃಂಗೇಶ್ವರ ಶರ್ಮ ದೂರವಾಣಿ ಸಂ:9448291329 ಅವರಿಗೆ ಕಳುಹಿಸಿಕೊಡಬೇಕು

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ದಾಸೋಹವನ್ನು ಯಶಸ್ವಿ ಗೊಳಿಸಿ.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ
ಸಾಹಿತ್ಯ ದಾಸೋಹ ೨೧೩
ಪ್ರಸ್ತುತಿ ಪಡಿಸಿದವರ ಪಟ್ಟಿ



1. ಕೆ.ಆರ್.ವೆಂಕಟೇಶ್

ಅತಿ ಪರಿಚಯ

ದೇವಸ್ಥಾನದ ಬೇಹುಗಾರನಿಗೆ
ಅದರ ಬಗ್ಗೆ ಕುತೂಹಲವುಂಟೇ?
ಸದಾ ಮೂರ್ತಿಯ ನೋಡುವವ
ಅದಕೆ ಕೈ ಮುಗಿಯುವುದುಂಟೇ?

ಅಡಿಗೆ ಮಾಡುವವನಿಗೆ ಅಡಿಗೆಯ
ಆಸ್ವಾದಿಸುವ ಚಪಲವುಂಟೇ ?
ಸದಾ ಅದರ ಪರಿಮಳ ಆಘ್ರಾಣಿಸುವ
ಅವನಿಗೆ ಅದರಲಿ ಆಸಕ್ತಿಯುಂಟೇ?

ಚಿತಾಗರದಿ ಶವಗಳ ಸುಡುವವನಿಗೆ
ನೋಡಿ ಕಣ್ಣೀರು ಬರುವುದುಂಟೇ ?
ಸದಾ ಸಾವುಗಳೇ ಬದುಕಾಗಿರುವವನಿಗೆ
ಸಾವುಗಳಿಂದ ಚಿಂತೆಯಾಗುವುದುಂಟೇ?

ಹೂವುಗಳ ಮಾರುವವಳಿಗೆ
ಅದರ ಮುಡಿವ ಆಸೆಯುಂಟೇ?
ಸದಾ ಅದರ ಮುಂದಿರುವವರಿಗೆ
ಅದರ ಸುಗಂಧ ಹಿಡಿಸುವುದುಂಟೇ?

ಕಾಡಿನಲ್ಲೇ ಹುಟ್ಟಿ ಬೆಳೆದ ಜನರು
ಹಸಿರಿನ ಸೊಬಗ ಮೆಚ್ಚುವುದುಂಟೇ?
ಮರ ಗಿಡಗಳ ನಡುವೆ ಸದಾ ಇರುವವರಿಗೆ
ಅದರ ಮಹತ್ವ ತಿಳಿಯುವುದುಂಟೇ?

ದೀರ್ಘಾವಧಿಯ ಸಮುದ್ರಯಾನದಿ
ಸಮುದ್ರ ಹರ್ಷ ನೀಡುವುದುಂಟೇ?
ತೀರ ಕಾಣದೆ ದಡ ಸೇರದೆ ಸಮುದ್ರದ
ವೈಭವ ಅರಿಯುವುದುಂಟೇ?

ಹಣದ ರಾಶಿಯ ನಡುವೆ ಜನಿಸಿದವರಿಗೆ
ಹಣದ ಬೆಲೆಯು ತಿಳಿಯುವುದುಂಟೇ?
ಕಷ್ಟಪಡದೆ ಬೆವರು ಸುರಿಸದೇ ಬರುವ
ಹಣದ ಮಹತ್ವ ತಿಳಿಯುವುದುಂಟೇ?

ಸದಾ ಭೇಟಿ ಆಗುವುವರ ಕಾಣಲು
ಮನ ಹಾತೊರೆಯುವುದುಂಟೇ ?
ಸದಾ ಮನೆಗೆ ಬರುವವರಿಗೆ
ಆತಿಥಿಯ ಆದರ ಸಿಗುವುದುಂಟೇ?

ಅತಿ ಪರಿಚಯ ಮನಸಿಗೆ ಮುದ ನೀಡದು
ಅತಿ ಪರಿಚಯದಿಂದದರ ಬೆಲೆ ತಿಳಿಯದು
ಇಲ್ಲದೇ ಇರುವುದು ಬಂದಾಗಲೇ ಸಂತೋಷ
ಕಾಣದ್ದು ಕಾಣಿಸಿದಾಗಲೇ ಕಣ್ತುಂಬಿ ಬರುವುದು

–ಮನೋಹಂಸ–

2. ಗೌರಿ ಭಟ್ಟ.



ತುಮುಲ

ಪ್ರಸ್ತುತ ವರ್ಷದ ಪಿಯುಸಿ ಪರೀಕ್ಷೆ ಮುಗಿದು ಫಲಿತಾಂಶ ಬಂದಿದೆ.

ಕೆಲವರು ಅವರ ನಿರೀಕ್ಷೆಯಂತೆಯೇ ತೇರ್ಗಡೆ ಹೊಂದಿರುತ್ತಾರೆ ಇನ್ನು ಕೆಲವರಿಗೆ ಫಲಿತಾಂಶ ನಿರಾಸೆ ತಂದಿರುತ್ತದೆ. ಪಿಯುಸಿ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರು ಅಥವಾ ಪೋಷಕರು ಅನುಭವಿಸುವ ಮಾನಸಿಕ ಹಿಂಸೆ ಹೇಳತೀರದು.ಅದರಲ್ಲೂ ಪಿಯುಸಿ ಪರೀಕ್ಷಾ ಪರಿಣಾಮ ಮಕ್ಕಳ ಭವಿಷ್ಯದ ಕೀಲಿ ಕೈ ಅಂತಲೇ ಎಲ್ಲರೂ ನಂಬಿರುವುದು ಅಲ್ಲದೇ ಹದಿಹರೆಯದ ಮಕ್ಕಳ ವರ್ತನೆ, ನಡವಳಿಕೆಗಳು ವಿಚಿತ್ರ ಅನ್ನಿಸುವುದು. ಇದುವರೆಗೂ ತಮ್ಮ ತೆಕ್ಕೆಯೊಳಗೆ ಇದ್ದ ಮಗು ದಾರಿ ತಪ್ಪಿ ಹೋಗಬಹುದು ಎಂಬ ಭಯ ಅಪ್ಪ-ಅಮ್ಮಂದಿರಿಗೆ,ಹೆತ್ತವರ ಅತೀ ಕಾಳಜಿ ಚಿನ್ನದ ಸಂಕೋಲೆ ಅನ್ನಿಸುವುದು ಮಕ್ಕಳಿಗೆ.ಇದೊಂದು ಸಾಮಾಜಿಕ,ಸಹಜ ಅನುಭವ.
ನನ್ನ ಮಗ ಪಿಯುಸಿ ಯಲ್ಲಿ ಓದುತ್ತಿರುವಾಗ ಮಗನಿಗೂ, ನನಗೂ ಆದ ಸಂಘರ್ಷವನ್ನು ಇಲ್ಲಿ ಹೇಳ ಬಯಸುತ್ತೇನೆ.

ನಮಗೆ ಮದುವೆಯಾಗಿ ಐದು ವರ್ಷಗಳ ನಂತರ ಹುಟ್ಟಿದ ನನ್ನ ಮಗ ದೇವರ ಪ್ರಸಾದ.ನನಗೆ ತಾಯ್ತನದ ಸುಖವನ್ನು ಸಮೃದ್ಧವಾಗಿ ಉಣಬಡಿಸಿದವನು.ಆಟ,ಪಾಠ ಎಲ್ಲದರಲ್ಲೂ ಮುಂದು.ಹೆತ್ತವರಿಗೆ ಹೆಗ್ಗಣ ಮುದ್ದು,ಆದರೆ, ಅವನು ಅಜ್ಜ-ಅಜ್ಜಿಯರ,ಅಕ್ಕ-ಪಕ್ಕದವರೆಲ್ಲರಿಗೂ ಮುದ್ದು.ಎಲ್ಲಾರೀತಿಯಿಂದಲೂ ನನ್ನ ಹೆಮ್ಮೆಯ ಮಗ.

ಅಮ್ಮನಾಗಿ ನಾನು ಅವನಿಗೆ ಕೊಟ್ಟಿದುದಕ್ಕಿಂತಲೂ, ಮಗನಿಂದ ನಾನು ಅನುಭವಿಸಿದ ಸುಖವೇ ಹೆಚ್ಚು.

ನನ್ನ ಮಗ ಪಿಯುಸಿ ಯಲ್ಲಿ ಇರುವಾಗ ನನ್ನ ಮನೆಯವರಿಗೆ ಅಂಡಮಾನಿಗೆ ವರ್ಗವಾಯಿತು.ಜೀವನದಲ್ಲಿ ಮೊದಲ ಸಲ,ಅದೂ ಮಗ ಪಿಯುಸಿ ಓದುವ ಮಹತ್ತರ ಸಮಯದಲ್ಲಿ ಅವರಿಂದ ದೂರ ಇರಬೇಕಾದ

ಪ್ರಮೇಯ ಬಂತು.ಆ ಸಮಯದಲ್ಲಿ ಮಗನ ಭವಿಷ್ಯದ ಬಗ್ಗೆ ಬಹಳ ಹೆದರಿಕೆ ಆಯ್ತು.ಅಪ್ಪ ಹೇಗೂ ಹತ್ತಿರ ಇಲ್ಲ ಅಂತ ಮಗ ಓದದೇ ಕ್ಲಾಸಿನಲ್ಲಿ ಹಿಂದುಳಿದರೆ ಅಂತ ಆತಂಕ.

೧. ಮೊದಲನೇ ಪ್ರಸಂಗ

ಎರಡನೇ ವರ್ಷದ ಪಿಯುಸಿ ಓದುತ್ತಿರುವಾಗ ಒಂದು ದಿನ ಮಗ ಕಾಲೇಜಿನಿಂದ ಯಾವಾಗಲೂ ಬರುವ ಸಮಯಕ್ಕೆ ಮನೆಗೆ ಬಂದಿರಲಿಲ್ಲ.ಗಾಬರಿಯಿಂದ ಗೇಟ್ ಕಡೆಗೆ ನೋಡುವುದೇ ಆಯಿತು.ಮರುದಿನವೇ ಕೆಮಿಸ್ಟ್ರಿ ಪ್ರಾಕ್ಟಿಕಲ್ ಪರೀಕ್ಷೆ ಇತ್ತು, ಜಂಘಾಬಲವೇ ಉಡುಗಿಹೋಯ್ತು.ಕಾದೂಕಾದೂ ಸಾಕಾಯ್ತು.ದೇವರಿಗೆ ತುಪ್ಪದ ದೀಪ ಹಚ್ಚಿಕೊಡುವ ಹರಕೆಯೂ ಆಯಿತು.ಎಂಟು ಗಂಟೆಯ ಹೊತ್ತಿಗೆ ಆರಾಮವಾಗಿ ಹೆಗಲಿಗೆ ಬ್ಯಾಗ್ ಏರಿಸಿ ಕೊಂಡು ಮಗರಾಯ ಬರ್ತಾ ಇದ್ದಾನೆ.ನನ್ನ ಮೈಯ್ಯೆಲ್ಲಾ ಉರಿದು ಹೋಯ್ತು."ಏನೋ, ನಾಳೆ ಪ್ರಾಕ್ಟಿಕಲ್ ಪರೀಕ್ಷೆ ಇಟ್ಟು ಕೊಂಡು ಇಷ್ಟು ಹೊತ್ತಿಗೆ ಬರುವುದಾ? ನಿನ್ನ ಅಪ್ಪ ಕೇಳಿದರೆ ಏನು ಹೇಳಬೇಕು?". ಅಂತ ಕೇಳಿದೆ."ಪ್ರಾಕ್ಟಿಕಲ್ ಪರೀಕ್ಷೆ ಇರೋದು ನಾಳೆಗೆ.ಇವೊತ್ತು ನನ್ನ ಗೆಳೆಯ ಜನಾರ್ಧನನ ಹುಟ್ಟು ಹಬ್ಬ ಇತ್ತು,ಹೋಗಿದ್ದೆ.ಸ್ವಲ್ಪ ತಡವಾಯಿತು,ಏನೀಗ?"ಅಂದ.ಅವನ ಬೇಜವಾಬ್ದಾರಿತನದ ಉತ್ತರ ಕೇಳಿ ವಿಪರೀತ ಸಿಟ್ಟು ಬಂತು.ಇಡೀ ಶರೀರ ಸಿಟ್ಟಿನಿಂದ, ಅಸಹಾಯಕತೆಯಿಂದ ನಡುಗುತ್ತಿತ್ತು.ಎಂದೂ ಒಂದು ಏಟನ್ನೂ ಕೊಡದ ನಾನು ಜೋರಾಗಿ ಅವನ ಕೆನ್ನೆಗೆ ಬಾರಿಸಿ ಬಿಟ್ಟೆ.ನನಗೂ ಅದು ಆಕಸ್ಮಿಕ, ಮಗನಿಗೂ ಅನಿರೀಕ್ಷಿತ.ಏನೂ ಹೇಳದೇ ಅವನ ಕೋಣೆಗೆ ಹೋದ.ಮತ್ತೆ ಬಂದು ಊಟ ಮಾಡಿ ಮಲಗಿದ.ಆ ದಿನ ರಾತ್ರಿ ಇಬ್ಬರೂ ಅಷ್ಟಾಗಿ ಮಾತನಾಡಲಿಲ್ಲ.ಮಾರನೇದಿನ ಅವನು ಪ್ರಾಕ್ಟಿಕಲ್ ಪರೀಕ್ಷೆ ಮುಗಿಸಿ ಬಂದ.ಪರಿಣಾಮ ಏನಾಯಿತೆಂದು ಕೇಳಿದೆ. ಮುನಿಸಿಕೊಂಡೇ ಹತ್ತಕ್ಕೆ ಹತ್ತು ಅಂದ.ಆಗ ಅಳುವ ಸರದಿ ನನ್ನದಾಗಿತ್ತು,ಅವನ ಕೆನ್ನೆಗೆ ಬಾರಿಸಿದ ನನ್ನ ಕೈಗೆ ನಾನೇ ಪಶ್ಚಾತ್ತಾಪದಿಂದ ಹಳಿದುಕೊಂಡೆ.ನನ್ನ ಮಗನ ಮುಂದೆ ಮೊದಲ ಬಾರಿಗೆ ಕುಸಿದು ಹೋದೆ.

೨. ಎರಡನೇ ಪ್ರಸಂಗ

ಆಗಲೇ ಎರಡನೇ ವರ್ಷದ ಪಿಯುಸಿ ಪರೀಕ್ಷೆ ಮುಗಿದಿತ್ತು.. ಕೆಲಸದ ನಿಮಿತ್ತ

ಯಜಮಾನರು ದೂರದ ಅಂಡಮಾನಿನಲ್ಲಿ,ನನಗೆ ಬ್ಯಾಂಕ್ ಕೆಲಸ ,ಮಗ ಒಬ್ಬನೇ ಮನೆಯಲ್ಲಿ.ನಾನೋ,ಹದಿಹರೆಯದ ಮಕ್ಕಳು ಡ್ರಗ್ಸ್, ಸಿಗರೇಟು,ಮಾದಕದ್ರವ್ಯಗಳಿಂದ ಹಾದಿತಪ್ಪುತ್ತಿರುವ ವಿಷಯಗಳನ್ನು ದಿನಾಲೂ ಟೀವಿಯಲ್ಲಿ ನೋಡುತ್ತಿದ್ದೆ, ದಿನಪತ್ರಿಕೆಯಲ್ಲಿ ಓದುತ್ತಿದ್ದೆ,ಸಾಲದ್ದಕ್ಕೆ ಬ್ಯಾಂಕಿನಲ್ಲಿ ಸಹೋದ್ಯೋಗಿಗಳ ಹತ್ತಿರ ಮಾತನಾಡುವುದೂ ಅದೇ ವಿಷಯ.ನನ್ನ ಮಗನ ಬಗ್ಗೆಯೂ ಅವ್ಯಕ್ತ ಭಯ. ಅವನೂ ಹಾಗೇ ದುರ್ವ್ಯಸನಿ ಆಗಿ ಹಾಳಾಗಿ ಹೋದರೆ!! ತಂದೆ ಬೇರೆ ಹತ್ತಿರವಿಲ್ಲ.ಅವನ ಬಗ್ಗೆ ಏನೋ ಭರವಸೆ ಇದ್ದರೂ, ವಿಶೇಷ ಕಾಳಜಿಯಿಂದ ಕಂಗಾಲಾಗಿದ್ದೆ.

ಒಂದು ದಿನ ಗೆಳೆಯ ಕೊಟ್ಟ ಯಾವುದೋ ಕ್ಯಾಸೆಟ್ ಹಾಕಿಕೊಂಡು ಮಗ ಟೀವಿ ನೋಡುತ್ತಾ ಕುಳಿತಿದ್ದ.ನಾನು ಬಂದ ಕೂಡಲೇ ಟೀವಿ ಆರಿಸಿದ. ಕೇಳಿದರೆ ಏನೂ ಉತ್ತರಿಸದೆ ಎದ್ದುಹೋದ. ಏನೋ ನನ್ನ ಕಣ್ಣು ತಪ್ಪಿಸಿ ನೋಡಬಾರದ್ದನ್ನು ನೋಡುತ್ತಿದ್ದಾನೆ! ನನಗೆ ದೃಢವಾಯಿತು.ಇನ್ನೊಮ್ಮೆ ಅಧಿಕಾರದಿಂದ, ಸ್ವಲ್ಪ ದೊಡ್ಡ ಧ್ವನಿಯಲ್ಲಿ "ಟೀವಿಯಲ್ಲಿ ಏನು ನೋಡುತ್ತಿದ್ದೆ?" ಅಂತ ಕೇಳಿದೆ.ನನ್ನ ಧಾಟಿಯನ್ನು ಅರ್ಥೈಸಿಕೊಂಡು ಅವನು ನನ್ನನ್ನು ಕೇಳಿದ "ನೀನು ನನ್ನ ಅಮ್ಮ,ನೀನೇ ನನ್ನನ್ನು ನಂಬದಿದ್ದರೆ ಪ್ರಪಂಚ ಹೇಗೆ ನಂಬುವುದು?" ಪ್ರಶ್ನೆಗೆ ನಾನು ನಿರುತ್ತರ ಳಾದದ್ದು ಹೌದು.

ಮುಂದೆ ಪಿಯುಸಿ ಯಲ್ಲೂ, ಸಿಇಟಿ ಯಲ್ಲಿಯೂ ಒಳ್ಳೆಯ ಅಂಕಗಳನ್ನು ಗಳಿಸಿ ಅವನ ಇಚ್ಛೆಯಂತೆಯೇ ಇಂಜಿನಿಯರಿಂಗ್ ಮುಗಿಸಿ,ನನ್ನ ಆತಂಕವನ್ನು ದೂರವಾಗಿಸಿ ನಿರ್ವ್ಯಸನಿಯಾಗಿ ಅವನ ಬದುಕನ್ನು ಒಳ್ಳೆಯ ರೀತಿಯಲ್ಲಿ ಕಟ್ಟಿಕೊಂಡ ರೀತಿ ನೋಡಿದಾಗ,ಅನವಶ್ಯಕವಾಗಿ ಮಗನ ಬಗ್ಗೆ ಅತಿಯಾದ ಕಾಳಜಿ, ವಿನಾಕಾರಣ ಅನುಮಾನ, ಪಟ್ಟೆನೇನೋ ಅನ್ನಿಸುತ್ತಿದೆ.ಆದರೆ ಮಕ್ಕಳ ಹದಿಹರೆಯದ ಕಾಲಘಟ್ಟದಲ್ಲಿ ಪಾಲಕರ ತುಮುಲ, ಕಾಳಜಿ,ಆತಂಕ ಸಹಜವಾದುದು.ಅದರಲ್ಲೂ ಯಜಮಾನರ ವರ್ಗಾವಣೆಯ ಸಮಯದಲ್ಲಿ ನಾನು ಒಬ್ಬಳೇ ಅನುಭವಿಸಿದ ಮಾನಸಿಕ ತೊಳಲಾಟ ಬಹಳ ತೀವ್ರವಾಗಿತ್ತು.ತಾಯಿಯ ಸೆರಗು ಯಾವಾಗಲೂ ಒದ್ದೆಯಾಗಿಯೇ ಇರುತ್ತದಂತೆ.

ಆದರೆ ಪ್ರತಿಯೊಬ್ಬರಿಗೂ ಅವರವರ ಬದುಕನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ ಹಾಗೂ ಶಕ್ತಿ ಇರುತ್ತದೆ.ಅದನ್ನು ನಾವು ಒಪ್ಪಿಕೊಳ್ಳಬೇಕು ಅಷ್ಟೇ.

3. ಎಲ್.ಗಿರಿಜಾರಾಜ್



ಸಮಸ್ತ ಜೀವ ಸಂಕುಲವ ಬೆಸೆವ ಪ್ರೀತಿ

ಇಂದು ಎಂದಿಗಿಂತ ಎಲ್ಲ ರೀತಿಯಲ್ಲೂ ಮನುಷ್ಯ ಅಸ್ವಸ್ಥನಾಗಿದ್ದಾನೆ. ಮಣಗಟ್ಟಲೆ ಹಣದ ಬೇಟೆಯಲ್ಲೂ ಶಾಂತಿ ನೆಮ್ಮದಿ ಕಾಣದೆ ಅದರಿಂದಲೂ ವಿಮುಖನಾಗುತ್ತಿದ್ದಾನೆ. ಹಾಗಾದರೆ ಯಾವುದು ಸಮಸ್ತ ಜೀವ ಕುಲವನ್ನು ಬೆಸೆವ ಪ್ರೀತಿ!

ಇಂದು ಧರೆಯ ಮೇಲಿನ ಜೀವಿಗಳನ್ನು ಉಳಿಸಿ ಬಾಳಿಸಲು ಬೇಕಾಗಿರುವ ಪ್ರೀತಿ ಯಾವುದು? ಬುದ್ಧ ದೇವನ ತಾಯಿಯಂತಹ ನಿಷ್ಕಲ್ಮಷ ಪ್ರೀತಿ! ಕೊಲ್ಲುವೆನೆಂದು ಬರುವ ಜೀವಿಯನ್ನ ಅಪ್ಪಿಕೊಳ್ಳುವ ಪ್ರೀತಿ! ಅಂಗುಲಿಮಾಲನ ಕ್ರೌರ್ಯವನ್ನು ಸೋಲಿಸಿದ್ದು ಇದೇ ಪ್ರೀತಿ, ಈ ನೆಲಕ್ಕಾಗಿ ಅಣ್ಣನ ಮೇಲೆ ಕತ್ತಿ ಯೆತ್ತಿದೆನಲ್ಲ ಎಂದು ನಿರ್ಲಿಪ್ತನಾಗಿ, ಮೋಹ ಗಳನ್ನು ಕಳಚಿ ತ್ಯಾಗ ಶೀಲ ಮನಸು ಬೆಳೆಸಿ ಕೊಂಡ ಬಾಹುಬಲಿ ದರ್ಶಿಸಿದ ಪ್ರೀತಿ! ಅಹಿಂಸೆಯ ಮಹಾ ಅಸ್ತ್ರದಿಂದ ಶತ್ರುಗಳನ್ನು ಶರಣಾಗುವಂತೆ ಮಾಡಿದ ಗಾಂಧಿಯ ಮಾನವತಾ ಪ್ರೀತಿ! ಜಾತಿ-ಮತ, ಉಚ್ಚ ನೀಚ ಎಂಬ ಮೌಢ್ಯಗಳ ವಿರುದ್ಧ ವೈಚಾರಿಕ ಕ್ರಾಂತಿ ಹುಟ್ಟು ಹಾಕಿದ ಬಸವೇಶ್ವರರ ಆಧ್ಯಾತ್ಮ ಮಿಳಿತ ಶುದ್ಧ ಪ್ರೀತಿ! ಯಾವುದೋ ದೇಶದಲ್ಲಿ(ಇಟಲಿ)ಹುಟ್ಟಿ ಇಲ್ಲಿ ಬಂದು ಬೀದಿಯ ಬದಿಯಲ್ಲಿ,ದಾರುಣ ಸ್ಥಿತಿಯಲ್ಲಿ ನರಳಾಡುವವ ಕುಷ್ಠರೋಗಿಗಳನ್ನು, ಬದುಕಿನ ಅಂತಿಮ ಸಮಯದ ಕೊನೆಯ ದಿನಗಳಲ್ಲಿ ಇರುವವರನ್ನು ಎದೆಗಪ್ಪಿ ಎತ್ತಿಕೊಂಡುಸೇವೆ ಮಾಡಿದ ಆ ಮಹಾತಾಯಿ ಮದರ್ ಥೆರೇಸಾರಂಥ ಪ್ರೀತಿ!

ಅವರೆಲ್ಲ ಮತ್ತೆ ಹುಟ್ಟಿ ಬರಬೇಕೆಂದೇನೂ ಇಲ್ಲ. ಈ ಪ್ರಪಂಚದ ನಾನಾ ಮೂಲೆಗಳಲ್ಲಿ ಇಂಥ ಚಿನ್ನ ದ ಮನಸಿನ ವ್ಯಕ್ತಿಗಳು ಇದ್ದೇ ಇರುವರು. ಅಂಥವರನ್ನು ಒಗ್ಗೂಡಿಸಿ ನಮ್ಮ ಮುಂಚೂಣಿಯಲ್ಲಿರಿಸಿ ನಾವೂ ಅವರ ಜೊತೆಗೆ ಸೇರಿ, ಬಹುತೇಕರ ಮನದಲ್ಲಿ ಕೆಸರಿ ನಂತೆ ಹುದುಗಿರುವ ದುರ್ನಾತ ಹೊರಡಿಸು ತ್ತಿರುವ ಹಳೆಯ ಕೊಳಕುವಿಚಾರಗಳು ಧನ ಪಿಶಾಚಿತನ, ಸ್ವಾರ್ಥಗಳನ್ನು ಹೊಡೆದೋಡಿಸಿ ನಿರ್ಮಲ ಮಾನವ ಪ್ರೀತಿ ಬಿತ್ತಬೇಕಾಗಿದೆ. ಅದು ಪ್ರತಿ ಮಾನವನ ಹೃದಯಾಂತರಾಳದಲ್ಲಿ ಇದೆ, ಅದರ ಮೇಲೆ ಸ್ವಾರ್ಥ,

ಮೋಹ ಗಳ ಜಿಡ್ಡು ಬಳಿಯಲ್ಪಟ್ಟು, ಆ ಪ್ರೀತಿ ಜ್ಯೋತಿ ಪ್ರಕಾಶಿಸುತ್ತಿಲ್ಲ. ಅದು ಪ್ರಕಾಶಿಸುವಂತೆ ಮಾಡಬೇಕಾದವರೇ ಬುದ್ಧ, ಬಸವೇಶ್ವರ, ಗಾಂಧಿಯಂತಹ ನಿರ್ಮಲ ಮನದ ವ್ಯಕ್ತಿಗಳು ಮಾಡಬೇಕಾಗಿರುವ ಮಹತ್ ಕೆಲಸ.

ಮಾನವನಲ್ಲಿ ನಿಜ ಪ್ರೀತಿ ನೆಲೆಯಾದರೆ, ಸಮಸ್ತ ಜೀವಸಂಕಲ ಅಂದರೆ ಪಶು, ಪಕ್ಷಿ ಪ್ರಾಣಿ ಗಿಡ ಮರಗಳು ಎಲ್ಲವನ್ನೂ ಪ್ರೀತಿ ಸುವುದರಲ್ಲಿ ಸಂದೇಹವೇ ಇಲ್ಲ. ಅಂಥ

ಪ್ರೀತಿಯ ಬಂಧನ ಮಾತ್ರ ಈ ಭುವಿಯನ್ನು ಸ್ವರ್ಗ ಮಾಡಬಲ್ಲುದು. ವರ್ತಮಾನದ ವ್ಯಂಗ್ಯವೆಂದರೆ ಯಾವ ಮಕ್ಕಳಿಗಾಗಿಹೊಟ್ಟೆ ಬಟ್ಟೆ ಕಟ್ಟಿ ಹೊರಗಿನ ಸಾಮಾಜಿಕರಿಗೆ,ಒಂದಿಷ್ಟೂ ಕೊಡದೆ ಕೃಪಣತೆಯಿಂದ ಆಸ್ತಿ ಮಾಡಿಡುತ್ತಾರೋ, ಕೊನೆಯ ಅವರು ನೋವನ್ನಷ್ಟೇ ಉಣ್ಣ ಬೇಕಾಗುತ್ತದೆ, ಸುಪುತ್ರರನ್ನು ಪಡೆದ ಕೆಲವು ಭಾಗ್ಯವಂತರನ್ನು ಹೊರತುಪಡಿಸಿ... ಹೆತ್ತವರ ತ್ಯಾಗದ ಒಂದಿಷ್ಟೂ ಅರಿವೇ ಆಗದಂತಹ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ, ಹೆತ್ತವರಿಗೆ ಭ್ರಮನಿರಸನ ಇಂದು ಎಂದಿಗಿಂತ ಹೆಚ್ಚಾಗಿದೆ

ಎಲ್ಲಾ ನನಗೇ ಬೇಕು ಎಂಬ ಸ್ವಾರ್ಥ ದುರ್ಭಾವನೆಗಳೇ ಮನುಷ್ಯ ಮನುಷ್ಯರ ನಡುವೆ ವೈರತ್ವದ ಗೋಡೆಗಳನ್ನು.ಎಬ್ಬಿಸಿದೆ. ಉದಾ: ಅವನೇಕೆ ನಿನ್ನನ್ನು ದ್ವೇಷಿಸುತ್ತಾನೆ?ಅವನಿಗೆ ಸೇರಬೇಕಾದ ಯಾವುದರ ಮೇಲೋ ನಿನ್ನ ಕಣ್ಣು ಬಿದ್ದಿದೆ, ಮೊದಲು ಅದನ್ನು ಅವನಿಗೇ ಬಿಟ್ಟು, ನನ್ನದೂ ಒಂದಿಷ್ಟು ನಿನಗೇ ಕೊಟ್ಟಬಿಡುತ್ತೇನೆ ಅನ್ನು ಸಾಕು, ಸ್ಪಂದಿಸುವ ಮನಸಿರುವವನು ಏಕೆ ಸ್ಪಂದಿಸುವುದಿಲ್ಲ?,ಆರ್ದ್ರನಾಗುವುದಿಲ್ಲ? ಅವನಲ್ಲೂ ಹುದುಗಿರುವ ಒಳ್ಳೆಯತನ ಏಕೆ ಜಾಗೃತಗೊಳ್ಳುವುದಿಲ್ಲ?ಅದನ್ನು ಬಿಟ್ಟು ನಾನಾ ರೀತಿಯಲ್ಲಿ ಪರಸ್ಪರ ನಿಂದಿಸಿ ಹೋರಾಟಕ್ಕೆ ಇಳಿದರೆ ಜಾಗೃತವಾಗಿರುವ ರಾಕ್ಷಸತ್ವ ಇನ್ನಷ್ಟು ಹೆಚ್ಚಾಗುತ್ತದೆ ಅಷ್ಟೇ!

ಅರೆ!ನೀನು ಕತ್ತಿಯೆತ್ತಿದರೆ ಅವನೇಕೆ ಸುಮ್ಮನಿರುತ್ತಾನೆ? ಅವನೂ ಕತ್ತಿ ಹಿಡಿಯುತ್ತಾನೆ. ಜಾಗತಿಕ ಮಟ್ಟದಲ್ಲಿ ಆಗಿರುವ ಕದನಗಳೆಲ್ಲ ಇದೇ ರೀತಿ. ಹಿಂಸೆಗೆ ಹಿಂಸೆ, ದ್ವೇಷಕ್ಕೆ ದ್ವೇಷ, ಮರಿಯಿಡುತ್ತಾ ಹೋಗುತ್ತದೆ. ಇದಕ್ಕೆ ಕೊನೆಯೆಲ್ಲಿದೆ? ಇಬ್ಬರ ನಾಶ, ಅಳವು ಅಷ್ಟೇ!ಪ್ರೀತಿಯೂ ಕೂಡ ಒಂದು ಅಸ್ತ್ರವೇ! ಅದನ್ನು ಯಾವಾಗ ಎಲ್ಲ ಹೇಗೆ ಉಪಯೋಗಿಸಬೇಕೆಂಬ ಅರಿವಿರಬೇಕು ಅಷ್ಟೇ! ಇದನ್ನೇ ಗಾಂಧಿಆಂತರಂಗಿಕ ಸುಧಾರಣೆ ಎಂದದ್ದು.

ಹೂ ಹಣ್ಣುಗಳನ್ನು ಕೊಡುವ. ಗಿಡಮರಗಳ ಎಲೆ,

ಕೊಂಬೆಯನ್ನೊಮ್ಮೆ ಪ್ರೀತಿಯಿಂದ ನೇವರಿಸಿ ನೋಡಿ, ಒಂದು ರೀತಿ ಪುಳಕ ಉಂಟಾಗುತ್ತದೆ. ಮುದ್ದಾದ ಅರವಿಂದವುಳ್ಳ ಹಸು ಈ ಧರೆಯ ಕಾಮಧೇನು! ಅದರ ಮುಖ ನೋಡಿದವರಿಗೆ ನಮಿಸಬೇಕೆನ್ನಿಸು ತ್ತದೆಯೇ ಹೊರತು ಕಡಿದು ತಿನ್ನ ಬೇಕೆನಿಸುವುದಿಲ್ಲ. ಆದರೆ ಅಧಮ ಮಾನವ ಅದೂ ಮಾಡಿ ಬಿಟ್ಟಿದ್ದಾನೆ . ಅದನ್ನು ಗೋಮಾತೆ ಎಂದು ಕರೆಯುತ್ತೇವೆ! ಅದು ನಮ್ಮನ್ನು ನೋಡಿ "ನೀನಾರಿಗಾದೆಯೋ ಎಲಮಾನವ, ಹರಿ ಹರಿ ಗೋವು ನಾನು" ಎಂದು ಕೇಳುತ್ತದೆ" ಎಂದು ಕವಿ ಮಾರ್ಮಿಕವಾಗಿ ಹೇಳುತ್ತಾನೆ. ನಿಯತ್ತಿನ ನಾಯಿಯನ್ನು ಎಂದಿಗೂ ಮನುಷ್ಯನಿಗೆ ಹೋಲಿಸಲು ಸಾಧ್ಯವಿಲ್ಲ! ಎಂಬಷ್ಟರ ಮಟ್ಟಿಗೆ ಮನುಜ ಅನೀತಿಯೆಡೆಗೆ ಕೈ ಚಾಚಿದ್ದಾರೆ. ಅದಕ್ಕೇ ಏನೋ ಮನುಷ್ಯ ತಾನೇ ತಂದುಕೊಂಡಿರುವ ಪ್ರೀತಿಯಕೊರತೆ ಯನ್ನು ತುಂಬಿಸಿಕೊಳ್ಳುವುದಕ್ಕೆ ಸಾವಿರಾರು ರೂಪಾಯಿಗಳ್ನು ತೆತ್ತು ಜಾತಿನಾಯಿಗಳನ್ನು ತಂದು ಅದನ್ನು ಮಕ್ಕಳಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿರುವುದು ಅದರ ನಿಸ್ವಾರ್ಥ ಪ್ರೀತಿಗಾಗಿ.....

ಇಂದು ಪ್ರೀತಿಗಾಗಿ ಹಿಂದೆಂದಿಗಿಂತ ಮನುಷ್ಯ ಹಸಿದು ಕುಂತಿದ್ದಾನೆ..ಮನೆ ತುಂಬ ಸದಸ್ಯರಿದ್ದರೂ ಸೌಹಾರ್ದವೆನ್ನುವುದು ಕೃತಕವಾಗುತ್ತಿದೆ. ಮಣಗಟ್ಟಲೆ ಹಣ, ಐಶ್ವರ್ಯ,ಚಿನ್ನ,ಯಾವುದೂ ಅವನಿಗೆ ಶಾಂತಿ,ನೆಮ್ಮದಿ ನೀಡುತ್ತಿಲ್ಲ. ....

"ಮೇಲ್ನೋಟಕ್ಕೆ ನನ್ನಷ್ಟು ನೆಮ್ಮದಿ, ಸುಖ ಯಾರಿಗೂ ಇಲ್ಲ" ಎಂಬ ಸಿರಿವಂತಿಕೆಯ ಗತ್ತು ತೋರಿದರೂ ಅವನ ಆತ್ಮದ ತೊಳಲಾಟ ಅವನಿಗೇ ವೇದ್ಯ!

*ಕರುಣಾಳು ಬಾ ಬೆಳಕೆ ಮುಸುಕಿದೀ
ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು"

4. ವಿಠ್ಠಲ್. ಇಜೇರಿ



ಕಥಾ ಪ್ರಪಂಚ : ಮಕ್ಕಳ ಕತೆಗಳು

21 ನೇ ಶತಮಾನವನ್ನು ಜ್ಞಾನ ಪ್ರಧಾನ ಸಮಾಜವೆಂದು ಹೇಳಲಾಗುತ್ತಿದೆ. ಯಾಕೆಂದರೆ ಬಂಡವಾಳ ಶಾಹಿಯ ಬದಲು ಜ್ಞಾನವು ಪ್ರಾಥಮಿಕ ಉತ್ಪಾದನಾ ಮೂಲವಾಗಿ ಹೊರ ಹೊಮ್ಮುತ್ತಿದೆ.

ನಾವು ಜ್ಞಾನ ಸಂಪಾದನೆಯ ವಿಧಾನಗಳ ಬಗ್ಗೆ ಲಕ್ಷ ವಹಿಸಬೇಕಾಗಿದೆ. ಈ ಜ್ಞಾನದ ಬಳಕೆಯು ಮಕ್ಕಳ ವಯಕ್ತಿಕ, ಸಮಾಜದ, ಹಾಗೂ ದೇಶದ ಅಭ್ಯುದಯಕ್ಕೆ ಸಹಾಯಕವಾಗಬೇಕು.ಬುದ್ಧಿ ಶಕ್ತಿಯ ಬೆಳವಣಿಗೆ ಭಾವನೆಗಳ, ಧ್ಯೇಯಗಳ ಮತ್ತು ಸಂಸ್ಕಾರಗಳ ಜೊತೆಗೆ ಸಾಗಬೇಕು. ಸ್ವಾಮಿ ವಿವೇಕಾನಂದರು ಹೇಳಿದರು ಪವಿತ್ರತೆ ಇಲ್ಲದ ಜ್ಞಾನ ಮತ್ತು ಶಕ್ತಿಗಳು ಮನುಷ್ಯನನ್ನು ರಾಕ್ಷಸನನ್ನಾಗಿಸುತ್ತವೆ.

ಮನುಷ್ಯ ಒಳ್ಳೆಯವನಾಗಬೇಕೆಂಬುದು ಶಿಕ್ಷಿತ ಮನುಷ್ಯನ ಅವಿಭಾಜ್ಯ ಲಕ್ಷಣವಾಗಬೇಕೇ, ಹೊರತು ಆಯ್ಕೆಯ ಲಕ್ಷಣವಾಗಬಾರದು. ವಿದ್ಯಾರ್ಥಿಗಳ ಮಿದುಳನ್ನು ಅವಶ್ಯಕತೆಗಿಂತ ಹೆಚ್ಚು ತುಂಬಬಾರದು. ಮಕ್ಕಳಿಗೆ ಮೌಲಿಕ ಶಿಕ್ಷಣ ನೀಡುವುದು ಅವರ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು. ನಮಗೆ ಬೇಕಾದದ್ದು ಜೀವನ ನಿರ್ಮಾಣ, ಮನುಷ್ಯ ನಿರ್ಮಾಣ,, ಚಾರಿತ್ರ್ಯ ನಿರ್ಮಾಣ. ಆ ಮೂಲಕ ಉದಾತ್ತ ಭಾವಗಳನ್ನು ಕರಗತ ಮಾಡಿಕೊಳ್ಳಬೇಕು. ತನ್ಮೂಲಕ ವೈಚಾರಿಕತೆ, ಮನಸ್ಸಿನ ಏಕಾಗ್ರತೆ, ಹೃದಯವಂತಿಕೆ, ನಾಗರಿಕ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆ, ಧಾರ್ಮಿಕ ಸಾಮರಸ್ಯ ವಿದ್ಯಾರ್ಥಿಗಳಲ್ಲಿ ಮೈಗೂಡಬೇಕು.

ಈ ಚಿಂತನೆಗಳ ಹಿನ್ನೆಲೆಯಲ್ಲಿ ರಾಮಕೃಷ್ಣ ಆಶ್ರಮವು ಮಕ್ಕಳಿಗಾಗಿ ಹಲವು ಪುಸ್ತಕಗಳನ್ನು ಹೊರ ತಂದಿದ್ದಾರೆ. ಬಹಳ ತಂದೆ ತಾಯಂದಿರು ಮಕ್ಕಳಿಗೆ ಈ ಕ್ರಮದಲ್ಲಿ ಪ್ರಕಟವಾದ ಪುಸ್ತಕಗಳನ್ನು ದೊರಕಿಸಿ ಕೊಟ್ಟಿದ್ದಾರೆ. ಪ್ರಸ್ತುತ ಮಕ್ಕಳಿಗಾಗಿ ಕಥೆಗಳು ಭಾಗ 1 ಸ್ವಾಮಿ ರಾಘವೇಶಾನಂದರಿಂದ ಸಂಪಾದಿತ ಕೃತಿ ಮೊದಲ ಮುದ್ರಣ 2007, ಈಗ ಏಳು ಪುನರ್ ಮುದ್ರಣಗಳನ್ನು ಕಂಡಿದೆ. ದೇಶದ ವಿದೇಶದ ಕೆಲವು ಸಂತರ, ಮಹಾತ್ಮರ ಕಥೆಗಳಿದ್ದು ಸರಳವಾಗಿ ಓದಿಸಿಕೊಂಡು ಹೋಗುತ್ತವೆ. ದೊಡ್ಡವರೂ ಇವನ್ನು ಓದಿದಾಗ, ಅರೇ, ಇದನ್ನು ಓದಿರದಿದ್ದರೆ ಅಷ್ಟು ಮಟ್ಟಿಗೆ ದಡ್ಡನಾಗಿ ಉಳಿಯುತ್ತಿದ್ದೆ ಅಂದುಕೊಳ್ಳಬಹುದಾದ ಕತೆಗಳು. ಅದು ಈ ಕತೆಗಳ ಮಹತ್ವ.

ಇಲ್ಲೊಂದು ಚಿಕ್ಕ ಕತೆ ಇದೆ :

ಗುರುನಾನಕರ ಬಳಿ ಭಗವಂತನ ಬಗ್ಗೆ ನಂಬಿಕೆ ಇಲ್ಲದ ಒಬ್ಬ ಕಪಟ ಸನ್ಯಾಸಿ ಬಂದಿದ್ದನು. ಅವನು " ಗುರುಗಳೇ, ನನಗೆ ಕೆಲವು ದಿನ ಸಾಧುಗಳೊಂದಿಗೆ ಕಾಲ ಕಳೆಯಬೇಕಿದೆ. ಇಲ್ಲಿ ಅಂಥ ಸಾಧುಗಳು ಯಾರಿದ್ದಾರೆ? ಎಂದು ವಿಚಾರಿಸಿದ. ಅಲ್ಲಿ ಅನೇಕ ಸಾಧುಗಳಿದ್ದರೂ ಗುರು ನಾನಕರು ಅವನಿಗೆ " ನೀನು ನನ್ನ ಶಿಷ್ಯನೊಬ್ಬನಿದ್ದಾನೆ ಬಡಗಿ ಬೈಲಾಲೋ ಅವನ ಬಳಿಗೆ ಹೋಗು " ಎಂದು ತಿಳಿಸಿದರು.

ಕಪಟ ಸಾಧು ಬೈಲಾಲೋ ಮನೆಗೆ ಸೇರಿದಾಗ ಅವನು ಸ್ವಾಗತಿಸಿ ಚಾಪೆಯೊಂದರ ಮೇಲೆ ಕೂಡಿಸಿ " ನನಗೆ ಹೊರಗಡೆ ಒಂದು ಗಂಟೆ ಕೆಲಸವಿದೆ, ದಯಮಾಡಿ ಕುಳಿತುಕೊಳ್ಳಿ " ಎಂದು ಹೇಳಿ ಹೊರಟು ಹೋದ. ಕಪಟ ಸಾಧುವಿಗೆ ಬೇಸರವಾದರೂ ಸುಮ್ಮನೆ ಕುಳಿತಿದ್ದು, ಸ್ವಲ್ಪ ಸಮಯ ಕಳೆದು ಹೊರಗೆ ಬೈಲಾಲೋ ಕೆಲಸ ಮಾಡುವಲ್ಲಿಗೆ ಬಂದ. ಕಪಟ ಸಾಧು ಬೈಲಾಲೋವಿಗೆ " ಏನು ಮಾಡುತ್ತಿದ್ದೀರಿ? " ಎಂದು ಪ್ರಶ್ನಿಸಿದ. ಬೈಲಾಲೋ " ನನ್ನ ಮಗ ತನ್ನ ಪತ್ನಿಯನ್ನು ಕರೆತರಲು ಆಕೆಯ ತವರಿಗೆ ಹೋಗಿದ್ದಾನೆ. ಮರಳಿ ಬರುವಾಗ ದಾರಿಯಲ್ಲಿ ಎತ್ತಿನ ಗಾಡಿಯ ಚಕ್ರಕ್ಕೆ ಸಿಕ್ಕು ಮರಣ ಹೊಂದುವನು. ಅವನ ಶವ ಸಂಸ್ಕಾರಕ್ಕಾಗಿ ಚಟ್ಟ ತಯಾರಿಸುತ್ತಿದ್ದೇನೆ " ಎಂದು ಹೇಳಿದ.

ಸಾಧು " ನಿನ್ನ ಮಗನಿಗೆ ಅಪಘಾತವಾಗುವುದು ಮುಂಚೆಯೇ ನಿನಗೆ ತಿಳಿದಿದ್ದರೆ, ಅವನಿಗೆ ವಿಷಯ ತಿಳಿಸಿ ಬದುಕಿಸಬೇಕಿತ್ತು " ಅನ್ನಲು ಬೈಲಾಲೋ " ಆ ದೇವನ ಇಚ್ಛೆ ಹೇಗಿರುತ್ತೋ ಹಾಗೆ ಘಟಿಸುವುದು. " ಎಂದುತ್ತರಿಸಿದ. ಆಗ ಸಾಧು " ನೀನು ನಿನ್ನ ಮಗನನ್ನು ಪ್ರೀತಿಸುತ್ತಲಿಲ್ಲ, ಅದಕ್ಕಾಗಿ ಅವನನ್ನು ಕಾಪಾಡುವ ಬದಲು ಅವನು ಶವವಾಗಿ ಬರುವುದನ್ನು ಕಾಯುತ್ತಿರುವೆ, ನೀನೊಬ್ಬ ಕ್ರೂರಿ " ಎಂದು ನುಡಿದ. ಬೈಲಾಲೋ " " ಎಚ್ಚರಿಕೆಯಿಂದ ಮಾತನಾಡು, ಅದೋ ಅಲ್ಲಿ ಎದುರಿಗೆ ಮರ ಕಾಣುತ್ತಿದೆಯಲ್ಲ, ಇಂದಿನಿಂದ ಎಂಟನೇ ದಿನ ಆ ಮರಕ್ಕೆ ನಿನ್ನನ್ನು ನೇಣು ಹಾಕುತ್ತಾರೆ, ನಿನ್ನ ಮರಣದ ಬಗ್ಗೆ ತಿಳಿಸಿದ್ದೇನೆ, ಹೋಗು ಸಾಧ್ಯವಾದರೆ ಬದುಕಿಕೋ " ಅಂದ. ಕಪಟ ಸಾಧು ಗಡ ಗಡ ನಡುಗಿ ಹೋದ. ಬಡಗಿ ಬೈಲಾಲೋ ಮಾತು ನಿಜವಾದರೆ?. ಕಪಟ ಸಾಧು ಆದಷ್ಟು ಬೇಗ ಈ ಸ್ಥಳದಿಂದ ದೂರ ಹೋಗಬೇಕೆಂದು ಓಡ ತೊಡಗಿದ. ನಾಲ್ಕು ದಿನ ಓಡಿ ಓಡಿ ಸಾಕಷ್ಟು ದೂರ ಬಂದಾಗ, ಈಗ ಪರವಾಗಿಲ್ಲ, ಸಾಕಷ್ಟು ದೂರ ಬಂದಿದ್ದೇನೆ, ಇನ್ನು ಭಯವಿಲ್ಲ. ಎಂದು ಅಲ್ಲಿಯೇ ಮರದ ಬಳಿ ಇದ್ದ ಬಾವಿಯ ನೀರು ಕುಡಿದು ಸ್ವಲ್ಪ ವಿಶ್ರಮಿಸಿದ. ಸಾಕಷ್ಟು ದಣಿದಿದ್ದ ಅವನು ಶೀಘ್ರವೇ ನಿದ್ದೆ ಹೋದ. ಸಾಧು ತುಂಬಾ ಹೊತ್ತು

ನಿದ್ರಿಸಿ ಎಚ್ಚರವಾದಾಗ ಅವನಿಗೆ ಆ ಅಪರಿಚಿತ ಕಾಡಿನಲ್ಲಿ ದಿಕ್ಕು ತಿಳಿಯದಂತಾಗಿ ತಾನು ಬಂದ ದಾರಿಯಲ್ಲಿಯೇ ನಡೆದು ಪುನ್ಹ ತಾನು ಹೊರಟ ಜಾಗೆಗೆ ಬಂದು ಅಲ್ಲಿದ್ದ ಮರದ ಅಡಿಗೆ ಬಂದು ವಿಶ್ರಾಂತಿ ತೆಗೆದುಕೊಳ್ಳುತ್ತ ನಿದ್ದೆಗೆ ಮೊರೆಹೋದ.

ಸ್ವಲ್ಪ ಸಮಯ ಕಳೆದಾಗ ಕೆಲವು ಕಳ್ಳರು

ಪಕ್ಕದ ಊರಿನಲ್ಲಿ ಕಳ್ಳತನ ಮಾಡಿ ಆ ಮರದ ಆಚೆ ಪಕ್ಕದಲ್ಲಿ ಕುಳಿತು ಕದ್ದ ಮಾಲನ್ನೆಲ್ಲ ಪಾಲು ಮಾಡಿಕೊಂಡರು. ಕೊನೆಗೊಂದು ಕಂಠಿಹಾರ ಉಳಿದು ಹೋಯಿತು. ಅದನ್ನು ಮುರಿಯಲು ಇಚ್ಛೆಸದೆ ಅದನ್ನು ಆ ಇನ್ನೊಂದು ಪಕ್ಕದಲ್ಲಿ ಮಲಗಿದ ಸಾಧುವಿನ

ಕತ್ತಿಗೆ ಹಾಕಿ ಹೋದರು. ಹಿಂದೆಯೇ ಕಳ್ಳರನ್ನು ಹುಡುಕಿಕೊಂಡು ಬಂದ ರಾಜ ಸೈನಿಕರು ಸಾಧುವಿನ ಕತ್ತಿನಲ್ಲಿಯ ಕಂಠಿಹಾರ ಗುರುತಿಸಿ ರಾಜನ ಬಳಿ ಎಳೆದೊಯ್ದರು. ಕಪಟ ಸಾಧು ತಾನು ಕಳ್ಳನಲ್ಲ, ಕಂಠಿಹಾರ ಅದೇಗೆ ಬಂತು ತಿಳಿಯದು ಎಂದು ವಾದಿಸಿದರೂ ಅರಸ ಮನ್ನಿಸದೆ " ಹೋಗಿ ಇವನನ್ನು, ಅವನು ಎಲ್ಲಿ ನಿಮ್ಮ ವಶಕ್ಕೆ ಸಿಕ್ಕನೋ ಅದೇ ಮರಕ್ಕೆ ನೇಣು ಹಾಕಿ " ಎಂದು ಅಜ್ಞಾಪಿಸಿದ. ಬೈಲಾಲೋ ಭವಿಷ್ಯ ನಿಜವಾಗುವ ಹಂತಕ್ಕೆ ಬಂತು. ನೇಣು ಹಾಕುವ ಮೊದಲು ಸಾಧುವಿಗೆ ನಿನ್ನ ಕೊನೆಯ ಇಚ್ಛೆ ಏನು? ಎಂದು ಕೇಳಿದರು. ಸಾಧು " ಬಡಗಿ ಬೈಲಾಲೋ ಬಳಿ ಮಾತನಾಡಲು ಬಯಸಿದ. ಬಡಗಿಯನ್ನು ಕರೆಸಿದರು. ಸಾಧು " ಕ್ಷಮಿಸಿ, ನೀವು ಮಹಾತ್ಮರು, ನಾನು ಅರಿಯದಾದೆ. ದೇವರ ಇಚ್ಛೆಯ ಇದಿರು ನಮ್ಮದೇನೂ ನಡೆಯದೆಂದು ಅರ್ಥವಾಗಿದೆ. ನನ್ನನ್ನು ಕಾಪಾಡಿ " ಅಂದ. ಬೈಲಾಲೋ " ಸೈನಿಕರಿಗೆ ಅರ್ಧ ಗಂಟೆ ಕಾಲಾವಕಾಶ ಕೊಡಿ, " ಎಂದು ಹೇಳಿ ನಾನಕರನ್ನು ಕುರಿತು ಧ್ಯಾನ ಮಾಡತೊಡಗಿದರು. ಆ ವೇಳೆಗೆ ನಿಜವಾದ ಕಳ್ಳರು ಮಾಲು ಸಹಿತ ಸಿಕ್ಕಿ ಬಿದ್ದಿದ್ದಾರೆ ಎಂಬ ಸಮಾಚಾರ ಬಂತು. ಕಪಟ ಸಾಧುವಿನ ಪ್ರಾಣ ಉಳಿಯಿತು.

ನಾವೆಲ್ಲ ಪರಾದೀನ, ಎಲ್ಲವೂ ಅವನ ಇಚ್ಛೆಯಂತೆ ನಡೆಯುವುದು, ನಾವು ಸದ್ವಿಚಾರ, ಸದ್ವರ್ತನೆ ಮತ್ತು ಗುರುಗಳ ಅನುಗ್ರಹ ದೊರಕಿಸಿಕೊಂಡು, ಅವನನ್ನು ಅನುಸರಿಸಬೇಕಾದುದೊಂದೇ ನಾವು ಮಾಡ ಬಹುದಾದ ಕೆಲಸ.

ಎಲ್ಲವೂ ನಿನ್ನೀಚ್ಛೆಯಂತೆ ನಡೆದಿರಲು
ನೀನೇ ಭವ ಸಾಗರವ ದಾಟಿಸುವ ಹಡಗು*

ಎಂದು ಆ ಭಗವಂತನ ಮೊರೆಯೋಗಬೇಕು.

5. ರಾಧಿಕಾ ವಿ ಗುಜ್ಜರ್



ಬಳೆಗಳು

ಸಾಲುಗಳಲ್ಲಿ ಸೆರೆ ಕುಳಿತವೆಲ್ಲ
ಮಿಣು ಮಿಣುಕಿ ನಗೆ ಚೆಲ್ಲುತ
ಕೋರೈಸಿ ಎನ್ನ ಕರೆಯುವವು
ಸ್ನೇಹಕೆಂದೇ ಸೃಷ್ಟಿಯಾದವುಗಳು



ತಾನುರಿದ ಝುಳಕ್ಕೆದೆಗುಂದದೆ
ಧಾಡಸಿ ಮೈಗೂಡಿಸಿಕೊಳ್ಳದೆ
ಭಟ್ಟಿಯಲ್ಲಿ ಮೂಡಿ ಎದ್ದು
ದುಂಡಗೆ ತಿದ್ದಿ ತೀಡಿಸಿಕೊಂಡವು
ನುಣುಪೆಂಬ ಹೊರ ಲಾವಣ್ಯವ
ನಯ ನಾಜೂಕೆಂಬ ಒಳ ಗುಣವ
ತೊಟ್ಟವಳಿಗೆ ದಾಟಿಸುವವು
ತುಂಡಾಗುವವರೆಗೂ ಕೈಬಿಡದವು

ಕೈಲಿ ಒಂದೂ ಒಡೆಯದಂತೆ
ಅವುಗಳ ಮೇಲೆ ಅಚ್ಚಿನ ಎಚ್ಚರಿಕೆ
ಸದ್ದು ಮಾಡುವ ಬಳೆಗಳಿಗೂ
ನನ್ನಲ್ಲಿ ಅಂತರ್ನಿರ್ಮಿತ ನಂಬಿಕೆ
ಮಾತುಗಳು ತುಟ್ಟಿಯಾದ ಕಡೆ
ಸಖಿಯಾಗಿ ಘಲ್ಲೆನ್ನುತುಲಿವ ಪದವು
ಮೌನಕೆ ಜೀವ ಶರಣಾದಾಗ
ಸಾವರಿಸುವವು ಸರಿದು ಹಿಂದು

ನಿರ್ಜೀವ ಎನಿಸಲಿಲ್ಲವೆಂದೂ
ಇರುವಲ್ಲಿ ಅಸ್ಮಿತೆಯ ಸಾರುವುದು
ಮಲ್ಲಾರನಲ್ಲೋ ಮುಂಗೈಯಲ್ಲೋ
ಹೆಣ್ಣಾಗಿ ಹೆಣ್ಣನ್ನಪ್ಪಿಹುದು
ಉರುಳಾಗದೆಂದೂ ಏರಿದರೂ
ಉರುಳದು ದೂರಕೆ, ಜಾರಿದರೂ
ಬಾಗಿದ ಬದುಕಲ್ಲಿಯೇ ಇದ್ದು
ಬದುಕಿನ ವೃತ್ತಗಳ ಕೂಡಿಸುವುದು

ಕೈಲಾಗದವಗೆ ಆಡಿಕೊಳ್ವರು
ಹೋಗೋ ಹೆಣ್ಣಂತೆ ಬಳೆ ತೊಡು
ಶಿಲಾ ಗೆರೆಯಂತೆ ಸತ್ಯವಿದು
ಸರಳವಲ್ಲ ವಿಘಟಿಸದೆ ಏಗುವುದು
ಬರಿಗೈಯ ಗಾಳಿ ಗುದ್ದಾಟಕ್ಕೂ
ಬದ್ಧತೆಯ ಕೈಗೂ ವ್ಯತ್ಯಾಸವಿಹುದು
ಅಲೆಮಾರಿಗೂ ಹಟಮಾರಿಗೂ
ಸಮಾಹಿತ ಬಾಳ್ವೆಯ ಪಾಠ ಕಲಿಸುವವು



6. ಕಮಲಾಕ್ಷಿ ಸಿ ಆರ್.

'ಸೂಜಿ ಎಂದರೆ ಸುಮ್ಮನೇನಾ?'



ಕೆಲ ದಿನಗಳ ಹಿಂದೆ ದಿನದರ್ಶಿನಿಯ ಪುಟ ತಿರುಗಿಸ್ತಾ ಇರುವಾಗ ಅದರಲ್ಲಿದ್ದ ಸೂಜಿ ಬೆರಳಿಗೆ ತಗುಲಿ 'ಹಾಂ.. ' ಎಂದು ನೋವಿನಿಂದ ಸಣ್ಣಗೆ ಚೀರಿದೆ.

ಮಗ ಏನಾಯ್ತಮ್ಮ? ಅಂತ ಓಡಿ ಬಂದ. " ಏನಿಲ್ಲಪ್ಪ.. ಸೂಜಿ ಬೆರಳಿಗೆ ಚುಚ್ಚಿತು ಅಷ್ಟೇ..ಬಿಡು." ಎಂದೆ. ಮಗನಿಗೆ ಸೂಜಿ ಮೇಲೆ ಅದೆಷ್ಟು ಕೋಪ ಬಂತಂದ್ರೆ " ಈ ಸೂಜಿ ನಿನಗ್ಯಾಕೆ ಬೇಕಮ್ಮ?.. ಈ ಕಡೆ ಬಾ.. ಅದನ್ನು ಎಸೆದು ಬಿಡ್ತೀನಿ " ಎಂದ.

" ಅಲ್ಲಪ್ಪಾ.. ಹೋದವಾರ ಸೂಜಿನಾ ಹುಡುಕಿ ಸಾಕಾಗಿ, ಕೊನೆಗೆ ಹೊಸ ಸೂಜಿ ತಂದ್ದದಾಯಿತು. ಆ ದಿನ ಹುಡುಕಿದ ಸೂಜಿನೇ ಇದು. ಮನೆಯಲ್ಲಿ ಸೂಜಿ ಇರದಿದ್ರೆ ಹೇಗೆ. ಚುಚ್ಚಿತು ಅಂತ ಎಸೆಯಕ್ಕಾಗುತ್ತ? ಯಾರಿಗೆ, ಯಾವಾಗ ಅಗತ್ಯ ಬರುತ್ತೋ ಯಾರಿಗೆ ಗೊತ್ತು?" ಎಂದೆ.

" ನಿನಗೆ ಬಿಡಮ್ಮ...ಯಾವುದೂ ವೇಸ್ಟ್ ಎನಿಸೋದೆ ಇಲ್ಲ. ಈ ಸೂಜಿ ಇಟ್ಕೊಂಡು ಅದೇನ್ ಮಾಡ್ತಿಯೋ" ಎಂದು ಉದ್ಗಾರ ತೆಗೆದ.

"ಸಣ್ಣ ಪುಟ್ಟ ರಿಪೇರಿಗೆ, ನಿನ್ನ ಷರ್ಟ್ ಗುಂಡಿ ಹಾಕೋಕೆ, ಬ್ಲೌಸ್ ಟಕ್ ಹಿಡಿಯೋಕೆ, ಹೂವಿನ ಹಾರ ಪೋಣಿಸೋಕೆ ಬೇಕಲ್ವಾ" ಎಂದೆ.

ಅವನಿಗೆ ನಗು ತೆಗೆಯಲಾಗಲಿಲ್ಲ.. "ಇಷ್ಟದ್ದ ಸೂಜಿ ಬಗ್ಗೆ ಅದೆಷ್ಟು ಮಾತಾಡ್ತೀಯಮ್ಮ?

ಅದೇನಾದ್ರು ನಿನ್ನ ಬರಹಕ್ಕೆ ಬರುತ್ತಾ ನೋಡಮ್ಮ" ಎಂದು ನನ್ನ ಬೆರಳಿಗೆ ಡೆಟಾಲ್ ಹಾಗಿ ತನ್ನ ಕೋಣೆ ಸೇರಿದ.

ಅವನು ಕೋಣೆ ಸೇರಿ ತನ್ನ ಕೆಲಸ ಮುಂದುವರೆಸಿದ್ದ. ಆದ್ರೆ ಚುಚ್ಚಿದ ಸೂಜಿ ನನ್ನ ತಲೆ ಹೊಕ್ಕಿತ್ತು. ಕಿರಿದರೊಳ್ ಪಿರಿದರ್ಥಂ ಎನ್ನುವಂತೆ ಸೂಜಿ

ಗಾತ್ರದಲ್ಲಿ ಚಿಕ್ಕದಾದರೂ ಅದು ಸರ್ವವ್ಯಾಪಿಯಾಗಿದೆ ಎನಿಸಿತು.

ಸೂಜಿ ಅಂದ್ರೆ ಸುಮ್ಮನೇನಾ? ಅದೊಂದು ಸೋಜಿಗದ ವಸ್ತು. ಮನುಷ್ಯನಿಗೆ ವಸ್ತ್ರವನ್ನು ದೇಹಕ್ಕೆ ತಕ್ಕಂತೆ ಚೆಂದವಾಗಿ ಹೊಲಿಗೆ ಹಾಕುವಲ್ಲಿ ಇದರ ಪಾತ್ರ ಮಹತ್ವದ್ದು. ಹಾಗಿದ್ದಾಗ ಇದನ್ನು ನಿಕೃಷ್ಟವಾಗಿ ಕಾಣಲಾದೀತೆ?

ಮನುಷ್ಯನನ್ನು ಸಂಸ್ಕಾರವಂತನಾಗಿ ಕಾಣುವಂತೆ ಮಾಡುವಲ್ಲಿ ಸೂಜಿಯ ಪಾತ್ರ ಮಹತ್ವದ್ದು ಅಲ್ಲವೆ? ವಸ್ತ್ರ ಅದೆಷ್ಟೇ ಬೆಲೆಬಾಳುವುದಿದ್ದರೂ ಅದನ್ನು ಕತ್ತರಿಸಿ ವಸ್ತ್ರಕ್ಕೆ ವಿನ್ಯಾಸ ಕೊಡಲು ಸೂಜಿ ಆ ವಸ್ತ್ರದ ಮೇಲೆ ಹರಿದಾಡಲೇ ಬೇಕಲ್ವಾ?

ಸೂಜಿ ಎನ್ನುವುದು ನಾಲ್ಕೈದು ಸೆ.ಮೀ ನಿಂದ ಒಂಬತ್ತು ಇಂಚಿನವರೆಗೆ ಉದ್ದವಿರುವ ಮಿಶ್ರಲೋಹದ ಬಾಗಿಸಲಾರದ ತಂತಿಯಂತಿದ್ದು, ಒಂದು ತುದಿಯಲ್ಲಿ ಮುಳ್ಳಿನಂತೆ ಮೊನಚಾಗಿದ್ದು ಮತ್ತೊಂದು ತುದಿಯಲ್ಲಿ ಸಣ್ಣ ರಂದ್ರವನ್ನು ಹೊಂದಿರುತ್ತದೆ. ಈ ರಂಧ್ರದ ಮೂಲಕ ದಾರವನ್ನು ಪೋಣಿಸಲಾಗುವುದು. ಹರಿದ ಅಥವಾ ಕತ್ತರಿಸಿದ ಬಟ್ಟೆಗಳನ್ನು ಬೇಕಾದ ವಿನ್ಯಾಸದ ಮೂಲಕ ಎಡದಿಂದ ಬಲ, ಬಲದಿಂದ ಎಡಕ್ಕೆ ಸೂಜಿಯನ್ನು ತೂರಿಸುತ್ತ ದಾರದಿಂದ ಹೆಣೆಯಬಹುದು. ಆದ್ದರಿಂದಲೇ
'ಸೂಜಿ ಹಿಂದೆ ದಾರ' ಎಂಬ ಮಾತು ಒಬ್ಬರನ್ನು ಹಿಂಬಾಲಿಸಿ ಬರುವವರನ್ನು ಕುರಿತು ಹೇಳಲಾಗುತ್ತದೆ.

ಸೂಜಿಯ ಬಳಕೆ ಹಲವು ಸಹಸ್ರ ವರ್ಷಗಳ ಹಿಂದಿನಿಂದಲೇ ಇದೆ. ಪ್ರಾರಂಭಿಕವಾಗಿ 61 ಸಾವಿರ ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದ ಸಿಬುಡು ಗುಹೆಯಲ್ಲಿ ಮೂಳೆಗಳಿಂದ ಮಾಡಿದ ಸೂಜಿಗಳು ಲಭಿಸಿವೆಯಂತೆ. ಕ್ರಿ.ಪೂ 38,000-29000ರಲ್ಲಿ ಅರಿಗ್ನೇಷಿಯನ್ ಕಾಲದಲ್ಲಿ ಮರ, ದಂತ, ಜಿಂಕೆಯ ಕೊಂಬು ಹಾಗೂ ಮೂಳೆಗಳಿಂದ ಸೂಜಿಗಳನ್ನು ಮಾಡುತ್ತಿದ್ದ ಉಲ್ಲೇಖಗಳಿವೆಯಂತೆ.

ಲೋಹಗಳ ಆವಿಷ್ಕಾರ, ಮಿಶ್ರಲೋಹಗಳ ತಯಾರಿಕೆ ಬಳಿಕ ಕಂಚು ಹಾಗೂ ಹಿತ್ತಾಳೆಯ ಸೂಜಿಗಳು ಬಳಕೆಗೆ ಬಂದವು. ಕ್ರಿ.ಪೂ 7000ರಲ್ಲಿ ತಾಮ್ರದ ಸೂಜಿಯು ಅರ್ಮೇನಿಯಾದಲ್ಲಿ ತಯಾರಾಯಿತಂತೆ. ಇವೆಲ್ಲವೂ ಮೃದುವಾದ ಸೂಜಿಗಳಾಗಿದ್ದವು. ಉಕ್ಕಿನ ಸೂಜಿಯ ಕಾರ್ಖಾನೆ 1730 ರಲ್ಲಿ ಪ್ರಾರಂಭವಾಯಿತು.

1755 ರಲ್ಲಿ ಹೊಲಿಗೆ ಯಂತ್ರದ ಸೂಜಿಯನ್ನು ಚಾರ್ಲ್ಸ್ ಫ್ರೆಡ್ರಿಕ್ ವಿಸೆಂಥಾಲ್ ಎಂಬುವರು ತಯಾರಿಸಿದರು.

ಈ ಸೂಜಿ ವಸ್ತ್ರಗಳ ಹೊಲಿಗೆಗೆ ಮಾತ್ರ ಸೀಮಿತವಾಗಿಲ್ಲ. ಇದು ಮನುಷ್ಯನ ದೇಹದ ಶಸ್ತ್ರಕ್ರಿಯೆಗೆ ಬಹುಮುಖ್ಯವಾಗಿ ಬೇಕು. ಯಾವುದೇ ಶಸ್ತ್ರಚಿಕಿತ್ಸೆಯಲ್ಲಿ ಕತ್ತರಿಸಿದ ಭಾಗಗಳನ್ನು ಕೂಡಿಸಿ ಚರ್ಮದ ಸಮೇತ ಹೊಲೆಯಲು ಸೂಜಿ ಬೇಕೇಬೇಕು. ಸೂಜಿರಹಿತ ಶಸ್ತ್ರಕ್ರಿಯೆ ನಡೆಸುವುದು ಅಸಾಧ್ಯ. ಅಷ್ಟೇ ಅಲ್ಲ ಅನಾರೋಗ್ಯ ಸಮಯದಲ್ಲಿ ಔಷಧವನ್ನು ಸೂಜಿಯ ಮೊನಚಾದ ತುದಿಯಿಂದ ರಕ್ತನಾಳಗಳಲ್ಲಿ ಸೇರುವಂತೆ ಮಾಡಲಾಗುತ್ತದೆ. ಇದು ಔಷಧವನ್ನು ಬೇಗನೆ ರಕ್ತಕ್ಕೆ ಸೇರಲು ಸಹಾಯ ಮಾಡುತ್ತದೆ. ಹಾಗಿದ್ದೂ ಸೂಜಿ ಮದ್ದು ಚುಚ್ಚಿಸಿಕೊಳ್ಳಲು ಚಿಕ್ಕವರಿಂದ ದೊಡ್ಡವರವರೆಗೂ ಭಯವೇ.

ಸೂಜಿ ಕುರಿತಾದ ಬಹಳಷ್ಟು ಗಾದೆಗಳು ಪ್ರಚಲಿತದಲ್ಲಿವೆ. ' ಚಿನ್ನದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಳ್ಳಾಗುವುದೆ?' ಎಂಬುದು, ಅತ್ಯಾಪ್ತರಾದ ಮಾತ್ರಕ್ಕೆ ಅವರು ಕೊಡುವ ಕಷ್ಟ, ಅನ್ಯಾಯ, ನೋವುಗಳನ್ನು ಸಹಿಸಲಾಗುವುದೆ? ಅಂತಹ ಸನ್ನಿವೇಶಗಳಲ್ಲಿ ಈ ಗಾದೆಯ ಉಪಮೆ ಕೊಡಲಾಗುವುದು. ಸೂಜಿ ಯಾವುದಾದರೇನು ಅದು ಚುಚ್ಚಿದರೆ ನೋವಾಗದೆ ಇರುವುದೆ?

ಬೆಂಗಳೂರಿನಲ್ಲಿ ವಿಳಾಸವಿಲ್ಲದೆ, ಫೋನ್ ನಂಬರ್ ಇಲ್ಲದೆ ಮನೆಯನ್ನು ಹುಡುಕುವುದೆಂದರೆ, "ಹುಲ್ಲಿನ ಬಣವೆಯಲ್ಲಿ ಸೂಜಿಯನ್ನು ಹುಡುಕಿದಂತೆ" ಎಂದು ಹೇಳಬಹುದು. ದಟ್ಟ ಅರಣ್ಯದಲ್ಲಿ ದಾರಿತಪ್ಪಿದವರನ್ನು ಹುಡುಕುವುದು ಕೂಡ ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕಿದಂತೆಯೇ ಸರಿ.

'ಕಾಸಿನ ಕುದುರೆಗೆ ಬಾಲದ ಲಗಾಮು' ಎಂಬುದು ಸೂಜಿ ದಾರ ಕುರಿತಾದ ಒಗಟು. ಸೂಜಿ ಹೋದೆಂತೆಲ್ಲ ಬಾಲದಂತೆ ದಾರವೂ ಚಲಿಸುತ್ತ ಸೂಜಿಯ ಪ್ರಯಾಣವನ್ನು ಸಾಕ್ಷೀಕರಿಸುತ್ತದೆ. ಅದೇ ಸೂಜಿಗೆ ಹಾಕಿದ ದಾರ ಗಂಟಾದಲ್ಲಿ ಇಲ್ಲವೇ ಉದ್ದ ಕಡಿಮೆಯಾದಲ್ಲಿ ಸೂಜಿಯ ಪ್ರಯಾಣಕ್ಕೆ ಭಂಗವಾಗುತ್ತದೆ. ಅಂದರೆ ಸೂಜಿಗೆ ದಾರ ಲಗಾಮು ಹಾಕಿದಂತೆಯೇ..ಅಲ್ಲವೆ?

ಪಾಂಡವರು ಅಜ್ಞಾತವಾಸ ಮುಗಿಸಿಕೊಂಡು ಬಂದ ನಂತರ, ತಮಗಾಗಿ ಐದು ಗ್ರಾಮಗಳನ್ನು ಬಿಟ್ಟುಕೊಡುವಂತೆ ಕೇಳಲು ಕೃಷ್ಣನನ್ನು ದುರ್ಯೋಧನನಲ್ಲಿಗೆ ಸಂಧಾನಕ್ಕಾಗಿ ಕಳುಹಿಸುತ್ತಾರೆ. ಆದರೆ ಸಂಧಾನಕ್ಕೆ ಒಪ್ಪದ ದುರ್ಯೋಧನ 'ಯುದ್ಧವಾಗದ ಹೊರತು ಒಂದು ಸೂಜಿಯ ಮೊನೆಯಷ್ಟು ಜಾಗವನ್ನು ಕೊಡುವುದಿಲ್ಲ' ಎಂದು ದರ್ಪದಿಂದ ಕೃಷ್ಣನನ್ನು ಹಿಂದಿರುಗಿ ಹೋಗುವಂತೆ ಹೇಳುತ್ತಾನೆ. ಅದು ಮಹಾಭಾತದ ಮಹಾಯುದ್ಧಕ್ಕೆ ಕಾರಣವಾಗಿ, ಕೌರವ ಕುಲದ ನಾಶಕ್ಕೆ ಕಾರಣವಾಗುತ್ತದೆ.

'ಸೋಜುಗಾದಾ ಸೂಜಿ ಮಲ್ಲಿಗೆ ಮಾದಪ್ಪ ನಿಂಗೆ' ಎಂದು ಸೂಜಿ ಮಲ್ಲಿಗೆಯ ಕಂಪನ್ನು ಮಾದಪ್ಪನಿಗೆ ಅರ್ಪಿಸಿ, ಹಾಡಿ ಕೃತಾರ್ಥವಾಗುವ ಜಾನಪದ ಗೀತೆ ಸೂಜಿಮಲ್ಲಿಗೆಯಷ್ಟೇ ಕಂಪು ಬೀರುತ್ತದೆ.

ಸೂಜಿಕಾಂತ ಎಂದು ಹೇಳಲಾಗುವ ಅಯಸ್ಕಾಂತವು, ಎರಡು ಮೊನಚುಗಳಿರುವ ಅಯಸ್ಕಾಂತವು ರಾತ್ರಿಯ ವೇಳೆ ಸಮುದ್ರಯಾನ ಮಾಡುವವರಿಗೆ ಯಾವ ದಿಕ್ಕಿನಲ್ಲಿ ದೋಣಿ, ಹಡಗು ಚಲಿಸುತ್ತಿದೆ ಎಂದು ತಿಳಿಯಲು ಸಹಾಯಮಾಡುತ್ತದೆ.


ಹಿಂದೆಲ್ಲ ವಧುವಿನ ದೃಷ್ಟಿ ತೀಕ್ಷ್ಣತೆ ಪರೀಕ್ಷೆಗಾಗಿ, ಸಣ್ಣ ರಂದ್ರವಿರುವ ಮಣಿ, ಸೂಜಿಯನ್ನು ವಧುವಿಗೆ ಕೊಟ್ಟು ಪೋಣಿಸಲು ಹೇಳುತ್ತಿದ್ದರಂತೆ.

ಸಣ್ಣ ಕಣ್ಣಿನ ಮಣಿಗಳನ್ನು ಸೂಜಿ ದಾರಕ್ಕೆ ಪೋಣಿಸುತ್ತ ನಿರ್ದಿಷ್ಟ ದೂರವನ್ನು ಪೂರ್ಣಗೊಳಿಸಲು
ನಡೆಯುವ ಸ್ಪರ್ಧೆ ಇಂದಿಗೂ ನೋಡುಗರ ಕಣ್ಣಿಗೆ ಹಬ್ಬ.

ಸೂಜಿ ಮೊದಲೇ ಮೊನಚು, ಕೆಳಗೆ ಬಿದ್ದದ್ದು ಕಣ್ಣಿಗೆ ಕಾಣಿಸದು. ಅಕಸ್ಮಾತ್ ಕೆಳಗೆ ಬಿದ್ದದ್ದು ಯಾರ ಕಾಲಿಗಾದರೂ ಚುಚ್ಚಿದರೆ ಅಪಾಯವಾದೀತು ಎಂದು, ಹಿಂದೆ ಅಂಗಡಿಗಳಲ್ಲಿ ಸಂಜೆಯ ಬಳಿಕ ಸೂಜಿಯನ್ನು ಕೊಡುತ್ತಿರಲಿಲ್ಲವಂತೆ.

ಸೂಜಿ ಎನ್ನುವುದು ಅಂದಿನಿಂದ ಇಂದಿನವರೆಗೆ ಮನುಷ್ಯನ ಜೀವನದಲ್ಲಿ ಅತ್ಯವಶ್ಯಕ. ಸೂಜಿಯ ಹೊರತಾದ ಜೀವನ ಕಲ್ಪಿಸಲೂ ಆಗದು. ಕತ್ತರಿಸಿದ ಹಾಗೂ ಹರಿದ ವಸ್ತ್ರ, ದೇಹದ ಭಾಗಗಳನ್ನು ಜೋಡಿಸುವ ನಿರ್ಜೀವ ವಸ್ತು ಸೂಜಿ. ನಡೆಯುವ ಕಾಲು ಎಡವುವುದು ಸಹಜ.

ಬೇಡದ ಪ್ರತಿಷ್ಠೆ, ಅಹಂಗಳಂತಹ ಸಣ್ಣ ಕಾರಣಗಳಿಂದ ದೂರವಾದ ಮನಸ್ಸುಗಳನ್ನು ಸಾಂತ್ವನ, ಮಾತುಗಳೆಂಬ ದಿವ್ಯ ಸೂಜಿ ದಾರದಿಂದ ಹೊಲೆದು ಸರಿಪಡಿಸಿಕೊಳ್ಳಬಾರದೇಕೆ? ಮನುಷ್ಯ ಸಂಬಂಧಗಳನ್ನು ಸರಿಪಡಿಸಿಕೊಂಡು ಉತ್ತಮವಾಗಿ ಬೆಸೆದುಕೊಳ್ಳಬಾರದೇಕೆ?



7. ಅನ್ನಪೂರ್ಣ ಸುಬ್ಬರಾವ್.

ಹೀಗೂ ಉಂಟಾ..!!



ಆಗಷ್ಟೇ ಬಸ್ಸಿಳಿದು ಮನೆಕಡೆ ಹೆಜ್ಜೆ ಹಾಕಿದ್ದ ನನಗೆ ಮನೆ ತಲುಪುವವರೆಗೂ ಸದ್ಯ ಯಾವ ತೊಂದರೆಯೂ ಇಲ್ಲದೆ ಮನೆ ಸೇರಿದ್ರೆ ಸಾಕಪ್ಪ ಅನ್ನುವ ಆತಂಕ ಮನದಲ್ಲಿ. ಯಾಕೆ ಅಂತೀರಾ..?

ನಾವಿರುವ ಬಡಾವಣೆ ಅವಸ್ಥೆಯೇ ಹಾಗಿದೆ..! ತಾರಿಗೊಂದು ಮಾರಿಗೊಂದು ಮನೆ. ಸುತ್ತಲೂ ಪೊದೆಯಂತೆ ಬೆಳೆದ ಗಿಡ ಗೆಂಟೆಗಳು.. ಮನುಷ್ಯನಿಗೆ ಪೈಪೋಟಿ ಯಾಗಿ ಮನೆಮಾಡಿಕೊಂಡು, ಯಾರ ಹಂಗೂ ಇಲ್ಲದೇ ನಿರ್ಭಯವಾಗಿ ಓಡಾಡುವ ಹಾವುಗಳು, ಕೊಚ್ಚೆ ಗುಂಡಿಯಲ್ಲೆ ಈಜುಕೊಳ ದಂತೆ ಈಜಾಡುವ ಹಂದಿ ಮರಿಗಳು, ಇವನ್ನೆಲ್ಲ ದಾಟಿ ಮನೆಗೆ ಬಂದೆ ಅಂದ್ರೆ ಏನೋ ವಿಜಯ ಸಾಧಿಸಿಬಿಟ್ಟೆ ಅನ್ನುವ ಭಾವನೆ.

ಇನ್ನೇನು ಮನೆ ತಲುಪಿದೆ ಅನ್ನುವಷ್ಟರಲ್ಲಿ ಜನಗಳ ಅವಸರದ ಓಡಾಟ ನೋಡಿ, ಓಡಾಟ ಏನ್ಬಂತು, ಓಡಿ ಹೋಗ್ತಿದ್ದಾರೆ ಅಂದ್ರೂ ತಪ್ಪಿಲ್ಲ. . ಏನಪ್ಪಾ ..! ಇದೂ..!!.ಏನೂ ಗೊತ್ತಾಗ್ತಿಲ್ಲ ಯಾರನ್ನಾದ್ರೂ ಕೇಳೋಣ ಅಂದ್ರೆ , ನನ್ನ ಮಾತು ಕೇಳಿಸಿಕೊಳ್ಳುವ ಸ್ಥಿತಿಯಲ್ಲೇ ಅವರಿಲ್ಲದವರಂತೆ ಅವರವರೇ ಮಾತಾಡ್ಕೊಂಡು ನನ್ನ ಕಡೇ ನೋಡೋ ಸೌಜನ್ಯ ಕೂಡ ತೋರ್ದೆ ಬೇಕಾದ್ರೆ ನೀನೇ ಬಂದು ನೋಡು ಅನ್ನೋ ಹಾಗೇ ಏನೂ ಹೇಳದೆ ಓಡ್ತಾ ಇದ್ರು. ಏನಾದ್ರೂ ಗಲಾಟೆನಾ ನೋಡೋಣ ಅಂತ ನಾನೇ ಅಲ್ಲಿಗೆ ಹೋದೆ.. ಸುತ್ತಲೂ ಜನಸೇರಿದೆ, ಆಗಾಗ ಆಕಡೆಗೊಮ್ಮೆ ಈಕಡೆಗೊಮ್ಮೆ ಚದುರಿ ಹೋಗ್ತಾ ಇದ್ದಾರೆ. . ಒಂದು ಹೆಂಗಸು ಕೈಲಿ ಊದಿನ ಕಡ್ಡಿ ಹಿಡ್ಕೊಂಡು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಓಡಾಡ್ತಾ ಇದ್ದಾಳೆ. ಏನೂ ಅರ್ಥವಾಗದು.. ಪಕ್ಕದಲ್ಲಿದ್ದ ಒಬ್ಬನ ಭುಜ ತಟ್ಟಿ ಏನ್ ಮಾಡ್ತಾ ಇದ್ದಾಳೆ ಆ ಹೆಂಗಸು ಅಂದೆ..?

" ಹಾವಿಗೆ ಪೂಜೆ ಮಾಡ್ತಾ ಇದ್ದಾಳೆ.."ಅಂದ.
ಎಲ್ಲಿದೆ ಹಾವು ..?
ಅಷ್ಟು ದೊಡ್ಡದಾಗಿ ಹೆಡೆ ಎತ್ಕೊಂಡು ನಿಂತಿದೆ ಕಾಣ್ತಾ ಇಲ್ವಾ ಅಂದ..!!
ಹೇಗೆ ಕಾಣ್ಬೇಕು..? .
ಇರಪ್ಪ ನಾಗಪ್ಪ ಪೂಜೆ ಮಾಡ್ತೀನಿ ಅಂತ ಆ ಹೆಂಗ್ಸು ಹಿಂದಿದೇನೆ ಹೋಗಿ, ಅದರ ಮುಖಕ್ಕೆ ಊದಿನ ಕಡ್ಡಿ ಹಿಡಿದ್ರೆ ಹೇಗೆ ತಾನೇ ಇರುತ್ತೆ. ಅದಕ್ಕೂ ಭಯ ಆಗಲ್ವೇ..!!

ಎಂಥ ವಿಚಿತ್ರ ಹೆಂಗಸು. ಮುಗ್ಧತೆಯೋ ಭಕ್ತಿಯ ಪರಾಕಾಷ್ಠೆಯೋ ಒಂದು ಕ್ಷಣ ನನ್ನ ಮೈ ಬೆವರಿ ನೀರಿಳಿದು ಹೋಯ್ತು. "ಅಷ್ಟು ದೊಡ್ಡ ಹಾವು, ಅದನ್ನ ಅಟ್ಟಾಡಿಸಿ ಕೊಂಡು ಹೋಗ್ತಿಯಲ್ಲಮ್ಮ ನಿಂಗೆ ಭಯನೆ ಇಲ್ವೇ..? ಅದೇನಾದ್ರೂ ತಿರುಗಿ ನಿಂತ್ರೆ, ನಿನ್ ಗತಿ ಏನೂ..? ಬುಧ್ಧಿ ಇಲ್ವಾ ನಿಂಗೆ". ಅಂದೆ . ನನ್ನ ಪಕ್ಕದಲ್ಲೇ ಹೆದರುತ್ತಾ ನಿಂತಿದ್ದ ಯುವತಿ, ನೀವಾದ್ರೂ ಹೇಳಿ ಅಂಕಲ್.. ನಮ್ಮಮ್ಮ ಯಾವಾಗ್ಲೂ ಹೀಗೇ.. ಎಲ್ಲಿ ಹಾವು ಕಂಡ್ರೂ ಊದ್ಗಡ್ಡಿ ಹಿಡ್ಕೊಂಡು ಹಿಂದಿಂದೇನೆ ಹೋಗ್ತಾರೆ.. ಅದೇನು ಹುಚ್ಚೋ..!!
ಮಗಳ ಮಾತು ಕೇಳಿ,"ನಿಂಗೆ ಭಯ ಆದ್ರೆ ನೀನು ಹೋಗೆ. ನಾನು ಬರ್ತೀನಿ" . ಅಂದ್ಲು.ಆ ಹೆಂಗ್ಸೂ.
"ಅಲ್ಲಮ್ಮ ಅದೆಲ್ಲಿ ನಿನ್ನ ಕಣ್ಣಿಗೆ ಬಿತ್ತು ಪಾಪದ್ದು."ಅಂತ ಕೇಳ್ದೆ.

"ಪಾಪದ್ದು ಅಂತ ಯಾಕಂತೀರಾ"..!! ನಾಗಪ್ಪ ಸಿಗೋದೇ ಅಪರೂಪ ಅಂತೀನಿ.. ಅಂಗಳಕ್ಕೆ ನೀರು ಹಾಕಕ್ಕೇ ಅಂತ ಬಂದೆ. ನಮ್ಮನೆ ಬಾಗಿಲಲ್ಲೇ ಮಲಗಿದ್ದ ನಾಗಪ್ಪನ್ನ ನೋಡೀ,

ಇಲ್ನೋಡೆ ಏನು, ನಾಗಪ್ಪ ಮನೆ ಬಾಗಿಲಿಗೇ ಬಂದಿದ್ದಾನೆ ಕಣೆ..ಪೂಜೆ ಮಾಡೋಣ ಅರಿಶಿನ ಕುಂಕುಮ ತಗೊಂಡ್ ಬಾರೆ ಅಂದೆ ಮಗಳಿಗೆ!

ಅಮ್ಮನ ಮಾತು ಕೇಳಿ ಗರಬಡಿದವಳ ಹಾಗೇ.. ಒಂದಡಿ ದೂರ ಹಾರಿ, ಅಮ್ಮಾ ನಿಂಗೆನ್ ತಲೆ ಕೆಟ್ಟಿದ್ಯಾ.. ಅದು ನಿಜವಾದ ಹಾವೂ ಕಣೇ..ನೀನು ಪೂಜೆ ಮಾಡೋ ತಂಕ ಸುಮ್ನೆ ಇರುತ್ತೆ ಅಂದ್ಕೊಂಡ..!! . ನಿಂಗೇ ಸರಿಯಾಗಿ ಘೂಜೆ ಮಾಡುತ್ತೆ ನೋಡು.. ಬಾಮ್ಮ ಈಕಡೆ..!! ಅಂದ್ಲು..

ಇವಳ ಮಾತಲ್ಲೇ ಹೆದರಿದ್ದಾಳೆ ಅಂತ ಗೊತ್ತಾಯ್ತು. ತರೋಲ್ಲ ಅನ್ನೋದೂ ಗೊತ್ತಾಯ್ತು..

ಇರು ನಾಗಪ್ಪಾ.. ಈಗ್ಲೇ ಬರ್ತೀನಿ.. ಹೋಗ್ಬೇಡ ಅಂತ ಹೇಳಿ ನಾನೇ

ಒಳಗೋಗಿ , ಅರಿಶಿನ, ಕುಂಕುಮ ತಂದು ಹಾಕಿ, ತಲೆಮೇಲೆ ಒಂದು ಹೂವೂ ಇಟ್ಟೆ ಸುಮ್ಮನೆ ಮಲಗಿತ್ತು. .ಊದಿನ ಕಡ್ಡಿ ತರೋಕೆ ಅಂತ ಒಳಗೋಗಿ ಬರ್ತೀನಿ, ಅಷ್ಟರಲ್ಲಿ ನಾಗಪ್ಪ ಇಲ್ಲಿ ಬಂದ್ಬಿಟಿದ್ದ. ನಾಗಪ್ಪ ಬಂದಿದ್ದಾನೆ ಎಲ್ಲ ಬನ್ನಿ ಅಂತ ಜೋರಾಗಿ ಕೂಗ್ದೆ. ಇವರೆಲ್ಲಾ ಓಡಿ ಬಂದ್ರು.. ಆದ್ರೆ ಯಾರೂ ಹತ್ರ ಬರ್ತಾ ಇಲ್ಲ, ನನ್ ಮಗಳ ಹಾಗೇ ಇವರೂ ಹೆದರ್ತಾರೆ..!! ಅವನೇನು ಮಾಡ್ತಾನೆ ಪಾಪ. ಅವನಿಗೂ ನಮ್ಮಷ್ಟೇ ಭಯ ಇರುತ್ತೆ ಆಲ್ವಾ..!! ಅಂದ್ಲು..

ನಂಗೆ ನಗ್ಬೇಕೋ, ಅಳ್ಬೇಕೋ ಒಂದು ಗೊತ್ತಾಗ್ಲಿಲ್ಲ. "ಹುಚ್ಚಲ್ಲ ಬೆಪ್ಪಲ್ಲ, ಶಿವಲೀಲೆ" ಅನ್ನೋದು ಇದಕ್ಕೆ.. ಇರ್ಬೇಕು . ಅಂದ್ಕೊಂಡೆ.

ನೀನು ತುಂಬಾ ಪುಣ್ಯವಂತೆ ತಾಯಿ.. ಅಷ್ಟು ಸಹನೆಯಿಂದ ನಿನ್ನ ಕೈಲಿ ಪೂಜೆ ಮಾಡಿಸ್ಕೊಂಡಿದ್ದಾನೆ ಅಂದ್ರೆ ನಿನ್ನ ಭಕ್ತಿಗೆ ಮೆಚ್ಚಿದ್ದಾನೆ. ಅಂತಲೇ.. ಅವನೇ ಸುಸ್ತಾಗಿ ಹೋಗಿದ್ದಾನೆ.. ಇನ್ನಾದ್ರೂ ನಿನ್ನ ಪೂಜೆ ನಿಲ್ಸಿ, ಆವನ ಪಾಡಿಗೆ ಅವನನ್ನು ಬಿಟ್ಬಿಡು. ತಾಯೀ.. "ನೋಡು ಊದಿನ ಕಡ್ಡಿ ನಿನ್ನ ಕೈ ಸುಡ್ತಿದೆ ಅದೂ ನಿಂಗೆ ಗೊತ್ತಾಗ್ತಾ ಇಲ್ಲ" ಅಂದಾಗಲೇ ಆ ಹೆಂಗಸು ವಾಸ್ತವಕ್ಕೆ ಬಂದು, ಕೈ ಕೊಡವಿಕೊಂಡು ಊದಿನ ಕಡ್ಡಿಯನ್ನು ಆರಿಸಿದಳು.

ನಿಮ್ಮಮ್ಮನ್ನ ಕರ್ಕೊಂಡ್ ಹೋಗಮ್ಮ ಅಂದೆ. ಅಲ್ರಪ್ಪಾ ನೀವೆಲ್ಲಾ ತಮಾಷೆ ಅನ್ನೋಹಾಗ್ ನೋಡ್ತಾ ನಿಂತಿದ್ದೀರಲ್ಲ .!! , ನೀವೂ ಒಂಥರಾ ಪುಣ್ಯವಂತರೇ ಬಿಡಿ. ಎಲ್ಲ ಸಮಯಾನು ನಮ್ಮದೇ ಆಗಿರಲ್ಲ.. ಮಕ್ಳು ಮರಿ ಇರ್ತಾರೆ ಮನೇಲಿ ಸ್ವಲ್ಪ ಎಚ್ಚರದಿಂದ ಇರಿ.. ಆಯ್ತಲ್ಲ, ಎಲ್ರೂ ಹೋಗಿ.. ಅದರ ಪಾಡಿಗೆ ಅದನ್ನು ಬಿಟ್ಟು, ಎಂದು ಹೇಳುತ್ತಾ ಸುತ್ತಲೂ ನೋಡಿದೆ. ಎಲ್ಲಿದೆ..? ನಾಗಪ್ಪ ಪತ್ತೆನೆ ಇಲ್ಲ..!!

ಸದ್ಯ..ಬಚಾವಾದೆ ಅಂದ್ಕೊಂಡು ನಿಟ್ಟುಸಿರು ಬಿಟ್ಟು ತನ್ನ ಮನೆಸೇರಿರ್ಬೇಕು..!! ಅಂದ್ಕೊಂಡೆ.

ಎಲ್ಲರೂ ಸುರಕ್ಷಿತವಾಗಿ ಮನೆ ಸೇರಿದ್ರು..

ಆ ಹೆಂಗಸಿಗಂತು ಶಿವನೇ ಪ್ರತ್ಯಕ್ಷ ಆದ ಅನ್ನುವಷ್ಟು ಸಂತೋಷ ಆಕೆಯ ಮುಖದಲ್ಲಿ ಕಾಣ್ತಾ ಇತ್ತು..!!

ಒಂದು ಕ್ಷಣ ಹೀಗೂ ಉಂಟಾ ಅನ್ಸಿದ್ದಂತು ಸತ್ಯ..!?



8. ನಾಗರತ್ನ ಚಂದ್ರಶೇಖರ್

ಕರ್ಣಗಳು ಕಠೋರವಾದರೆ



ಕಳೆದ ವರ್ಷದುದ್ದಕ್ಕೂ ದಂತ ಯಾತ್ರೆಯಲ್ಲಿ ಪಾಲ್ಗೊಂಡು ಬಳಲಿ, ಬೆಂಡಾಗಿ, ಬಸವಳಿದು, ಚೇತರಿಸಿಕೊಂಡು ಮನಸಾರೆ ಹಲ್ಲು ತುಂಬಾ ನಗಲು ಪ್ರಾರಂಭಿಸಿದೆನಷ್ಟೇ. ಆ ನಗು ಈ ವರ್ಷ ಮಾಯವಾಗಿ ಕರ್ಣಗಳು ಕಠೋರವಾಗ ಬಹುದೆಂಬ ಊಹೆಯೇ ಇರಲಿಲ್ಲ.

ಕಿವಿಗೂ ಕರ್ಣ ಅನ್ನೋ ಪದ ಬಳಸುವ ವಿಷಯ ಸಾಹಿತ್ಯ ಓದತೊಡಗಿದಾಗಷ್ಟೇ ತಿಳಿದದ್ದು. ಕರ್ಣ ಕುಂಡಲ ಅನ್ನೋ ಮುದ್ದಾದ ಪುಟ್ಟ ಹೂಗಳ ಸೌಂದರ್ಯ ಕಂಡು ಅದರ ಗಿಡಗಳನ್ನು ಮನೆಯಲ್ಲೇ ಹಾಕಿದ್ದು ಇದೆ. ದಾನಶೂರ ಕರ್ಣನ ಕಿವಿಯ ಕುಂಡಲಗಳೂ ನೆನಪಾಗಲೇ ಬೇಕು.

ಈ ಕಿವಿ ಮನುಷ್ಯನಿಗೆ ಎಷ್ಟು ಮುಖ್ಯ ಅನ್ನೋದು ಅದರ ಅಂದ ಚಂದಕ್ಕಷ್ಟೆ ಅಲ್ಲ, ಅಥವಾ ನಾವು ಹಾಕಿಕೊಳ್ಳಬಹುದಾದ ಕಿವಿಯ ಆಭರಣಗಳಿಗಾಗಿಯೂ ಅಲ್ಲ. ಬೇಕಿದ್ದು ಬೇಡಿದ್ದು ಎಲ್ಲವನ್ನೂ ಈ ಕಿವಿ ಕೇಳಿಸಿಕೊಂಡು ಜೀರ್ಣಸ್ಕೊಳ್ಳುತ್ತಲ್ಲ ಅದು ಅದರ ತಾಕತ್ತು. ಆದರೆ ಈ ಕಿವಿಯನ್ನು ಸದಾ ನಾವು ಟ್ಯೂನ್ ಮಾಡಿ ಇಟ್ಟುಕೊಂಡಿರಬೇಕು ಅಷ್ಟೇ. ಬಾಯಿ, ಕಿವಿ ,ಕಣ್ಣು ಮುಚ್ಚಿದ ಮೂರು ಮಂಗಗಳ ಚಿತ್ರವನ್ನು ಎಲ್ಲರೂ ನೋಡಿರುತ್ತಾರೆ. ಕೇಳಿದರೂ ಕೇಳದಂತಿರಬೇಕು ಈ ಕಿವಿಯಲ್ಲಿ ಕೇಳಿ ಆ ಕಿವಿಲೀ ಬಿಟ್ಟುಬಿಡಬೇಕು . ರಹಸ್ಯಗಳನ್ನಂತು ಗುಟ್ಟಾಗಿ ಕಿವಿಯೊಳಗೇ ಮೆಲ್ಲಗೆ ಹೇಳಬೇಕು. ಏಕೆಂದರೆ ಗೋಡೆಗಳಿಗೂ ಕಿವಿಗಳಿರುತ್ತದಂತೆ. ಆದರೆ ಕಿವಿನೇ ಕೇಳಿಸದಿದ್ದರೆ? ಅಯ್ಯೋ ರಾಮ !ನನ್ನ ಕಿವುಡನ ಮಾಡಯ್ಯಾಅಂತ ಯಾವಾಗಲೂ ಒಟ್ಗುಟ್ಟುತ್ತಿರುವ ಪತ್ನಿಯ ಕಿರಿಕಿರಿ ತಾಳಲಾರದ ಗಂಡಂದಿರು ಹೀಗೂ ಹೇಳಬಹುದಲ್ಲವೇ? ಏನಾದರೂ ಕವಿಗಳಿಗಂತೂ ಕೇಳುವ ಕಿವಿಗಳ ಅಗತ್ಯ ಇದ್ದೇ ಇದೆ ಅಲ್ಲವೆ? ಇನ್ನೂ ರಾಜಕಾರಣಿಗಳಂತು ಚುನಾವಣೆ ಸಮಯದಲ್ಲಿ ತಮ್ಮ ಭಾಷಣದ ಬಾಣಗಳನ್ನು ಬಿಡಲು ಯಾರಿಗಟ್ಟಲೆ ಜನರನ್ನು ಕ್ರೂಢೀಕರಿಸುತ್ತಾರೆ. ಮೈಕುಗಳು ಲೌಡ್ ಸ್ಪೀಕರ್ ಗಳು ಇವುಗಳ ಆರ್ಭಟದಿಂದ

ಚುನಾವಣೆಯ ಜ್ವರದ ಬಿಸಿ ಏರುತ್ತದೆ.ಜನ ನನ್ನ ಕಿವುಡನ ಮಾಡಯ್ಯ ಎನ್ನಬಹುದೇ?

ಒಂದು ಪಕ್ಷ ಮನುಷ್ಯರಿಗೆ ಕಿವಿಗಳೇ ದೇವರು ಸೃಷ್ಟಿ ಮಾಡಿದಿದ್ದರೆ ಏನಾಗುತ್ತಿತ್ತು ಗೊತ್ತಾ ಅಂತ ಒಬ್ಬ ಶಾಲಾ ಬಾಲಕನಿಗೆ ಕೇಳಿದಾಗ ಆತ ಅಯ್ಯೋ ಆಗ ನಾನು ಹೇಗೆ ಕನ್ನಡಕ ಹಾಕಿ ಕೊಳ್ಳಬೇಕಾಗುತ್ತದೆ ಎಂದು ನನಗೆ ಪ್ರಶ್ನೆ ಹಾಕಿದ.

ಇಂತಪ್ಪ ಕಿವಿಗಳಿಗೆ, ಕಿವಿಯೊಳಗೆ ಒಂದು ಅದ್ಭುತ ಜಗತ್ತೇ ಅಡಗಿದೆ ಎಂದು ಕೊಂಡಾಡುತ್ತಾ ನನ್ನ ಕರ್ಣಗಳೇಕೆ ಕಠೋರವಾದವು ಎಂಬ ಪ್ರಸಂಗಕ್ಕೆ ಬರುವೆ. ಇದ್ದಕ್ಕಿದ್ದಂತೆ ನನ್ನ ಎರಡು ಕಿವಿಗಳಲ್ಲಿ ಶಬ್ದಗಳ ಮೊರೆತ ಪ್ರಾರಂಭವಾಗಿತ್ತು. ಬೆಳ್ಳುಳ್ಳಿ ಚಿಕಿತ್ಸೆಗೂ ಬಗ್ಗದೆ ಕಡಲೊಂದು ಕೊರೆಯುತ್ತಿದೆ ಕಿವಿಗಳೊಳಗೆ ಹಗಲು ರಾತ್ರಿ ಬಿಡದೆ ಕಾಡುತಿದೆ. ಎಂದು ಕವನ ಗೀಚುವಂತಿತ್ತು. ತಲೆ ಚಿಂಟು ಹಿಡಿಯುವಂತದಾಗ ಯಾರಾದರೂ ಈ ಅಂಟಿ ವೈದ್ಯರ ಬಳಿ ತೋರಿಸಲೇಬೇಕು ಎಂಬ ನಿಶ್ಚಯವಂತು ಆಯಿತು ಅಷ್ಟರೊಳಗೆ ಒಂದು ಸಂಜೆ ಕೂತಿದ್ದವಳು ಎದ್ದ ಕೂಡಲೇ ತಲೆ ದಿಂ ಎಂದು ಕಣ್ಣು ಕತ್ತಲೆ ಬಂದಂತಾಗಿ ಗಾಳಿಯಲ್ಲಿ ತೇಲಾಡಿದ ಅನುಭವ. ಅದೇ ರಾತ್ರಿ ವೈದ್ಯರ ಬಳಿ ದೌಡಾಯಿಸಬೇಕಾಯಿತು ನನ್ನ ಗಂಡನ ಕೈಹಿಡಿದೆ ನಡೆಯಲು ಶುರು ಮಾಡಿದೆ ನನ್ನನ್ನು ಅಲ್ಲಿ ಅಲ್ಲ ನನ್ನ ಕಿವಿಯನ್ನು ಪರೀಕ್ಷಿಸಿದ ವೈದ್ಯರು ಮೊದಲಿಗೆ ಕಿವಿ ಒಳಗೆ ಮೇಣ ಅಂದರೆ ಗುಗ್ಗೆ ಏನಾದರೂ ಇದೆಯಾ ಎಂದು ಪರೀಕ್ಷಿಸಿ, ಏನೂ ಇಲ್ಲ ಎಂದು ದೃಢಪಡಿಸಿಕೊಂಡು ಬಿಪಿ ನಾರ್ಮಲ್ ಆಗಿದ್ದರಿಂದ ಈ ತಲೆ ತಿರುಗಲು ಕಾರಣ ವರ್ಟಿಗೋ ಎಂದು ತಿಳಿಸಿ ಮೂರು ದಿನ ಬೆಡ್ ರೆಸ್ಟ್ ಎಂದರು ಮೂರು ಬೆಡ್ರೂಮ್ ಗಳಿರುವ ಮನೆಯಲ್ಲಿ ಬೆಡ್ಡುಗಳು ಏನೋ ಸಾಕಷ್ಟಿತ್ತು ನಿಜ .ಆದರೆ ರೆಸ್ಟು? ದೊಡ್ಡ ಬಾಡಿಗೆ ಮನೆಯಲ್ಲಿ ರಾಜರಾಣಿಯಂತೆ ನಾವಿಬ್ಬರೇ ಇರುವುದು. ಸ್ವಯಂಕೃತ ಅಪರಾಧದಿಂದಾಗಿ ಅಡಿಗೆ, ಪಾತ್ರೆ ,ಎಲ್ಲದರ 24/7 ನಾನೇ ಉಸ್ತುವಾರಿ ಒಡತಿ. ದಾರಿಗೊಂದು ಹೋಟೆಲ್ ರೆಡಿಮೇಡ್ ದೋಸೆ ಇಡ್ಲಿ ಹಿಟ್ಟು ಇವೆಲ್ಲ ಇರುವಾಗ ಗಂಡಂದಿರ ಅಡುಗೆ ಬಗ್ಗೆ ಮರುಕ ಪಡುವ ಅಗತ್ಯ ಇರೋಲ್ಲ .ಆದರೂ ಆ ರಾತ್ರಿ ಪತಿದೇವರು ಮಾಡಿಕೊಟ್ಟ ದೋಸೆಯಿಂದಾಗಿ ಹೇಗೋ ಒಂದು ದಿನ ಕಳೆಯಿತು .ಮಾತ್ರೆ ಗಳಿಂದಾಗಿ ಜಗತ್ತು ತಿರುಗುವುದು ಸ್ವಲ್ಪ ನಿಧಾನವಾಗಿತ್ತು. ಉಳಿದಿದ್ದ ದೋಸೆ ಹಿಟ್ಟು ಫ್ರಿಜ್ನಲ್ಲಿದ್ದ ಸಾಂಬಾರ್ ಎಲ್ಲಾ ಸೇರಿ ಎರಡನೇ ದಿನವೂ ಸುಸೂತ್ರವಾಗಿ ಕಳೆಯಿತು. ಮೂರನೇ ದಿನ ಬ್ಯಾಕ್ ಟು ದ ಪೆವಿಲಿಯನ್, ಮತ್ತೆ ಅಡುಗೆ ಮನೆಯ ಸಾಮ್ರಾಜ್ಯದ ಅಧಿಪತ್ಯವಹಿಸಿಕೊಂಡೆ. ಕಿವಿಯಲ್ಲಿ ಸಮುದ್ರದ ಮೊರೆತ ಮಾತ್ರ ಹಾಗೆಯೇ ಮುಂದುವರೆದಿತ್ತು. ಮತ್ತೆ ವೈದ್ಯರ ಸಲಹೆಯಂತೆ

ಆಡಿಯೋ ಮೆಟ್ರಿ ಅಂದರೆ ಶ್ರವಣ ಪರೀಕ್ಷೆಗೆ ಹೋಗಬೇಕಾಯಿತು. 20 ನಿಮಿಷ ಬಗೆಯ ಬಗೆಯ ಶಬ್ದಗಳು ನನ್ನ ಕಿವಿಯೊಳಗೆ ತೂರಿ ಹೊರಗೆ ಬಂದು ನನ್ನ ಬಲಗಿವಿಯ ಶ್ರವಣಶಕ್ತಿ ಕಡಿಮೆ ಎಂದೂ ಅದಕ್ಕಾಗಿ ಹಲವಾರು ಬಗೆಯ ಶ್ರವಣ ಆಭರಣ ಕುರಿತು ಹೇಳತೊಡಗಿದರು .ಮನೆಯಲ್ಲಿ ನನಗಿಂತ ಪತಿದೇವರಿಗೆ ಶ್ರವಣ ಶಕ್ತಿ ಕಡಿಮೆ ಎಂದು ಇದುವರೆಗಿನ ಅನ್ನ ಅನುಭವ ಸುಳ್ಳು ಎಂದಾಯಿತು. ನಾವಿದ್ದ ಹಳೆಯ ಮನೆಯ ಮೊದಲ ಮಹಡಿಯಲ್ಲಿ ಕಂಪ್ಯೂಟರ್ ಮುಂದೆ ಯಾವಾಗಲೂ ಪಟ್ಟಾಭಿಷಕ್ತರಾಗಿರುತ್ತಿದ್ದ ಅವರನ್ನು ತಿಂಡಿ,ಊಟಕ್ಕೆ ಕೆಳಕ್ಕೆ ಬರುವಂತೆ ಕರೆದು ,ಕರೆದು ಸಾಕಾಗುತ್ತಿತ್ತು .ಈಗ ಹೊಸ ಬಾಡಿಗೆ ಮನೆಯಲ್ಲಿ ಕೂಗಳತೆಯಲ್ಲಿ ಒಂದೇ ಅಂತಸ್ತಿನಲ್ಲಿ ಇರತೊಡಗಿದ ಮೇಲೆ ನನ್ನ ಕಿವಿಯೇಕೆ ಕಿವುಡು ಆಗುವ ದಾರಿಯಲ್ಲಿದೆ ಎಂದು ಚಿಂತಿಸುವಂತಾಯಿತು. ವಜ್ರದೋಲೆ ಕೊಡಿಸಿ ಎಂದು ಕೇಳಬೇಕಾದ ವಯಸ್ಸಿನಲ್ಲಿ ಕಿವಿಗೆ ಹಿಯರಿಂಗ್ ಎಯಿಡ್ ಕೊಡಿಸಿ ಎನ್ನುವಂತಾಗಿದ್ದು ನನ್ನ ದುರದೃಷ್ಟ. ಆಡಿಯೋ ಮೆಟ್ರಿ ಫಲಿತಾಂಶ ಹಿಡಿದು ವೈದ್ಯರನ್ನು ಮತ್ತೆ ಮರುಭೇಟಿ ಮಾಡಿದಾಗ ಅವರ ಸಲಹೆಯಂತೆ ಒಂದು ತ್ರೀ ಟಿ ಎಂಆರ್ಐ ಸ್ಕ್ಯಾನ್ ಮಾಡಿಸಬೇಕೆಂದರು. ಮತ್ತೆ ಸರ್ಕಸ್ ಶುರುವಾಯಿತು ಎಂಆರ್ಐ ಸ್ಕ್ಯಾನ್ ಬಗ್ಗೆ ಭಯಕ್ಕಿಂತ ಹೆಚ್ಚಾಗಿ ಕುತೂಹವೇ ಜಾಸ್ತಿ ಇದ್ದುದ್ದರಿಂದ ನನ್ನ ತಲೆಯೊಳಗೆ ಏನಿದೆ ?ಏನಾದರೂ ಇನ್ನು ಮುಂದೆ ಬರೆಯಬಹುದಾದ ಕಥೆ ಕಾದಂಬರಿಗಳ ವಿಷಯ ಸ್ಟಾಕ್ ಇರಬಹುದು ,ಹೀಗೆ ನನಗೆ ನಗೇ ಬರಿಸುವ ಆಲೋಚನೆಗಳನ್ನು ಎಲ್ಲರೊಂದಿಗೆ ಹೇಳುತ್ತಾ ನಿರಾಳವಾಗುತ್ತಿದ್ದೆ. ನಿನ್ ತಲೆ ಒಳಗೆ ಏನಿದೆ ಮಣ್ಣು ,ಸಗಣಿ ಅಂತ ಕೆಲವು ಅಧ್ಯಾಪಕರು ಶಿಷ್ಯರನ್ನು ಬೈಯುವುದನ್ನು ಕೇಳಿದ್ದೆ. ಹಾಗಾದರೆ ಒಬ್ಬ ಬರಹಗಾರಳ ತಲೆಯೊಳಗೆ ಮಣ್ಣಿಗೆ ಬದಲು ಒಂದಷ್ಟು ಕಥಾ ವಸ್ತುಗಳ ವಿಷಯ, ಕವಿತೆಯ ಸಾಲುಗಳಾದರು ಕಾಣಿಸಿಕೊಳ್ಳಬಹುದೇ? ಕೊನೆ ಪಕ್ಷ ನನ್ನ ಎರಡು ಕಿವಿಗಳಲ್ಲಿ ಕೊರೆತ ಮಾಡುತ್ತಿರುವ ಯಾವುದಾದರೂ ಹುಳವೋ ಯಂತ್ರವೋ ಇದ್ದೀತು.ಹ.ಹ.ಹ.

ಅಂತೂ ಮುಂದೆ ಒಂದು ದಿನ ಎಂ ಆರ್ ಐ ಯಾನಕ್ಕೆ ಒಳ್ಳೆಯ ಗಗನಯಾತ್ರಿಯನ್ನು ಕರೆದೊಯ್ಯುವ ಯೋಮನೌಕೆಯ ಒಳಗೆ ಹೋಗುವ ಮುನ್ನ ನನ್ನ ತೂಕ, ಎತ್ತರ ನೋಡಲು ಕರೆದೊಯ್ದರು. ಯಂತ್ರದಿಂದ ಹೊರಬಂದ ಮೇಲೆ ನನ್ನ ತೂಕ ಎತ್ತರದಲ್ಲಿ ಏನಾದರೂ ವ್ಯತ್ಯಾಸ ಆಗಬಹುದೇ ಎಂದು ನಗುತ್ತಾ ವಿಚಾರಿಸಿದೆ. ಆಮೇಲೆ ಒಂದು ಫಾರಂ ಗೆ ನನ್ನ ಒಪ್ಪಿಗೆ ಸಹಿಯನ್ನು ಹಾಕಿಸಿಕೊಂಡರು. ಒಳಗೆ ಹಾಸಿಗೆಯ ಮೇಲೆ ಮಲಗಿಸಿ ರಗ್ಗು ಹೊದಿಸಿ ಎರಡು ಕಿವಿ ಮುಚ್ಚುವಂತೆ ಬಿಗಿಯಾದ ಹೆಡ್ ಪೋನ್

ಹಾಕಿದರು. ತಲೆಯ ಮೇಲಿನ ಶಿರಸ್ತ್ರಾಣ ಒಂದು ಚಪ್ಪರದಂತೆ ಅನೇಕ ಕಿಂಡಿಗಳಿದ್ದವು. ಎದೆಯ ಮೇಲೆ ಒಂದು ಪುಟ್ಟ ಬಟನ್ ಇಟ್ಟು ತುರ್ತು ಪರಿಸ್ಥಿತಿ ಏನಾದರೂ ಬಂದರೆ ಅಂದರೆ ನಮಗೆ ಭಯ ಅಥವಾ ಬೇರೆ ತೊಂದರೆಯಾದರೆ ಬಟನ್ ಒತ್ತುವಂತೆ ಹೇಳಿ

ನನ್ನನ್ನು ಬಿಟ್ಟು ಬಾಗಿಲು ಮುಚ್ಚಿದರು. ನನ್ನ ತಲೆ ಪೂರ್ತಿ ಚಕ್ರವ್ಯೂಹದೊಳಗೆ ಹೋಯಿತು. ಮುಂದೆ ಶಾಕಿನಿ ಡಾಕಿನಿಯರ ಕುಣಿತ ಪ್ರಾರಂಭವಾದಂತೆ ಡಂ ಡಂ ಡಕ್ ಡಕ್ ಡಂ ಡಂ ಡಕ ಡಕೀ ಪಕ್,ಪಕ ಹೀಗೆ ಎರಡು ನಿಮಿಷಗಳಿಮ್ಮೆ ಚಿತ್ರ, ವಿಚಿತ್ರ ಭಯಂಕರ ಶಬ್ದಗಳು ಕಿವಿಗಪ್ಪಳಿಸುತ್ತ ಹತ್ತಾರು ಬಗೆಯ ಶಬ್ದ ತರಂಗಗಳನ್ನು ಕೇಳುತ್ತಾ ಇಪ್ಪತ್ತು ನಿಮಿಷ ಕಳೆಯಿತು. ನಾನು ಮಲಗಿದ್ದ ಯೋಮನೌಕೆ ಧರೆಗಿಳಿದಿರಬೇಕು. ಶಬ್ದ ನಿಂತಿತು. ಬಾಗಿಲು ತೆಗೆದು ಒಳಗೆ ಬಂದವರು ಪರೀಕ್ಷೆ ಮುಗಿಯಿತು ಹೊರಗೆ ಕೂತಿರಿ ಎಂದು ಹೊರಕ್ಕೆ ಕಳಿಸಿದರು. ಅದೇಕೆ ಅಷ್ಟು ಭಯಂಕರ ಶಬ್ದಗಳು ಬರುತ್ತಿದ್ದವು ಎಂದು ನಾನು ಕುತೂಹಲದಿಂದ ವಿಚಾರಿಸಿದಾಗ ಅವರು ಹೇಳಿದ್ದೆಂದರೆ ಆ ಶಬ್ದದಿಂದಲೇ ಚಿತ್ರಗಳನ್ನು ತೆಗೆಯಲು ಸಾಧ್ಯ ಅವು ಆಯಸ್ಕಾಂತ ರೂಪಗಳಂತೆ. ಅಂತೂ ಇಂತೂ ಸ್ಕ್ಯಾನಿಂಗ್ ಮುಗಿದು ಹೊರ ಬಂದಾಗ ಫಲಿತಾಂಶದ ಬಗ್ಗೆ ಪರೀಕ್ಷೆ ಬರೆದ ವಿದ್ಯಾರ್ಥಿಯಷ್ಟೇ ಆತಂಕ. ಮುಂದಿನ ಭೇಟಿ ನ್ಯೂರಾಲಜಿಸ್ಟ್ ಅಂದರೆ ನರರೋಗ ತಜ್ಞರನ್ನು ಭೇಟಿಮಾಡುವುದು.

ಎಲ್ಲಾ ಪರೀಕ್ಷೆಗಳ ಫಲಿತಾಂಶ, ತಜ್ಞರ ಬೇಟಿಯ ನಂತರ ಗುಡ್ಡ ಅಗಿದು ಇಲಿ ಹಿಡಿದಂತಾಗಿತ್ತು. ಯಾವುದೇ ದೊಡ್ಡ ಸಮಸ್ಯೆ ಇಲ್ಲ ಎಂದು ಹೇಳಿದ ಮೇಲೆ ಕೆಲವು ದಿನಗಳು ವರ್ಟಿಗೋ ಸಮಸ್ಯೆಗಾಗಿ ಮಾತ್ರೆಗಳನ್ನು ನುಂಗಬೇಕಾಗಿತ್ತು ಹಾಗೂ ಬೇಕಿದ್ದರೆ ಕಿವಿಗೆ ಶ್ರವಣ ಸಾಧನವನ್ನು ಖರೀದಿಸಬಹುದಿತ್ತು ವಜ್ರಗಳು ಓಲೆಗಳ ಆಸೆಗಿಂತ ಶ್ರವಣ ಸಾಧನಗಳ ಬಳಕೆ ನನಗೆ ಹಿತ ಅನಿಸಲಿಲ್ಲ ಹಾಗಾಗಿ ನಾನು ಕಿವಿ ಇನ್ನೂ ಕೇಳುತ್ತಿದೆ ಚೆನ್ನಾಗಿ ಎಂದು ಸಮಾಧಾನ ಮಾಡಿಕೊಂಡು ಸುಮ್ಮನಾದೆ .

ನಮಗೆ ವಯಸ್ಸು ಆಗುತ್ತಾ ಬಂದಾಗ ಹಲ್ಲು ಸೆಟ್ಟು ಕಿವಿ ಸೆಟ್ಟು, ಸೊಂಟದ ಬೆಲ್ಟು, ಕುತ್ತಿಗೆ ಬೆಲ್ಟ ಮಂಡಿ ನೋವಿಗೆ ಹಾಕುವ ನೀ ಕ್ಯಾಪ ,ಹೀಗೆ ಒಂದಕ್ಕಿಂತ ಒಂದು ಸುಂದರ ಆಭರಣಗಳು ಆಪತ್ಬಾಂಧವರಂತೆ ನಮ್ಮ ಜೊತೆಗೆ ಅಂಟಿಕೊಂಡು ಬಿಡುತ್ತಾರೆ. ಇವರೆಲ್ಲ ನೆಂಟರಂತೆ ಬಂದು ಹೋಗಿ ಮಾಡುವಂತಿದ್ದರೆ ಚೆನ್ನ. ಆತ್ಮ ಸಂಗಾತಿಗಳಾದರೆ ಕಷ್ಟ. ಇತ್ತೀಚೆಗೆ ಸಂಗೀತ ಸಭೆಗಳಿಗೆ ನಾವು ಹೋಗುತ್ತಿರುವೆವು.ಕಿವಿಯ ಮೊರೆತವನ್ನು ಮರೆಸುವ ಸಂಗೀತ ಎಷ್ಟು ಹಿತವಾಗಿರುತ್ತದೆ ಎನಿಸುತ್ತಿದೆ.ಏನಂತೀರ?



9. ಮಾಧುರಿ ಕೃಷ್ಣ

ನಾನೂ, ನನ್ನ ಸಹಪಾಠಿ ಮಿತ್ರನೂ
ಲೇಖನ -- 6
ಅಡಿಯ ಮುಂದಿಡೆ ಸ್ವರ್ಗ..........

ಅದು ನನ್ನ ಮೂರನೇದು...ಅಲ್ಲಲ್ಲ ನಾಲ್ಕನೇಯ ಭೇಟಿಯಾಗಿತ್ತು. ಪೂರಾ 50 ವರ್ಷಗಳ ನಂತರ, ಮೂರು ವರ್ಷ ಒಟ್ಟಿಗೆ ಓದಿದ ಸಹಪಾಠಿಯನ್ನು ಭೇಟಿಯಾಗುವ ಅವಕಾಶ ದೊರೆತು ಬಂದು, ಈಗ ಮತ್ತೊಮ್ಮೆ ಭೆಟ್ಟಿಯಾಗಲು ಬಂದಿದ್ದೆ. ಎಂದಿನಂತೆ ಒಳ ಹೊಕ್ಕವಳಿಗೆ ಆತನ ಮೊಮ್ಮಗ ಎಳನೀರ ಆತಿಥ್ಯ ನೀಡಿದ, ಕುಡಿದು ಲೋಟ ಕೆಳಗಿಟ್ಟು ನನ್ನ ಪುಟ್ಟ ಕರ್ಚೀಫಿನಿಂದ ಬಾಯಿ ಒರೆಸಿಕೊಂಡೆ. ನನ್ನನ್ನೇ ಕುಳಿತು ದಿಟ್ಟಿಸುತ್ತಿದ್ದ ಮಿತ್ರನ ಮುಖದಲ್ಲಿನ ಮಂದಹಾಸವನ್ನು ಊಹಿಸಿ ಗ್ರಹಿಸಿ ಕೊಂಡ ನನ್ನಲ್ಲೂ ಒಂಥರಾ ತೃಪ್ತಿಯುಂಟಾಯಿತು.ಆತನ ಹೆಣ್ಣುಮಕ್ಕಳು ಆಚೀಚೆ ಕುಳಿತು ಕಾಯುತ್ತಿದ್ದರು. ಮಿತ್ರನ ಮಡದಿ ಎಂದಿನ ಮುಗ್ಧಭಾವದಿಂದ ಒಮ್ಮೆ ನನ್ನನ್ನೂ ಮತ್ತೊಮ್ಮೆ ಅವನನ್ನೂ ನೋಡುತ್ತಲೇ ಇದ್ದಳು. ಯಾಕೋ ಮೌನ ತುಸು ಉದ್ದವೇ ಬೆಳೆಯಿತಲ್ಲ ಎಂದನಿಸಿ, ಮಾತು ಶುರು ಮಾಡಲು ಗಂಟಲು ಸರಿಪಡಿಸಿಕೊಳ್ಳುತ್ತ," ಅಲ್ಲೋ ಮಾರಾಯಾ "ಎನ್ನುವಷ್ಟರಲ್ಲೇ ಮಿತ್ರನೂ, "ಅಲ್ಲ ಮಾರಾಯ್ತಿ.." ಎಂದು ಹೇಳುವುದೂ ಒಟ್ಟಿಗೇ ಆಗಿ, ಈ ಕಾಕತಾಳೀಯಕ್ಕೆ ಅವನೂ ನಾನೂ ಫಟ್ಟೆಂದು ಬಾಯಿ ಮುಚ್ಚಿ ಬಿಟ್ಟೆವು. ವಿಚಿತ್ರ ನಿಶ್ಶಬ್ಧವೊಂದು ಮನೆ ತುಂಬ ಜ್ಯಾರಿಯಾಯಿತು. ಸನ್ನಿವೇಶ ಏನೆಂದು ಅವನ ಮಕ್ಕಳಿಗೆ ಮೊದಲು ಗೊತ್ತಾಗಲಿಲ್ಲ. ಆದರೆ ಮಿತ್ರನ ಆ ಚೂಟಿ ಮೊಮ್ಮಗನಿದ್ದಾನಲ್ಲ , ಅವನು ಇದ್ದಕ್ಕಿದ್ದಂತೆ ಬಾಯಿ ತೆರೆದು , " ಹ್ಹೆ ಹ್ಹೇ... ಅಜ್ಜಾ , ನೀವು ಮತ್ತು ಈ ಆಂಟಿ ಇಬ್ಬರೂ ಒಟ್ಟಿಗೇ ಮಾತಾಡಲು ಶುರು ಮಾಡಿದ್ದು, ಎಂಥ ಫನ್ನೀ ಅಲ್ಲವೇ?" ಎಂದು ತನ್ನ ಇಂಗ್ಲೀಷ್ ಮಾಧ್ಯಮ ಪ್ರಚುರ ಪಡಿಸಿದ.

ಈಗ ಮಾತ್ರ ಮಾತು ಅರ್ಧದಲ್ಲಿ ನಿಲ್ಲಿಸಿದ ನನಗೂ, ನನ್ನ ಮಿತ್ರನಿಗೂ ಅಲ್ಲದೇ ಅರ್ಥವಾದ ಅವನ ಹೆಣ್ಣು ಮಕ್ಕಳಿಗೂ ನಗು ಬಂದೇ

ಬಿಟ್ಟಿತು. ಮುಂದಿನ ಎರಡು ಮೂರು ನಿಮಿಷ ಮನೆ ನಗೆಗಡಲಲ್ಲಿ ತೇಲಾಡಿತು. ಕೊನೆಗೂ ಆ ನಗು ಕಡಿಮೆಯಾಗುತ್ತಿದ್ದಂತೆ ನನ್ನ ಮಿತ್ರನೇ ಮೊದಲು ಕೇಳಿದ," ಅಲ್ಲಾ, ನೀನೇನನ್ನು ಹೇಳಲು ಹೊರಟಿದ್ದೆ?" ನನಗೆ ಫಜೀತಿಯಾಯಿತು. ' ಹೌದಲ್ಲ, ನಾನೇನನ್ನು ಹೇಳಲು ಹೊರಟಿದ್ದೆ! "ಎಷ್ಟು ಯೋಚಿಸಿದರೂ ತಲೆಗೆ ಹೊಳೆಯಲೇ ಇಲ್ಲ. "" ನೀನೇನು ಹೇಳಲು ಶುರು ಮಾಡಿದ್ದೆ ಎಂದು ಮೊದಲು ಹೇಳು ,ಆಮೇಲೆ ನಂದು ನಾನು ಹೇಳುತ್ತೇನೆ "ಎಂದೆ ಉಪಾಯವಾಗಿ. " ನಾ...ನೇನನ್ನು ಹೇಳಲು ಹೊರಟಿದ್ದೆ ಎನ್ನುವುದು ನಂಗೆ ಮರೆತೇ ಹೋಯಿತು, ನಿಂದಾದರೂ ಹೇಳೀಗ, ಕೇಳುವಾ. ." ಎಂದ ಪ್ರಾಮಾಣಿಕವಾಗಿ ಪಾಪದವ! ಈಗ ಪುನಹ ಸಿಕ್ಕಿ ಬಿದ್ದದ್ದು ನಾನೇ :ಏನು ಹೇಳಬೇಕೆಂದಿದ್ದೆ? ತಲೆ ತುರಿಸಿಕೊಳ್ಳತೊಡಗಿದೆ. ಅಷ್ಟರಲ್ಲೇ ಏನೋ ಕಂಡು ಹಿಡಿದವನಂತೆ " ಹ್ಹೆ ಹ್ಹೇ..ನಿಂಗೂ ಮರೆತೇ ಹೋಯಿತೇ..!" ಎಂದ ಖುಷಿಯಲ್ಲಿ. ಇಬ್ಬರೂ ಒಂದೇ ವಯಸ್ಸಿನವರು.. ವಯಸ್ಸಾದಂತೆ ಮರೆಯುವುದು ಸಹಜ ತಾನೇ! ಆದರೂ ಬಿಗುಮಾನ ಎನ್ನುವುದೊಂದು ಉಂಟಲ್ಲ! ಇದ್ದಕ್ಕಿದ್ದಂತೆ ಮಾತೊಂದು ಬಾಯಿಗೆ ಬಂದೇ ಬಿಟ್ಟಿತು. "ಅಲ್ಲೋ ಮಾರಾಯಾ, ಆವತ್ತೊಂದು ದಿನ ಜೋರಾಗಿ ಮಳೆ ಹೋಡೀತಿತ್ತು, ನಮ್ಮ ಗೋಳಿಮರದ ಬೊಬ್ಬರ್ಯನಿಗೆ ಹಾಗೂ ಗಂಟೆ ಬಾರಿಸಿ ಮರ ದಾಟಿ ನರಿ ಬ್ಯಾಣಕ್ಕೆ ನಾವು ನಾಲ್ಕು ಮಂದಿಯೂ ಕಾಲಿಟ್ಟು ನಿಂತು ಬಿಟ್ಟಿದ್ದೆವು. ಹಾಕಿದ್ದ ಬಟ್ಟೆಯಲ್ಲೆವೂ ಆಗಲೇ ಒದ್ದೆಯಾಗಿತ್ತು.ಎದುರಿಗಿನ ಬೋಳು ಮೈದಾನವೆಲ್ಲವೂ ಸತತ ಮಳೆಯಿಂದ ಹಸಿರು ಹಸಿರಾಗಿ ಕಾಲಿಟ್ಟಲೆಲ್ಲ ಜಾರುವುದು ಗ್ಯಾರಂಟಿಯಿತ್ತು. ಅದರ ಮೇಲೆ ಬಸ್ಸು ನಿಲ್ಲಿಸಿ ಇಳಿದು ಬಂದ ನೀವು--ಪೋಲಿ ಹುಡುಗರು ನಮ್ಮ ಬೆನ್ನಿನ ಹಿಂದೆ !ಒಳ್ಳೇ ಇಕ್ಕಟ್ಟಿನ ಪರಿಸ್ಥಿತಿ ನಮಗೆ! ಎಂದಿನಂತೇ ಜತೆಗೂಡುತ್ತಿದ್ದ ಸ್ಥಳೀಯ ಹುಡುಗಿಯರೂ ಆವತ್ತು ಬಂದಿರಲಿಲ್ಲ. ನಾವು ನಾಲ್ಕು ಜನ ಮಾತ್ರ. ಏನು ಮಾಡುವುದೆಂದು ತಿಳಿಯುತ್ತಿರಲಿಲ್ಲ. ನಿಮ್ಮಗಳ ಚುಡಾಯಿಸುವಿಕೆ ಕ್ಷಣದಿಂದ ಕ್ಷಣಕ್ಕೆ ಹೆಚ್ಚಾಗುತಿತ್ತು. "ಸುಮ್ಮನೆ ಮುಂದೆ ಹೋಗುವುದಪ್ಪ, ಇಲ್ಲಾಂದ್ರೆ ನಮಗಾದರೂ ಜಾಗ ಬಿಟ್ಟು ಕೊಡೋದಪ್ಪ!" ಎಂದು ಫರ್ಲಾಂಗು ಉದ್ದಗಲದ ಬ್ಯಾಣವಿದ್ದರೂ ನಮ್ಮ ಹಿಂದೆಯೇ ನಿಂತು ಹೇಳುತ್ತಲೇ ಇದ್ದ ನೀವುಗಳು. ಅಂಥ ಮಳೆ ಹೊಡೆಯುತ್ತಿದ್ದರೂ ನಮ್ಮನ್ನು ಕಂಡೊಡನೆ ಕಂಡಕ್ಟರನಿಗೆ ಬಸ್ಸು ನಿಲ್ಲಿಸಲು ಹೇಳಿ ಇಳಿದು ಬಂದಿರಬೇಕು. ಬುದ್ಧಿ ಕಲಿಸುತ್ತೇನೆಂದು ಡ್ರೈವರು ಕೂಡಾ ನಿಲ್ಲಿಸಿದನೆಂದು ತೋರುತ್ತದೆ. ಒಟ್ಟಿನಲ್ಲಿ ಸಂಕಷ್ಟ ನಮಗೆ! "


ಆದದ್ದಾಗಲೀ, ನಾನಂತೂ ಮುಂದೆ ಹೆಜ್ಜೆ ಹಾಕುವವಳೇ...ಬರುವವರು ಬನ್ನಿ "ಎಂದು ನಿರ್ಧಾರ ತೆಗೆದುಕೊಂಡ ನಾನು, "ಅಡಿಯ ಮುಂದಿಡೆ ಸ್ವರ್ಗ... ಅಡಿಯ ಹಿಂದಿರೆ ನರಕ ಎಂದು ಹೇಳುತ್ತ ಎಡಗೈಯಿಂದ ಪಠ್ಯ ನೋಟ್ ಬುಕ್ಕಗಳನ್ನು ಎದೆಗೆ ಬಲವಾಗಿ ಅವುಚಿ ಹಿಡಿದು, ಹಾಗೆಯೇ ಕೊಡೆಯನ್ನೂ ಅದರಲ್ಲೇ ಬ್ಯಾಲೆನ್ಸ್ ಮಾಡುತ್ತ ಬಲಗೈಯಿಂದ ಸೀರೆಯ ನೆರಿಗೆಯನ್ನು ಸ್ವಲ್ಪ ಮೇಲೆ ಎತ್ತಿ ಹಿಡಿದು ಬೋಲ್ಡ ಹೆಜ್ಜೆ ಮುಂದಕ್ಕಿಟ್ಟೆ. ಉಳಿದ ಮೂವರೂ ಅಂತೆಯೇ ಗಡಬಡಿಸಿ ನನ್ನನ್ನೇ ಹಿಂಬಾಲಿಸಿದರು. ಒಂದು..ಎರಡು...ಮೂರು....ಹೆಜ್ಜೆಗಳು ಸರ್ರನೆ ಜಾರತೊಡಗಿದುವು.... ಜಾರುತ್ತಲೇ ಹೋದುವು. ಧೊಫ್ ಧೊಪ್ಪೆಂದು ಉರುಳುರುಳಿ ಬೀಳುವುದೂ ನಡೆಯತೊಡಗಿತು. "ಹೌದು ಮಾರಾಯಿತಿ.....ನೀನೋ ಅಡಿಯ ಮುಂದಿಡೆ ಸ್ವರ್ಗ ಎಂದುಕೊಂಡು ಮುಂದೆ ಕಾಲಿಟ್ಟದ್ದನ್ನು ನೋಡಿ , ನಾನೂ ಕಾಲಿಟ್ಟೇ ಬಿಟ್ಟೆ! ಜಾರಿತು ನೋಡು –– ಜಾರಿಕೊಂಡೇ ಹೋಗತೊಡಗಿದೆ ನಾನು...ಪಕ್ಕದಲ್ಲಿದ್ದವನು ಹಿಡಿಯ ಬಂದರೆ ,ಅವನೂ ಬಿದ್ದು ಬಿಟ್ಟ....ಒಬ್ಬರ ಹಿಂದೊಬ್ಬರು ಜಾರಿ ಬೀಳುತ್ತಲೇ ಹೋದೆವು. ಆ ಕ್ಷಣಕ್ಕೆ ಮಳೆಯೂ ಸ್ವಲ್ಪ ನಿಲ್ಲಿಸಿ ನಮ್ಮ ಫಜೀತಿಯನ್ನು ಎಲ್ಲರೂ ನೋಡುವಂತೆ ಮಾಡಿತು. ಏಳಲು ಯತ್ನಿಸಿದಾಗೆಲ್ಲ ಆರಡಿ ಉದ್ದದ ನಾನು ಮತ್ತೆ ಮತ್ತೆ ಬೀಳುವುದೇ ಆಯಿತು. ಬಟ್ಟೆಯೆಲ್ಲಾ ಚಂಡಿ ಚಂಡಿ! ಆ ಚಂಡಿ ವಸ್ತ್ರದಲ್ಲಿ ಕ್ಲಾಸಲ್ಲಿ ಕುಳಿತಿರುವುದು ಅಸಾಧ್ಯ ಎಂದು ಬಗೆದ ನಾನು ಮನೆಗೇ ವಾಪಾಸು ಹೋಗೋಣವೆಂದರೆ ಬಸ್ಸುಗಳಾದರೂ ಬರಬೇಕೇ? ಸರ್ವೀಸಿರುವುದೇ ಎರಡು ಗಂಟೆಗೊಮ್ಮೆ! ಅದೂ ಮಳೆಯಿಂದಾಗಿ ಆವತ್ತು ಇನ್ನಷ್ಟು ತಡ ! ಕೊನೆಗೂ ಮನೆ ಮುಟ್ಟುವಾಗ 104% ಡಿಗ್ರಿ ಜ್ವರವಿದ್ದಿರಬಹುದು. ಎಂಟು ದಿನ ಹೋಡೀತು ನೋಡು...ಯಾವ ನೇರಿಳೆ ಕುಡಿ ಕಷಾಯಕ್ಕೂ ಬಗ್ಗದೇ, ನಿಮ್ಮಪ್ಪಯ್ಯನ ಕ್ಲಿನಿಕ್ಕಿಗೇ ನಮ್ಮಪ್ಪಯ್ಯ ಬಾಟ್ಲಿ ಹೊತ್ತು ಬರಬೇಕಾಯ್ತು ನೋಡು " ಎಂದು ತನ್ನ ಪ್ರವರ ಹೇಳಿದ ಮಿತ್ರ.

ಹಾಗಯೇ ಮತ್ತೂ ಮಾತು ಮುಂದುವರೆಸಿ, " ಹೌದೂ, ನಿಮ್ಮಲ್ಲಿ ಇಬ್ಬರಾದರೋ ತುಂಡು ಲಂಗ ಸ್ಕರ್ಟನಲ್ಲಿ ಇದ್ದಿದ್ದು, ಆದರೆ ನೀನು ಮತ್ತೊಬ್ಬಳು ಸೀರೆಯನ್ನು ಸುತ್ತಿಕೊಂಡವರು...ಅದು ಹೇಗೆ ಸಾರಾ ಸಲೀಸಾಗಿ ಆ ಮಳೆಯಲ್ಲೂ, ಆ ಜಾರು ನೆಲದಲ್ಲೂ ಬೀಳದೆ ಏಳದೆ ಅಷ್ಟೂ ದೂರ ನಡೆದು ಕ್ಲಾಸಿಗೆ ಹೋಗಿ ಕುಳಿತುಕೊಂಡದ್ದು!! ಅವನ ಮುಖವನ್ನೇ ನೋಡಿದೆ .50 ವರ್ಷಹಿಂದಿನಿಂದಲೂ ಈ ಪ್ರಶ್ನೆಯೊಂದು ನನ್ನ ಮಿತ್ರನನ್ನು ಕಾಡುತ್ತಾ

ಬಂದಿತ್ತು ಎಂದು ನನಗೆ ತೋಚಿತು ..ಈ ಮೊದಲ ಅಪಾರ್ಚುನಿಟಿ ದೊರೆತಾಗಲೇ ನನ್ನನ್ನು ಕೇಳೇ ಬಿಟ್ಟ! ಅಲ್ಲಿಗೆ ನಿಲ್ಲಿಸಿದನೇ ಇಲ್ಲಾ, ಇನ್ನೊಂದು ಮಾತನ್ನೂ ನನ್ನ ಮುಖಕ್ಕೆ ಎಸೆದೇ ಬಿಟ್ಟ.."ಅಲ್ಲಾ ಮಾರಾಯಿತಿ,ನಾವು ಅಷ್ಟೂ ಹುಡುಗರು ಮೇಲೇಳಲಾಗದೆ ಜಾರಿ ಜಾರಿ ಬೀಳುತ್ತಿದ್ದರೂ ನೀವು ನಾಲ್ಕು ಹುಡುಗಿಯರೂ, ಒಮ್ಮೆಯಾದರೂ ಹಿಂದಿರುಗಿ ನೋಡದೆ ಸೀದಾ ಕಾಲೇಜು ಮೆಟ್ಟಲು ಹತ್ತಿ ಹೋಗಿಯೇ ಬಿಡೋದಾ ?

ಪಾಪ..ಈ ಹುಡುಗರು ಎನ್ನುವ ಕರುಣೆ ನೀವು ಪುಣ್ಯಾತ್ಮಗಿತ್ತಿಯರಲ್ಲಿ ಸ್ವಲ್ಪವೂ ಇರಲಿಲ್ಲವೇ????

10 ಭ.ರಾ.ವಿಜಯಕುಮಾರ್




ವಿವೇಚನೆ

ಕಾರಿರುಳು ಕಗ್ಗತ್ತಲೇನು ಕಾಣದು ಎಂದು
ಕಂಗಳೇ ಬೇಡವೆಂದೆನುವಿರೇನು?
ಕತ್ತಲಿನ ಆಕರ್ಶದನುಭವದ ಸೊಗಸಲ್ಲಿ
ಅಂಧತನದನುಭವವು ಇಲ್ಲವೇನು!?
ಬೆಳಕಿನಾ ಹಪಹಪಿಯು ಬಾರದೇನು?

ಬೆಳಕು ತೋರುವುದೆಲ್ಲವನು ಎಂದೆನುತ
ರವಿಯ ಎವೆಯಿಕ್ಕದೆಯೆ ನೋಡಲಹುದೆ?
ಕ್ಷಣದಲ್ಲೆ ಕಣ್ಗತ್ತಲೆಗೆ ನೋಟ ಮರೆಯಾಗೆ
ಸುತ್ತೆಲ್ಲ ಬೆಳಕಿದ್ದು ಕಾಣಲಹುದೇ?
ಪ್ರತಿಫಲನವೇ ಸಾಕು ಎನ್ನಬಹುದೇ?

ಉರಿವ ಬೆಂಕಿಗೆ ಸಿಲುಕಿ ನರಳುವವರನು ಕಂಡು
ಬೆಂಕಿಯುರಿಯನುಭವವು ತಿಳಿಯದೇನು?
ನನ್ನರಿವಿಗೇ ಬಂದ ಅನುಭವವೆ ತಿಳಿವೆಂದು
ನೀನೆ ಸುಡುಬೆಂಕಿಯಲಿ ನೆಗೆವೆಯೇನು?
ಸಹಜೀವದನುಭವವು ಸಾಲದೇನು?

ಅತಿಬುದ್ಧಿ ಅತಿಜ್ಞಾನ ಅತಿಗಳನು ಮಿತಿಮಾಡಿ
ಸರಳ ಬದುಕಿನ ಸಹಜ ಮರ್ಮ ತಿಳಿದು
ಎಲ್ಲರಲಿ ನಾನೆಂದು ಪ್ರಕೃತಿಯೊಳು ಸಮನೆಂದು
ವಿವೇಕದನುಭವದಲ್ಲಿ ನಡೆಯಬೇಕು
ಬದುಕ ಸಾರ್ಥಕತೆಯನ್ನು ಪಡೆಯಬೇಕು



11. ಬೆಂಶ್ರೀ ರವೀಂದ್ರ

’ಕವಿ ನೆನಪು"
(ಕೆಎಸ್ ನ ಕುರಿತು, ಅಚ್ಚಿನಲ್ಲಿರುವ ಪುಸ್ತಕ)
ಬರೆದವರು -ಕೆಎನ್ ಮಹಾಬಲ



ಕನ್ನಡಿಗರ ನೆಚ್ಚಿನ ಕವಿ, ಕೆಎಸ್ ನರಸಿಂಹ ಸ್ವಾಮಿ. ಜನನ; ೧೯೧೫ ರ ಜನವರಿ, ೨೬. ಮೊದಲ ಕವನ, ಕಬ್ಬಿಗನ ಕೂಗು ,೧೯೩೩. ಮೊದಲ ಕವನ ಸಂಗ್ರಹ, ಮೈಸೂರ ಮಲ್ಲಿಗೆ, ೧೯೪೨. ಮೈಸೂರ ಮಲ್ಲಿಗೆಯಿಂದ ಅಪಾರ ಜನಪ್ರಿಯತೆ.

ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಅಶ್ವಥ್, ರತ್ನಮಾಲ, ಜಯವಂತಿ ದೇವಿ ಹಿರೇಬೆಟ್... ಮುಂತಾದ ಗಾಯಕರ ಧ್ವನಿಯಲ್ಲಿ ಕವನಗಳು ಕರ್ನಾಟಕದ ಜನಮನದ ಮೋಡಿ ಮಾಡಿತು. ಹಲವಾರು ಕವನ ಸಂಗ್ರಹಗಳ ಮೂಲಕ ಬೆಳೆದ ಕವಿ, ಶಿಲಾಲತೆಯ ಮೂಲಕ ಮತ್ತೊಂದು ಮಜಲು ತಲುಪಿದರು.

ಕಾವ್ಯವೇ ಪ್ರಮುಖ ಮಾಧ್ಯಮವಾದರೂ ಗದ್ಯ ಪ್ರಬಂಧ ಮತ್ತು ಅನುವಾದ ಮೂಲಕವೂ ಅಭಿವ್ಯಕ್ತಿ. ಹುಡುಕಿಕೊಂಡು ಬಂದ ಪ್ರಶಸ್ತಿಗಳು ಹಲವಾರು. ಎಲ್ಲಕ್ಕಿಂತ ಮಿಗಿಲಾದುದು ಕನ್ನಡಿಗರ ಎದೆಯಂಗಳದಲ್ಲಿ ಮೆತ್ತನೆಯ ಆಸನ.

೧೯೭೨, ಜಿಎಸ್‌ಎಸ್ ಅವರ ಸಂಪಾದಕತ್ವದಲ್ಲಿ ಅಭಿನಂದನ ಗ್ರಂಥ "ಚಂದನ" ಸೇರಿದಂತೆ , ನರಸಿಂಹ ಸ್ವಾಮಿಯವರ ಕಾವ್ಯ ಸಾಹಿತ್ಯದ ಬಗ್ಗೆ ಹಲವಾರು ಪುಸ್ತಕಗಳು. ವಿಮರ್ಶಕರಿಂದ ಅವರ ಕಾವ್ಯದ ಎಲ್ಲ ಮಗ್ಗುಲುಗಳ ಶೋಧ. ಅವರ ಕಾವ್ಯದ ಬಗ್ಗೆ ಅಧ್ಯಯನ ನಡೆಸಿದ ಹಲವರಿಗೆ, ಡಾಕ್ಟರೇಟ್. ಕಳೆದ ಶತಮಾನದ ಮೂರನೆಯ ದಶಕದಿಂದ, ಈ ಶತಮಾನದಲ್ಲೂ ಕೆಎಸ್ ನ ಅವರ ಛಾಪು ಮರೆಯಾಗಲಿಲ್ಲ. ಕನ್ನಡ ಸಾಹಿತ್ಯದ ಪುನರೋದಯ, ಬಿಎಂಶ್ರೀ ಕಾಲದಿಂದ , ಕನ್ನಡವು ಆಧುನಿಕ ಭಾಷೆಯಾಗಿ ರೂಪುಗೊಂಡ

ಪ್ರಯೋಗದ ಪ್ರಮುಖ ಅಂಗವೇ ಆಗಿದ್ದರು ಕೆಎಸ್‌ನ.

ಅವರ ಕವನಗಳ ಮೂಲಕ ಜನಸಾಮಾನ್ಯರು ಕನ್ನಡವನ್ನು ಪ್ರೀತಿಸಿದರು. ಸಂಸ್ಕೃತಿಯ ಆರಾಧಕರಾದರು. ಬೇಂದ್ರೆ ಮತ್ತು ಕೆಎಸ್ ನ ಅವರ ಕವನಗಳು, ಕವಿಯ ಹೆಸರನ್ನು ಅರಿಯದ ಜನಪದರ ಆಸ್ತಿಯಾದ ಹಾಡುಗಳು. ಇದೇ ನಿಜವಾದ ಪ್ರಶಸ್ತಿ .

ಈಗ, ಕೆಎಸ್ ನ ಅವರ ಬಗ್ಗೆ ,ತುಂಬಾ ಅಪರೂಪವಾದ ಪುಸ್ತಕ. ಅವರ ಮಗ, ಸ್ವತಃ ಕವಿ, ಬರಹಗಾರ, ಸಾಹಿತ್ಯ ಚಿಂತಕ, ಸಂಘಟಕ ಶ್ರೀ ಕೆಎನ್ ಮಹಾಬಲ ಅವರ "ಕವಿ ನೆನಪು". ಕುತೂಹಲ. ಇತರ ಬರಹಕ್ಕಿಂತ ಹೇಗೆ ಭಿನ್ನ ?.

ಕೆಎನ್ ಮಹಾಬಲ ಮೊದಲ ಅಧ್ಯಾಯದಲ್ಲಿ ಹೇಳುತ್ತಾರೆ, 'ಸಿರಿವಂತ ಸಾಹಿತ್ಯ ಪರಂಪರೆಯಲ್ಲಿ ಹುಟ್ಟಿ ಬೆಳೆದ ಮತ್ತು ಇನ್ನೂ ಜೀವಿಸುತ್ತಿರುವ ಭಾಗ್ಯವನ್ನು ಸದಾ ನೆನೆಯುತ್ತಾ ಕೆಎಸ್ ನ ಅವರ ಬದುಕು (ಸಾಮಾಜಿಕ, ಸಾಂಸ್ಕೃತಿಕ ಸಾಂಸಾರಿಕ) ಕಾರಣವಾದ ಪ್ರಸಂಗಗಳನ್ನು ಹಾಗೂ ಅವರು ನಿತ್ಯ ಕೃತಜ್ಞತೆಯಿಂದ ಸ್ಮರಿಸುತ್ತಿದ್ದ ವ್ಯಕ್ತಿಗಳನ್ನು ಈ ಲೇಖನ ಮಾಲೆಯಲ್ಲಿ ಚಿತ್ರಿಸುವ ಯತ್ನ ಮಾಡುತ್ತೇನೆ. ಪೂರ್ವಗ್ರಹವೂ ಅಲ್ಲದ ಪ್ರಶಂಸೆ - ಪಕ್ಷಪಾತವೂ ಅಲ್ಲದ ಒಂದು ಸುವರ್ಣಮಾರ್ಗವನ್ನು ಕ್ರಮಿಸಬೇಕಾದ ಜವಾಬ್ದಾರಿಯೂ ನನ್ನನ್ನು ಆವರಿಸಿದೆ'. ಇಡೀ ಪುಸ್ತಕ ಓದಿದ ನಂತರ ಮಹಾಬಲ , ತಮ್ಮ ಮಾತಿನಂತೆ ನಡೆದುಕೊಂಡಿದ್ದಾರೆ. ಅವರ ಗೆಳೆಯ ರವೀಂದ್ರರು ನೆನಪಿಸಿದ ' ಕವಿಜೀವನದ ಅಪರೂಪದ ಒಳನೋಟಗಳನ್ನು ಒದಗಿಸುವ ಸಾಂಸ್ಕೃತಿಕ ಜವಾಬ್ದಾರಿ' ಯನ್ನು ನಿಷ್ಠೆಯಿಂದ ನೆರವೇರಿಸಿದ್ದಾರೆಂದು ಖಂಡಿತವಾಗುತ್ತದೆ

೧೯೮೬ ರಲ್ಲಿ, ಕೆಎಸ್‌ನ ಅವರು ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಕ್ಕೆ ನೀಡಿದ, ಒಂದು ಸಂದರ್ಶನ (ಬೆಂಗಳೂರು ವಲಯ ಕಛೇರಿಯ 'ಸ್ಪಂದನ' ಸಂಚಿಕೆ, ಬಿಡುಗಡೆ; ಶ್ರೀ ಗೋಪಾಲಕೃಷ್ಣ ಅಡಿಗ)ವೂ ಸೇರಿದಂತೆ, ಒಟ್ಟು ೫೪ ಪುಟ್ಟಪುಟ್ಟ ಅಧ್ಯಾಯಗಳು. ಜೀವನ ಚರಿತ್ರೆಯಲ್ಲ, ಆದರೆ ಕೆಎಸ್ ನ ಬದುಕಿನ ಪ್ರಮುಖ ಘಟ್ಟಗಳು ಕಾಲಾನುಕ್ರಮದಲ್ಲಿ ದಾಖಲಾಗಿದೆ.

'ಮೈಸೂರ ಮಲ್ಲಿಗೆ', ಯ ಬಿಡುಗಡೆ, ಎಆರ್ ಕೃ ಅವರ ಓಡಾಟ,, ಚಿರೋಟಿ, ಗಸೆಗಸೆ ಪಾಯಸ ಅಂತ ಚಿತ್ರವತ್ತಾಗಿ ಆರಂಭವಾಗುವ ಎರಡನೆಯ ಅಧ್ಯಾಯ, ಕನ್ನಡ ಸಾಹಿತ್ಯದಲ್ಲಿ ಮೈಸೂರು ಮಲ್ಲಿಗೆಯ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ. ಎಆರ್ ಕೃ ಬಿಡುಗಡೆ. ಡಿವಿಜಿ, ಮುನ್ನುಡಿ.

೨೭ ವರ್ಷಗಳ ತರುಣ ಕವಿಯ ಪ್ರಥಮ ಸಂಕಲನ ಬಿಡುಗಡೆಯಲ್ಲಿ ಹಾಜರಿದ್ದವರು, ಬಿಎಂಶ್ರೀ, ಮಾಸ್ತಿ, ಕುವೆಂಪು, ಡಿವಿಜಿ, ತಿನಂಶ್ರೀ, ಡಿಎಲ್ಎನ್,. ಇದೇ ಅಲ್ಲವೇ ಭುವನದ ಭಾಗ್ಯ.

ಮುಂದಿನ ಅಧ್ಯಾಯಗಳಲ್ಲಿ ಕನ್ನಡ ಸಾರಸ್ವತ ಪ್ರಪಂಚದ ಹಲವು ಗಣ್ಯರೊಂದಿಗಿನ ಒಡನಾಟ, ಸಂಬಂಧಗಳನ್ನು ಲೇಖಕರು ಗುರುತಿಸಿದ್ದಾರೆ,ಮುಖ್ಯವಾಗಿ ಜಿವಿ, ವಿಸೀ ಪುತಿನ,ಬೇಂದ್ರೆ, ಮಾಸ್ತಿ, ಅಡಿಗ, ಜಿಎಸ್ಎಸ್, ಎಲ್ಎಸ್ಎಸ್, ನಿಸಾರ್, ರಾಜರತ್ನಂ, ಎಚ್ಎಸ್ ವಿ,ಬಾಕಿನ, ಎಂವಿ ವೆಂಕಟೇಶ ಮೂರ್ತಿ, ಲಕ್ಷ್ಮೀ ನಾರಾಯಣ ಭಟ್ಟ, ಅರಾ ಮಿತ್ರ, ನಾಡಿಗ, ಎಕೆ ರಾಮಾನುಜಂ, ಕೆವಿ ಸುಬ್ಬಣ್ಣ, ಶಿವಮೊಗ್ಗಾ ಸುಬ್ಬಣ್ಣ, ಅಶ್ವಥ್, ಎಚ್ಚೆಸ್ಕೆ, ರಾಜಕುಮಾರ್,.... ಇವರುಗಳ ಮೂಲಕ ಕೆಎಸ್ ನ ವ್ಯಕ್ತಿತ್ವದ ಹಲವು ಮುಖಗಳು ಅನಾವರಣವಾಗುತ್ತದೆ.

ಕವಿಯ ಸ್ನೇಹಶೀಲತೆ, ಅಕೆಡೆಮಿಕ್ ವಲಯದಿಂದ ಹೊರತಾಗಿರುವ ಕವಿಯೊಬ್ಬ ತನ್ನ ಅಸ್ತಿತ್ವಕ್ಕೆ ನಡೆಸುವ ಹೋರಾಟ. ವ್ಯಾವಹಾರಿಕವಲ್ಲವೆನಿಸಿದ ವ್ಯವಹಾರಗಳು, ಉದಾ; ಮೈಸೂರು ಮಲ್ಲಿಗೆಯ ಕಾಪಿರೈಟ್...
ಭಿನ್ನ ಕಾವ್ಯಮಾರ್ಗವನ್ನು ಅನುಸರಿಸುತ್ತಿದ್ದ ಹಿರಿಯ ಕವಿಗಳೊಂದಿಗಿನ ಸಂಬಂಧಗಳನ್ನು ಅರ್ಥಪೂರ್ಣ, ಸೌಜನ್ಯಯುತವಾಗಿ ನಿಭಾಯಿಸುತ್ತಿದ್ದ ರೀತಿ, ... ಇತ್ಯಾದಿ.

ಮಹಾಬಲರ ಬಲವೆಂದರೆ, ಯಾವುದನ್ನೂ ತೇಲಿಸದೆ, ನಯವಾಗಿ, ಕಠಿಣ ವಿಚಾರಗಳನ್ನು ನಗುವಿನ ಅಲಂಕಾರದಿಂದ, ಸಮಚಿತ್ತದಿಂದ ಬರೆಯುವ ಸಹಜ ಚಮತ್ಕೃತಿ. ಮಧ್ಯೆ ಮಧ್ಯೆ ಮಾನವೀಯ ಸಂಬಂಧಗಳು ಬಿಚ್ಚಿಕೊಳ್ಳುತ್ತದೆ. ಪುತಿನ, ಬೇಂದ್ರೆ, ಎಚ್ಚೆಸ್ಕೆ ಮೊದಲಾದವರು ಕೆಎಸ್ ನ ಮನೆಗೆ ಭೇಟಿ, ರುಚಿಯಾದ ತಿಂಡಿಗಳ ಬಗ್ಗೆ ಕವಿಯ ಒಲವು,ಪ್ರವಾಸದ ಬಯಕೆಗಳು. ಕೆಎಸ್ ನ ಅಲ್ಲದೆ ,ಇತರ ಹಿರಿಯರ ವ್ಯಕ್ತಿತ್ವದ ಝಲಕ್ ಗಳು ಇಲ್ಲಿದೆ.

ಕೆಎಸ್ ನ ಅವರ ಬದುಕಿನಲ್ಲಿ ಬಾಕಿನ; ಪ್ರಕಾಶಕರು,ಎಂವಿ ವೆಂಕಟೇಶ ಮೂರ್ತಿ; ಲಿಪಿಕಾರ, ಕಾವ್ಯ ಪ್ರೋತ್ಸಾಹಕ, ಗಾಯಕರಾದ ಮೈಸೂರು ಅನಂತ ಸ್ವಾಮಿ, ಅಶ್ವಥ್ ... ಮೊದಕಾದವರು ವಹಿಸಿದ ಸಕಾರಾತ್ಮಕ ಪಾತ್ರ,ಓದುಗರ ಗಮನ ಸೆಳೆಯುತ್ತದೆ.

ಕವಿಪತ್ನಿ ವೆಂಕಮ್ಮನವರ ಆದರ, ಸತ್ಕಾರಗಳು, ಬವಣೆಯೊಂದಿಗೆ ಸೆಣೆಸುವ ಇಚ್ಛಾಶಕ್ತಿ, ಪೂರ್ವಜರು,ಅವರೂರು ಕಿಕ್ಕೇರಿ, ಸರ್ಕಾರದ ಲಕ್ಷ್ಯ

ನಿರ್ಲಕ್ಷ್ಯ ಎಲ್ಲವೂ ಸಣ್ಣ ಅಧ್ಯಾಯಗಳಲ್ಲಿ ಸಮರ್ಥವಾಗಿ ಬಿಚ್ಚಿ ಕೊಳ್ಳುತ್ತದೆ. ನೆನಪು, ಸಿಹಿಯೂ ಇದೆ, ಕಹಿಯೂ ಇದೆ. ಎರಡೂ ಇಲ್ಲಿದೆ. ನಡಿಗೆ ಬೆತ್ತದ ತಮಾಶೆ ಪ್ರಕರಣ, ಸಹೋದ್ಯೋಗಿಗಳ ಗೆಳೆತನ, ಕಾಪಿರೈಟ್ ಪ್ರಕರಣ ಮತ್ತು ಕುಟುಂಬದ ವಲಯದಲ್ಲಿ ಒಡನಾಟದ ಚಿತ್ರಗಳು, ಈ ಬರೆಹಕ್ಕೆ ಸಮಗ್ರತೆಯನ್ನು ನೀಡುತ್ತದೆ.

ಪ್ರೊಫೆಸರ್ ಅ ರಾ ಮಿತ್ರ ಅವರ, ಮುನ್ನುಡಿ, ಕಳಶಪ್ರಾಯ.


ಮಹಾಬಲರು, ಚೆನ್ನಾಗಿ ಬರೆಯುತ್ತಾರೆ. ಅವರು ಛಳಿ ಬಿಟ್ಟು ಬರೆಯಬೇಕು. ಸಂಕೋಚ ಸ್ವಭಾವದಿಂದ ಹೊರಬರಬೇಕು. ಪೂರ್ಣವಾಗಿ ಅರಳಬೇಕು. ಕೆಎಸ್ ನ ಅವರ ಪ್ರಭಾವಳಿಯ ಅಗತ್ಯ ಅವರಿಗಿಲ್ಲ. ಪೂರ್ಣಚಂದ್ರ ತೇಜಸ್ವಿ ಅವರಂತೆ ಸ್ವತಂತ್ರ ವಾಗಿ ಕನ್ನಡ ಸಾಹಿತ್ಯದಲ್ಲಿ ನೆಲೆ ನಿಲ್ಲಬಲ್ಲವರಾಗಿದ್ದಾರೆ.

ಈ ಪುಸ್ತಕ ಈಗ ಮುದ್ರಣದಲ್ಲಿದೆ. ಬಹುರೂಪಿ ಪ್ರಕಾಶನ. ಮುದ್ರಣಕ್ಕಾಗಿ ಮತ್ತಷ್ಟು ಅಂದಗೊಂಡಿದೆ.. ಕನ್ನಡಿಗರು ಪುಸ್ತಕವನ್ನು ಕೊಂಡು ಓದಬೇಕು.



12. ಮಹಾಬಲ

ನವೋದಯ ಕವಿ,ಶ್ರೇಷ್ಠ ವಿದ್ವಾಂಸ, ಗ್ರಂಥ ಸಂಶೋಧಕ, ಸಂಘಟಕ, ಬೋಧಕ ಪ್ರೊ.ಎಂ. ವಿ. ಸೀತಾರಾಮಯ್ಯ (ರಾಘವ)



"ಹೂವನು ಮಾರುತ
ಹೂವಾಡಗಿತ್ತಿ
ಹಾಡುತ ಬರುತಿಹಳು
'ಘಮಘಮ ಹೂಗಳು
ಬೇಕೇ' ಎನ್ನುತ
ಹಾಡುತ ಬರುತಿಹಳು
        ಬಿಳುಪಿನ ಮಲ್ಲಿಗೆ
        ಹಳದಿಯ ಸಂಪಿಗೆ
        ಹಸುರಿನ ಹೊಸ ಮರುಗ;
        ಹಾಕಿ ಕಟ್ಟಿರುವೆ
        ಬೇಕೇ ಎನುತ
        ಹಾಡುತ ಬರುತಿಹಳು
ಹೊಸ ಸೇವಂತಿಗೆ
ಹೊಸ ಇರುವಂತಿಗೆ
ಅರಸಿನ ತಾಳೆಯಿದೆ;
ಅಚ್ಚ ಮಲ್ಲೆಯಲಿ
ಪಚ್ಚ ತೆನೆಗಳು
ಸೇರಿದ ಮಾಲೆಯಿದೆ.
ಕಂಪನು ಚೆಲ್ಲುವ
ಕೆಂಪು ಗುಲಾಬಿ
ಅರಳಿದ ಹೊಸ ಕಮಲ;
ಬಿಳುಪಿನ ಜಾಜಿ
ಅರಳಿದ ಬಿಳಿ ಕಮಲ"

ಒಂದು ಕಾಲದಲ್ಲಿ ಬಾನುಲಿಯಲ್ಲಿ ಹಾಗೂ ಇತರ ಸಮಾರಂಭಗಳಲ್ಲಿ ಜನಜನಿತವಾಗಿದ್ದ ಈ ಸುಂದರ ಭಾವಗೀತೆಯನ್ನು ಬರೆದವರು ರಾಘವ, ಮೈ.ವೆಂ.ಸೀ. ಮುಂತಾದ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ವಿದ್ವಾಂಸರು,ಬೋಧಕರು ಹಾಗೂ ಪ್ರಸಿದ್ಧ ಬಿ ಎಂ ಶ್ರೀ ಪ್ರತಿಷ್ಠಾನದ ಸಂಸ್ಥಾಪಕರೂ ಆಗಿದ್ದ ಪ್ರೊ ಎಂ.ವಿ.ಸೀತಾರಾಮಯ್ಯನವರು.

ಎಂ. ವಿ. ಸೀತಾರಾಮಯ್ಯನವರು ೧೯೧೦ರ ಸೆಪ್ಟೆಂಬರ್ ೯ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ವೆಂಕಟದಾಸಪ್ಪನವರು, ತಾಯಿ ಸಾವಿತ್ರಮ್ಮನವರು. ಮೈಸೂರಿನ ಬನುಮಯ್ಯ ಪ್ರೌಢಶಾಲೆ, ಇಂಟರ್ ಮೀಡಿಯೆಟ್ ಕಾಲೇಜು ಮತ್ತು ಮಹಾರಾಜ ಕಾಲೇಜಿನಲ್ಲಿ ಶಿಕ್ಷಣ ಪಡೆದ ಎಂ. ವಿ. ಸೀತಾರಾಮಯ್ಯನವರು ಕನ್ನಡದಲ್ಲಿ ಎಂ.ಎ. ಪದವಿ ಗಳಿಸಿದವರು.

ಸೀತಾರಾಮಯ್ಯನವರು ಓದುವ ದಿನಗಳಲ್ಲಿ ದೀರ್ಘ ಕವಿತೆಯ ರಚನೆಗಾಗಿ ಬಿ.ಎಂ.ಶ್ರೀ. ಸ್ವರ್ಣಪದಕ ಪಡೆದಿದ್ದರು. ಅವರಿಗೆ ಸಾಹಿತ್ಯದಷ್ಟೇ ಚಿತ್ರಕಲೆಯಲ್ಲೂ ಸಮಾನ ಆಸಕ್ತಿ.

ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಅರಮನೆಯ ಚಿತ್ರಕಾರರಾದ ಲಕ್ಷಣ ಕೃಷ್ಣ ಮತ್ತು ಕೆ. ವೆಂಕಟಪ್ಪನವರಿಂದ ಚಿತ್ರಕಲೆಯಲ್ಲಿ ಮಾರ್ಗದರ್ಶನ ಪಡೆದರು. ಅಭಿನಯ ಕಲೆಯಲ್ಲೂ ಅವರು ರಾರಾಜಿಸಿದ್ದರು.

ಸ್ನಾತಕೋತ್ತರ ಪದವಿಯ ನಂತರ ೧೦೩೪-೩೯ರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ಉದ್ಯೋಗ ಪ್ರಾರಂಭಿಸಿದ ಎಂ. ವಿ. ಸೀ ಅವರು, ೧೯೩೯-೪೬ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಕನ್ನಡ ನಿಘಂಟು ಕಚೇರಿಯಲ್ಲಿ ಸಹಾಯಕ ಸಂಪಾದಕರಾಗಿ, ೧೯೪೬ರಿಂದ ಬೆಂಗಳೂರು ಸರಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು.

೧೯೬೩ರಲ್ಲಿ ರೀಡರ್ ಆಗಿ ಬಡ್ತಿ ಪಡೆದರು, ೧೯೬೭ರಲ್ಲಿ ನಿವೃತ್ತಿಯ ನಂತರ ಐದು ವರ್ಷಕಾಲ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ಪ್ರಾಧ್ಯಾಪಕರಾಗಿ ಸಂಶೋಧನೆ ಮತ್ತು ಬೋಧನೆ ನಡೆಸಿದರು.

ತಮ್ಮ ಗುರುಗಳಾದ ಬಿ ಎಂ.ಶ್ರೀಕಂಠಯ್ಯನವರ ಹೆಸರಿನಲ್ಲಿ ತಾವೇ ಒಂದು ಸಂಶೋಧನಾ ಕೆಂದ್ರವನ್ನು ತೆರೆದರು.

ಎಂ. ವಿ. ಸೀತಾರಾಮಯ್ಯನವರು ರಚಿಸಿದ ಸಾಹಿತ್ಯ ವಿಪುಲವಾದದ್ದು ಜೊತೆಗೆ ವೈವಿಧ್ಯಮಯವಾದದ್ದು.

ಹಕ್ಕಿಹಾಡು, ಆ ಚಿತ್ರಗಳು ಮತ್ತು ಇತರ ಕಥನ ಕವನಗಳು, ರಾಗ, ಅಶೋಕ ಚಕ್ರ, ವಿಶ್ವಜ್ಯೋತಿ ಬಾಪು, ರಾಷ್ಟ್ರರಥ, ಗೀತಭಾರತಿ, ಹಂಸಪಥ

ಮೊದಲಾದವು ಸೀತಾರಾಮಯ್ಯನವರು ೧೫ ಕಾವ್ಯ ಕೃತಿಗಳು. ಹೂವಾಡಗಿತ್ತಿ,ಹಾವಾಡಿಗ, ಕೋಡಂಗಿ ಮಕ್ಕಳು ಇವು ಕಾವ್ಯಕೃತಿಗಳು.

ಶಿಲಾಮುಖಿ, ಯೌವನ ಸುಧೆ, ಮಾರ್ಗದರ್ಶಕ, ರತಿದೇವಿ ಮತ್ತು ಇತರ ಕಥೆಗಳು, ಕರುಣಾಲಹರಿ, ಬಿಸಿಲು ಬೆಳದಿಂಗಳು ಮುಂತಾದವು ಸೀತಾರಾಮಯ್ಯನವರ ಹತ್ತು ಕಥಾಸಂಕಲನಗಳಲ್ಲಿ ಸೇರಿವೆ.

ಭಾಗ್ಯಲಕ್ಷ್ಮೀ, ಮಾದನ ಮಗಳು, ಜೀವನದ ಜೊತೆಗಾತಿ, ಸ್ನೇಹದ ಕಾಣಿಕೆ, ತಾಯ ಬಯಕೆ ಮೊದಲಾದ ೧೦ ಕಾದಂಬರಿಗಳನ್ನು ಸೀತಾರಾಮಯ್ಯನವರು ಪ್ರಕಟಿಸಿದ್ದಾರೆ.

ಕನ್ನಡ ಜೀವನ ಚರಿತ್ರೆ, ಸಾಹಿತ್ಯ ಮತ್ತು ಚಿತ್ರಕಲೆ, ಜೈಮಿನಿ ಭಾರತ ಸಮೀಕ್ಷೆ ಮುಂತಾದವು ಸೀತಾರಾಮಯ್ಯನವರ ಆರು ಸಮೀಕ್ಷೆ ಕೃತಿಗಳು.

ಇದಲ್ಲದೆ ೯ ನಾಟಕಗಳು; ಮುಗಿಲುಗಳು, ಹಿಡಿ ಹೂವು, ಹಿತಚಿಂತನ, ಬಾಳಿನ ಬುತ್ತಿ ಮುಂತಾದ ಪ್ರಬಂಧಗಳು; ವ್ಯಕ್ತಿಚಿತ್ರ, ಕಾವ್ಯ ಮೀಮಾಂಸೆ, ಗ್ರಂಥ ಸಂಪಾದನೆ, ಶಾಸ್ತ್ರಗ್ರಂಥ, ಜೀವನ ಚರಿತ್ರೆ ಸೇರಿ ಸೀತಾರಾಮಯ್ಯನವರು ಒಟ್ಟು ನೂರಕ್ಕೂ ಹೆಚ್ಚು ಕೃತಿ ಪ್ರಕಟಿಸಿದರು. ತಮ್ಮ ಜೀವನ ಪರ್ಯಂತದಲ್ಲಿ ಹಲವಾರು ರೀತಿಯ ದೈಹಿಕ ತೊಂದರೆಗಳಲ್ಲಿ ಬದುಕು ನಡೆಸಿದ ಎಂ. ವಿ. ಸೀತಾರಾಮಯ್ಯನವರು ಮಾಡಿದ ಕಾಯಕದ ಔನ್ನತ್ಯ ಅಚ್ಚರಿ ಹುಟ್ಟಿಸುವಂತದ್ದು.

ಪ್ರೊಫೆಸರ್ ಎಂ. ವಿ. ಸೀತಾರಾಮಯ್ಯನವರು ತಮ್ಮ ವಿದ್ವತ್ತು ಮತ್ತು ಸಂಶೋಧನೆಗಳಿಂದಾಗಿ ಅಪಾರವಾಗಿ ಗೌರವಿಸಲ್ಪಟ್ಟಿದ್ದಾರೆ. ವ್ಯಾಕರಣ ಕ್ಷೇತ್ರದಲ್ಲಿ ಅವರ ಕೊಡುಗೆ ಅಪಾರವಾದದ್ದು ಎಂಬುದು ವಿದ್ವಾಂಸರ ಅಭಿಮತ.

ಪ್ರಾರಂಭಿಕ ಕನ್ನಡ ವ್ಯಾಕರಣದ ಕುರಿತಾದ ಅವರ ಕೃತಿಯು ಅಪಾರ ಜನಪ್ರಿಯತೆ ಹೊಂದಿದ್ದು ಇತರ ಭಾಷೆಗಳಿಗೆ ಸಹಾ ಅನುವಾದಗೊಂಡಿವೆ.

ಹಳಗನ್ನಡದ ಶಬ್ದಮಣಿ ದರ್ಪಣದ ಬಗೆಗೆ ಸುದೀರ್ಘವಾದ ಅಧ್ಯಯನ ಕೈಗೊಂಡ ಎಂ ವಿ ಸೀ ಅವರು, ಅದರ ಕುರಿತಾದ ಒಂದು ಪರಿಷ್ಕೃತ ಕೃತಿಯನ್ನೂ ಪ್ರಕಟಿಸಿದರು. ಪ್ರೊ.ಎಂ. ವಿ. ಸೀ . ಅವರು ಶ್ರೀವಿಜಯನ 'ಕವಿರಾಜಮಾರ್ಗ'ವನ್ನು ಕುರಿತು ಸಹಾ ಕೂಲಂಕಷ ಅಧ್ಯಯನ ನಡೆಸಿ ಅದರ ಕರ್ತೃತ್ವದ ಕುರಿತಾದ ಚರ್ಚೆಗೆ ಅಮೂಲ್ಯವಾದ ಮಾಹಿತಿ ಒದಗಿಸಿದ್ದಾರೆ.

ಹಲವು ದಶಕಗಳಿಂದ ಉನ್ನತ ಅಧ್ಯಯನ ಮತ್ತು ಸಂಶೋಧನಾ ಕಾರ್ಯಗಳಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಬೆಳವಣಿಗೆಯಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರ ಕೊಡುಗೆ ಮಹತ್ವಪೂರ್ಣವಾದುದು. ಈ ಸಂಸ್ಥೆ ಎಂ.ಫಿಲ್, ಪಿಎಚ್.ಡಿ ಅಧ್ಯಯನಗಳಿಗೆ

ಒತ್ತಾಸೆ ನೀಡುವುದರ ಜೊತೆಗೆ ವಿದ್ವತ್ಪೂರ್ಣ ಪ್ರಕಟಣೆಗಳಲ್ಲಿ ಸಹಾ ಪ್ರಧಾನ ಪಾತ್ರ ನಿರ್ವಹಿಸುತ್ತಿದೆ. ಇದಲ್ಲದೆ ಹಸ್ತಲಿಪಿ ಶಾಸ್ತ್ರದ ಅಧ್ಯಯನಕ್ಕಾಗಿರುವ ಏಕೈಕ ಕೇಂದ್ರವಾದ ಈ ಪ್ರತಿಷ್ಠಾನಕ್ಕೆ ಹಸ್ತಲಿಪಿ ಶಾಸ್ತ್ರ ಅಧ್ಯಯನಕ್ಕಾಗಿನ ಎಂ. ವಿ. ಸೀ ಅವರ ಕೊಡುಗೆ ಅನನ್ಯವಾದದ್ದಾಗಿದೆ. ಹೀಗಾಗಿ ಬಿ.ಎಂ.ಶ್ರೀ ಪ್ರತಿಷ್ಠಾನವು ಪ್ರೊ.ಎಂ.ವಿ. ಸೀತಾರಾಮಯ್ಯನವರ ಶತಾಬ್ಧಿವರ್ಷವನ್ನು ಹಸ್ತಲಿಪಿ ಶಾಸ್ತ್ರದ ವರುಷವನ್ನಾಗಿ ಆಚರಿಸಿತು.ನಾನು ಮತ್ತು ಈ ವೇದಿಕೆಯ ಹಲವರು ಈ ಹೆಮ್ಮೆಯ ಸಾರಸ್ವತ ಮಂದಿರದ ಸದಸ್ಯರು.

ಪ್ರೊ. ಎಂ. ವಿ ಸೀತಾರಾಮಯ್ಯನವರಿಗೆ ದೇವರಾಜ ಬಹದ್ದೂರ್ ಬಹುಮಾನ, ರಾಜ್ಯಸರಕಾರದ ಬಹುಮಾನ, ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಬಹುಮಾನ, ನಿಡಿಮಾಮಿಡಿ ಶ್ರೀಗಳಿಂದ ಸ್ವರ್ಣಪದಕ ಬಹುಮಾನ ಮುಂತಾದ ಹಲವಾರು ಗೌರವಗಳು ಸಂದವು. ಸ್ನೇಹಿತರು, ಅಭಿಮಾನಿಗಳು ಅವರಿಗೆ ಅರ್ಪಿಸಿದ ಗೌರವ ಗ್ರಂಥ ‘ಆಸ್ವಾದ’. ಅವರ ಸಂಸ್ಮರಣ ಕೃತಿಗಳೂ ಪ್ರಕಟಗೊಂಡಿವೆ.

ಮಕ್ಕಳ ಸಾಹಿತ್ಯ ರಚನೆಯಲ್ಲೂ ಎಂ ವೀ ಸೀ ಕೊಡುಗೆ ಗಣನೀಯವಾದುದು.

"ಜೀವಮಾನ "ಎಂಬ ಶಿಶುಗೀತೆ ಸಾಗುವ ಪರಿ ಇದು;

’ಒಂದರಿಂದ ಹತ್ತು
ಪೆಪ್ಪರಮೆಂಟ್ ಜಗತ್ತು.
    ಹತ್ತರಿಂದ ಇಪ್ಪತ್ತು
    ಯೌವನದ ಮತ್ತು.
ಇಪ್ಪತ್ತು ಮೂವತ್ತು
ಬಾಳೆ ಬಹಳ ಗತ್ತು.
    ಮೂವತ್ತು ನಲವತ್ತು.
    ನಲಿವು ನೋವಿಗೆ ತುತ್ತು.
ನಲವತ್ತು ಐವತ್ತು
ಕೊರಳಿಗೆ ಬಾಳು ಸುತ್ತು.
    ಐವತ್ತು ಅರುವತ್ತು
    ದೈವದ ಕಡೆಗೆ ಕತ್ತು
ಅರುವತ್ತು ಎಪ್ಪತ್ತು
ಬದುಕಿದ ಸತ್ತು ಸತ್ತು

ಎಪ್ಪತ್ತು ಎಂಬತ್ತು.
ಸಾವುದೇ ಸುಖಸಂಪತ್ತು.
ತೊಂಬತ್ತು ನೂರು
ಬದುಕಿಹರಾರು"

ಪ್ರೊ.ಸಿದ್ಧಣ್ಣ ಮಸಳಿ ಅವರ ಪಂಜರದ ಪಕ್ಷಿ ನೆನಪಿಸುವ ಅವರ ಕವನ "ಪಂಜರದ ಗಿಣಿ"

"ಪಂಜರದಿ ಕುಳಿತಿರುವ ಗಿಣಿಯ ನೋಡಕ್ಕ, ಅಂಜಿ ಕುಳಿತಿದೆ, ಮುದ್ದು ಮಾತಾಡದೆ. ಗಿಡಗಿಡಕೆ ಹಾರುತ್ತ ತನಿವಣ್ಣು ತಿನ್ನುತ್ತ ಬಿಡುಗಡೆಯಲಿದ್ದ ಗಿಣಿ ಸೆರೆಯಾಗಿದೆ."

"ಹಸುರು ತುಪ್ಪುಳ ಮೈಗೆ ಹವಳಗೆಂಪಿನ ಕೊಕ್ಕು ಹಸುರೆಲೆಯ ದಾಳಿಂಬೆ ಗಿಡದ ಮೊಗ್ಗು."

ತಮ್ಮ ಕ್ಷೀಣಗೊಂಡಿದ್ದ ಆರೋಗ್ಯದ ನಡುವೆಯೂ ಗೋಕಾಕ್ ಚಳವಳಿ ಮುಂತಾದ ಕನ್ನಡ ಪರ ಚಳವಳಿಗಳಲ್ಲಿ ಕ್ರಿಯಾಶೀಲರಾಗಿದ್ದವರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದಿದ್ದ ಹಲವು ಅವ್ಯವಹಾರಗಳ ಬಗ್ಗೆ ಸದಸ್ಯರ ಗಮನ ಸೆಳೆದು ನಿವೃತ್ತ ನ್ಯಾಯಮೂರ್ತಿ ಶ್ಯಾಮಸುಂದರ ತನಿಖಾ ಆಯೋಗದ ನೇಮಕಕ್ಕೂ ಕಾರಣಕರ್ತರು ಎಂ ವಿ ಸೀ.

ಎಂ ವಿ ಸೀ ಅವರು ನಮ್ಮ ಬ್ಯಾಂಕಿನ ಕನ್ನಡ ಸಂಘಗಳ ಹಲವು ಸಮಾರಂಭಗಳಲ್ಲಿ ಭಾಗವಹಿಸಿದ್ದರು.ಹಿಂದೆ ನಮ್ಮ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾಗಿದ್ದ ಶ್ರೀ ಪಿ ವಿ ಮಯ್ಯ ಅವರು ಪದವಿ ಓದುತ್ತಿದ್ದಾಗ ಎಂ ವಿ ಸೀ ಅವರ ವಿದ್ಯಾರ್ಥಿಯಾಗಿದ್ದು ನಮ್ಮ ಬ್ಯಾಂಕಿನ ಸಮಾರಂಭಕ್ಕೆ ಬಂದಾಗ ಎಂವಿಸೀ ಅವರಿಗೆ ತಮ್ಮ ಗೌರವ ನಮನ ಸಲ್ಲಿಸಿದರು.

"ನಕ್ಕರೆ ಜೀವನ ನಂದನ ವನವೈ , ಅತ್ತರೆ ಅದುವೆ ಶ್ಮಶಾನ, ಕಲ್ಲಡಿಯ ಹುಲ್ಲು ಗರಿಕೆ ಅದಕ್ಕಿಲ್ಲ ಹೆದರಿಕೆ"ಎಂದು ತಮ್ಮದೇ ಕವನದ ಸಾಲುಗಳಂತೆ ಬದುಕಿ ಸಾಧನೆಗೈದ ಪ್ರೊ. ಎಂ. ವಿ. ಸೀತಾರಾಮಯ್ಯನವರು ೧೯೯೦ರ ಮಾರ್ಚ್೧೨ರಂದು ಈ ಲೋಕವನ್ನಗಲಿದರು.

ಕಾವ್ಯ,ಸಾಹಿತ್ಯ,ಗ್ರಂಥ ಸಂಪಾದನೆ,ಪಾಂಡಿತ್ಯ,ಸಂಘಟನೆ ಮುಂತಾದ ಕ್ಷೇತ್ರಗಳಲ್ಲಿ ಎಂ ವಿ ಸೀ ಅವರ ಕೊಡುಗೆ ನಿತ್ಯ ಸ್ಮರಣೀಯ.



13. ಪತ್ತಂಗಿ ಎಸ್ ಮುರಳಿ

ವಾಸ್ತವ



ಮಾಮೂಲಿನಂತೆ ನಿತ್ಯ ಪೂಜೆ ಮುಗಿಸಿ ಆವತ್ತೂ ಕೂಡಾ ಪ್ರಜಾವಾಣಿ ನೆಲದ ಮೇಲೆ ಹರಡಿಕೊಂಡು 'ಲೇ ಇನ್ನೂ ತಿಂಡಿ ಆಗಿಲ್ವೇನೇ?' ಎಂದು ಅಡುಗೆ ಮನೆಯತ್ತ ಕೂಗಿದೆ. ಮೂಗಿಗೆ ಘಂ ಅಂತ ವಾಸನೆ ಏನೋ ಭರ್ಜರಿಯಾಗಿ ಬರ್ತಿತ್ತು. ಅದರಿಂದಲೇ ಗೊತ್ತಾಗ್ತಿತ್ತು ಅವಳು ನನಗೆ ಇಷ್ಟವಾದ ಪೂರಿ ಸಾಗು ಮಾಡ್ತಿದಾಳೆ ಅಂತ.

'ಹತ್ತು ನಿಮಿಷ ತಡಕೊಳ್ರೀ... ಬಂದುಬಿಟ್ಟೆ' ಅನ್ನೋ ಮಾತು ಕೇಳಿ ಹಸಿವು ಇನ್ನೂ ಹೆಚ್ಚಾಯ್ತು. ಆದರೆ ಪೂರಿ ಸಾಗು ಅನ್ನೋ ತಿಂಡಿಯ ಬಯಕೆ ಕೊಂಚಮಟ್ಟಿಗೆ ಸಮಾಧಾನಿಸಿತು. ಕೆಲವೇ ನಿಮಿಷಗಳಲ್ಲಿ ಕೊಂಚ ದೊಡ್ಡ ತಟ್ಟೆಯಲ್ಲಿ ನಾಲ್ಕು ಪೂರಿ, ಒಂದು ಬಟ್ಟಲಿನಲ್ಲಿ ಸಾಗು ಜೊತೆಗೆ ಮತ್ತೊಂದು ಬಟ್ಟಲಿನಲ್ಲಿ ಬಿಸಿಬಿಸಿ ಗಸಗಸೆ ಪಾಯಸ ತಂದು ಮುಖ ಊರಗಲ ಮಾಡಿ ನಗನುನಗುತ್ತಾ ನೆಲದ ಮೇಲೆ ಬಡಿಯದೆ ಕೈಗೇ ಕೊಟ್ಟಳು. ಓಹೋ ನನಗೆ ಬಲು ಪ್ರಿಯವಾದ ಗಸಗಸೆ ಪಾಯಸ ಕೂಡಾ ಮಾಡಿದ್ದಾಳೆ ಎಂದಮೇಲೆ ಏನೋ ಗ್ರಹಚಾರದ ವಾಸನೆ ಹೊಡೀತು.

'ಇನ್ನೊಂದೆರಡು ಪೂರಿ ಹಾಕ್ತೀನಿ. ಥಟ್ಟಂತ ಎದ್ದುಬಿಡಬೇಡಿ' ಎಂದು ಅಲ್ಲಿಂದಲೇ ಕೂಗಿದಳು. ನಾನು ಎಂಟು ಪೂರಿ ಆದಮೇಲೇ ಎದ್ದೇಳೋದು ಅಂತ ಅವಳಿಗೂ ಸಹ ಗೊತ್ತು. ಆದರೂ ಸಹ ಇವತ್ತು ಅದೇಕೆ ಹಾಗೇ ಹೇಳಿದಳೋ. 'ಎದ್ದೇಳಲ್ಲ, ಕೂತಿರ್ತೀನಿ ನಿಧಾನವಾಗಿ ತೊಂಗೊಂಡು ಬಾ. ಬರುವಾಗ ಇನ್ನೊಂದ್ ಸ್ವಲ್ಪ ಸಾಗು ಮತ್ತು ಪಾಯಸ ಕೂಡಾ' ಎಂದು ಹೇಳಿ ಪತ್ರಿಕೆಯತ್ತ ಕಣ್ಣಾಡಿಸಿದೆ.

ಅವಳೂ ಕೂಡಾ ತಿಂಡಿ ತಿಂದಾದ ನಂತರ ಬಿಸಿಬಿಸಿ ಕಾಫಿ ಕೂಡಾ ಕೊಟ್ಟು. ನಂತರ 'ರೀ ಇಲ್ಲೇ ಹೊರಗೆ ಹೋಗಿ ರ್ತೀನಿ' ಅಂತ ಹೇಳಿ ಹೋದವಳು ಬಂದಿದ್ದೇ ಮಧ್ಯಾಹ್ನಕ್ಕೆ. ಕೈಲೊಂದು ದೊಡ್ಡ ಏರ್ ಬ್ಯಾಗ್ ಇತ್ತು.

ಇದೇನಿದು ಅಂತ ಕುತೂಹಲ ತಡೆಯದೆ ಕೇಳಿಯೇಬಿಟ್ಟೆ ಏನದು ಅಂತ. 'ನಮ್ಮ ಮಹಿಳಾ ಮಂಡಲಿ ಸದಸ್ಯರೆಲ್ಲಾ ನಾಳೆ ಟೂರ್ ಹೋಗ್ತಾಇದೀವಿ ಅದಕ್ಕೇ ಈ ಬ್ಯಾಗು' ಅಂತ ಒದರಿದಳು.

'ಲೇ ತಿಂಗಳ ಕೊನೆ. ಕೈಲಿ ಕಾಸು ಇಲ್ದೇ ಒದ್ದಾಡ್ತಾ ಇದೀನಿ. ಟೂರ್ ಹೋಗ್ತೀನಿ ಅಂತೀಯಲ್ಲೇ, ನನ್ ಹತ್ರ ಮಾತ್ರ ದುಡ್ಡು ಕೇಳಬೇಡ' ಅಂದೆ. 'ಅಯ್ಯೋ ನಿಮ್ಮನ್ಯಾರೀ ಕಾಸು ಕೇಳಿದ್ದು? ನನಗೆ ಕಾಸೇನೂ ಬೇಡ. ಸರ್ಕಾರ ಮಹಿಳೆಯರಿಗೆಲ್ಲಾ ಬಸ್ಸಿನಲ್ಲಿ ಪ್ರಯಾಣ ಉಚಿತ ಅಂತ ಹೇಳಿದೆ. ನಿಮ್ ಕಾಸು ನಮಗೇನೂ ಬೇಡ, ನಾವು ಲಾಂಗ್ ಟೂರ್ ಹೋಗ್ತಿದೀವಿ. ಮಧ್ಯೆ ಬಾಯಿ ಹಾಕಬೇಡಿ' ಅಂತ ಹೇಳಿ ನನ್ನ ಬಾಯಿ ಮುಚ್ಚಿಸಿದಳು. ಲಾಂಗ್ ಟೂರ್ ಹೋಗ್ತಾಳೆ ಅದೂ ಕಾಸಿಲ್ಲದೆ ಅಂತ ನನಗೂ ಸಹ ಖುಷಿ ಆಯ್ತು. ಹೆಂಡತಿ ಇಲ್ಲ ಅಂದ್ರೆ ಮಜವೋ ಮಜ. ಹೆಂಗ್ ಬೇಕೋ ಹಂಗೆ, ಹಂಗಿಲ್ಲದ ಹಂಗೆ ಇರಬಹುದು ಅಂತ.

ಸಂಜೆಗೆ ಅವಳು ಹೊರಟೇಬಿಟ್ಳು. ರಾತ್ರಿ ಆಗೋಷ್ಟರಲ್ಲಿ ಹಸಿವು ಆಗೋಕೆ ಶುರುವಾಯ್ತು. ಅಡುಗೆ ಮನೆಯೆಲ್ಲಾ ತಡಕಾಡಿದರೂ ಏನೂ ಸಿಗಲಿಲ್ಲ. ನನಗೋ ಏನನ್ನೂ ಸಹ ಮಾಡೋಕೆ ಬರಲ್ಲ. ಕೋಪ ನೆತ್ತಿಗರ್ತು. ಕೈಗೆ ಫೋನ್ ತೊಗೊಂಡು ಅವಳಿಗೆ ಫೋನ್ ಮಾಡೇ ಬಿಟ್ಟೆ.

'ಥೆ, ಏನ್ರೀ ನಿಮ್ದೂ.. ಒಂದಷ್ಟು ದಿನ ನೆಮ್ಮದಿಯಾಗಿ ಇರೋಕೂ ಬಿಡಲ್ವಲ್ಲ'

'ಹೊಟ್ಟೆ ಹಸಿವಾಗ್ತಿದೆ ಏನೂ ಮಾಡಿಟ್ಟಿಲ್ವಲ್ಲೇ'

'ರೀ ಹೋಟೆಲ್‌ಗೆ ಹೋಗಿ ತಿನ್ರೀ. ಅದನ್ನೂ ನಾನೇ ಹೇಳಬೇಕಾ?'

'ಕಾಸು ಇಲ್ಲ ಅಂತ ಬೆಳಿಗ್ಗೇನೇ ಹೇಳಿದ್ದಿನಿ. ಹೋಟೆಲಿಗೆ ಹೆಂಗೇ ಹೋಗೋದು?' ಅಂದೆ ಖಾರವಾಗಿ.

'ರೀ ಇಂದಿರಾ ಕ್ಯಾಂಟೀನ್ ಇದೆಯಲ್ಲ ಪಕ್ಕದ ಬೀದಿಯಲ್ಲೇ. ಅಲ್ಲೇ ಹೋಗಿ ಮೂರು ಹೊತ್ತೂ ತಿನ್ನಿ. ನನ್ನ ತಲೆ ತಿನ್ನಬೇಡಿ' ಅಂತ ಫೋನ್ ಕಟ್ ಮಾಡಿದಳು. ಹೌದಲ್ವ ಈ ಹೊಸ ಸರ್ಕಾರ ಮತ್ತೆ ಆರಂಭ ಮಾಡಿದೆ. ಚಪಾತಿ, ಜೋಳದ ರೊಟ್ಟಿ, ಮುದ್ದೆ ಬೇರೆ ಮಾಡ್ತಾರಂತೆ. ಪೇಪರ್‌ನಲ್ಲಿ ಓದಿದ್ದು ಮರೆತೇ ಹೋಯಿತಲ್ಲ. ಹೋಗಲಿ ಬಿಡು. ಕಡಿಮೆ ಕಾಸಲ್ಲಿ ಅವಳು ಊರಿಂದ ಬರೋವರೆಗೂ ನೆಮ್ಮದಿಯಾಗಿ ಇರೋಣ ಅಂತ ಸುಮ್ಮನಾದೆ. ಎರಡು ಮೂರು ದಿನ ಕಳೆದರೂ ಅವಳ ಸದ್ದೇ ಇಲ್ಲ. ಫೋನ್ ಮಾಡಿದರೆ ನಾಟ್ ರೀಚಬಲ್. ಗಾಬರಿ ಕೂಡಾ ಆಯ್ತು. ಅವಳ ಫ್ರೆಂಡ್ ಒಬ್ಬಳ ನಂಬರ್ ನನ್ನ ಹತ್ತಿರ ಇದೆ. ಅವಳಿಗೇ ಫೋನ್ ಮಾಡಲಾ ಅಂತ ಯೋಚನೆ ಬಂದರೂ

ಕೂಡಾ ಮುಂದಿನ ಪರಿಣಾಮ ಯೋಚಿಸಿ ಸುಮ್ಮನಾದೆ. ಆಕೆಯ ಫೋನ್ ನಂಬರ್ ನಾನು ಯಾಕೆ ಇಟ್ಟುಕೊಂಡಿದ್ದೆ ಅಂತ ಕೇಳಬೇಡಿ. ಅದನ್ನು ನಾನು ಹೇಳೋಹಾಗಿಲ್ಲ ಟಾಪ್ ಸೀಕ್ರೇಟು.

ಶನಿವಾರ ಸಾಯಂಕಾಲ ಆಟೋ ಶಬ್ದ ಕೇಳಿ ಹೊರಗೆ ಬಂದೆ. ನೋಡಿದರೆ ನನ್ನಾಕೆ ಇಳೀತಾಇದಾಳೆ. ಬಹಳ ಖುಷಿ ಆಗೋಯ್ತು. ಛೆ, ಅದೇ ಕ್ಯಾಂಟೀನ್ ಊಟಾ ತಿಂಡಿ ತಿಂದೂ ತಿಂದೂ ಸಾಕಾಗೋಗಿತ್ತು. ಸದ್ಯ ಬಂದಳಲ್ಲ ಇನ್ನು ನಿರಾಳ ಅಂತ ಅನ್ನಿಸಿ ಅವಳ ಬ್ಯಾಗನ್ನ ನಾನೇ ಮನೆಯೊಳಗೆ ಹೊತ್ತು ತಂದೆ. ಪಾಪ ಸುಸ್ತಾಗಿದಾಳೆ ಅಂತ ನಾನೇ ಕಾಫಿ ಮಾಡಿಕೊಟ್ಟೆ. ಘೂಸಿ ಬೇರೆ ಹೊಡೀಬೇಕಿತ್ತಲ್ಲ.

‘ರೀ ನಾಳೆ ರಾತ್ರಿ ಕರಾವಳಿ ಕಡೆ ನಾವೆಲ್ಲಾ ಟ್ರಿಪ್ ಹೋಗ್ತಾ ಇದೀವಿ. ತುಂಬಾ ಸುಸ್ತಾಗ್ತಿದೆ. ಎಸ್‌ಎಲ್‌ವಿ ಹೋಟೆಲ್ ನಿಂದಾ ಊಟ ಪಾರ್ಸಲ್ ತಂದುಬಿಡಿ. ಇಲ್ಲಾಂದರೆ ಆನಲೈನ್‌ನಲ್ಲಿ ಆರ್ಡರ್ ಮಾಡಿ ತರಿಸಿ’ ಅಂದಳು.

ಮೊದಲೇ ತಲೆ ಕೆಟ್ಟಿದ್ದ ನನಗೆ ಮತ್ತೆ ಇವಳು ಟ್ರಿಪ್ ಹೋಗೋ ವಿಚಾರ ಕೇಳಿ ರೌದ್ರರೂಪ ತಾಳಿದೆ. ‘ಹಾಗೇ ಇದ್ದಿದ್ರೆ ಮತ್ತೆ ಮನೆಗೆ ಯಾಕೇ ಬಂದೆ? ಅಲ್ಲಿಂದಲೇ ಬೇರೆ ಬಸ್‌ಗಳಲ್ಲಿ ಟ್ರಿಪ್ ಹೋಗಬೇಕಾಗಿತ್ತು. ಇಲ್ಲಿಗೆ ಯಾಕೆ ಬರೋಕೆ ಹೋದೆ? ಅಂತ ಕೂಗಾಡಿದೆ.

‘ಒಂದು ವಾರದ ಬಟ್ಟೆ ಅಷ್ಟೇ ತೊಗೊಂಡು ಹೋಗಿದ್ದು. ಮತ್ತೆ ಬಟ್ಟೆ ಎಲ್ರೀ ಇರುತ್ತೇ. ಅಲ್ಲಿ ಯಾರು ಒಕ್ಕೊಡ್ತಾರೆ? ಸುಮ್ನೆ ಮಾತಾಡದೆ ಈ ಬಟ್ಟೇನೆಲ್ಲಾ ಮಿಷಿನ್ನಿಗೆ ಹಾಕಿ, ಒಣಹಾಕಿ. ಸಾಯಂಕಾಲಕ್ಕೆ ಐರನ್ ಮಾಡಿ ಇಡಿ. ಗೊತ್ತಾಯ್ತಾ? ನಾಳೆ ಸರ್ಕಾದರವರು ಎರಡು ಸಾವಿರ ಅಕೌಂಟಿಗೆ ಹಾಕ್ತಾರೆ. ಅದು ಮೊಬೈಲ್ ಕರೆನ್ಸಿ ಮತ್ತೆ ಮೇಕಪ್ ಐಟಂಗೆ ಬೇಕು.’ ಅಂತ ನನಗಿಂತಾ ಜೋರಾಗಿ ಕೂಗಿ ರೂಮಿನೊಳಗೆ ಹೋದಳು. ಸರ್ಕಾರಕ್ಕೆ ಇಡಿಶಾಪ ಹಾಕಿದ್ದೊಂದೇ ನನಗಾದ ಸಮಾಧಾನ. ಈ ಬಟ್ಟೆ ಒಗೆಯೋ ಕೆಲಸ ಈ ಜನ್ಮದಲ್ಲಿ ತಪ್ಪಲ್ಲ ಅಂತ ಗೊಣಗಿಕೊಂಡೇ ಮಿಷಿನ್ ಆನ್ ಮಾಡೋಣ ಅಂತ ಹೋದೆ.



14. ವೆಂಕಟ ಕಾಮತ

ಆಟೋ ಪುರಾಣ ಮತ್ತು ಮಲ್ಲಮ್ಮನ ಪವಾಡ ...

ಭಾಗ 1

ಇಂದಿನ ನಿತ್ಯಜೀವನದಲ್ಲಿ ಆಟೋರಿಕ್ಷಾ ಒಂದು ಅವಿಭಾಜ್ಯ ಅಂಗ ... ಇಂದು ನಾವು ಎಷ್ಟೊಂದು ಸಲ ನಮ್ಮ ಮನೆಗೆ ಯಾರಾದರೂ ಬರುತ್ತೇವೆ .. ಹೇಗೆ ಬರಲಿ ಎಂದೆಲ್ಲಾ ಅಂದರೆ ಕೂಡಲೇ ನೀವು ಉಡುಪಿಲಿ ಎಲ್ಲಿಯೇ ಒಂದು ಆಟೋ ಹತ್ತಿ ನಿಮ್ಮ ಮೊಬೈಲಿಂದ ಕರೆ ಮಾಡಿ ಆ ಮೊಬೈಲ್ ಅನ್ನು ಆ ಆಟೋ ಚಾಲಕನಿಗೆ ಕೊಡಿ ನಾವು ಹೇಳಿದೊಡನೆ ಆತ ಸೀದಾ ನಿಮ್ಮನ್ನು ನಮ್ಮ ಗೇಟಿನ ಬಳೀ ತಂದುಬಿಡುತ್ತಾನೆ ಅಥವಾ ನಾ ಪರಿಚಯದ ಆಟೋ ಕಳಿಸುತ್ತೇನೆ ... ಎಂದು ಈ ಆಟೋ ಮೇಲೆ ಪೂರ್ಣ ಭರವಸೆ ಇಟ್ಟಿದ್ದೇವೆ ...

ಆಟೋ ನೆನಪುಗಳು ಬಹಳ ನಾವು ಪ್ರೈಮರಿ ಶಾಲೆಗೆ ಹೋಗುವಾಗ ಇವುಗಳು ಇದ್ದ ನೆನಪಿಲ್ಲಾ .. ನಮ್ಮ ಸಂಬಂಧಿಕರು ಬಿಳಿ ಅಂಬಾಸೆಡರ್ ಕಾರುಗಳಲ್ಲಿ ಬಂದ ನೆನೆಪು .. 1969 ರಲ್ಲಿ ಜಯನಗರದ 4 ನೇ ಬ್ಲಾಕ್ ಪೂರ್ವದಲ್ಲಿ ನಮ್ಮದೇ ಎಂದು ಒಂದು ಮನೆಕಟ್ಟುವಾಗ ನಮ್ಮ ಅಮ್ಮ ಆಗಾಗ್ಗೆ ಆಟೋದಲ್ಲಿ ಮಕ್ಕಳ್ಳನ್ನು ಜಯನಗರದಿಂದ ಕಲಾಸಿಪಾಳ್ಯಮ್ ಹೊಸ ಬಡಾವಣೆ ಎಂಬಲ್ಲಿ ಇದ್ದ ಬಾಡಿಗೆ ಮನೆಗೆ ಕರೆತರುತ್ತಿದ್ದರು .. ಸಾಮಾನ್ಯವಾಗಿ ನಾವೆಲ್ಲಾ ಸರಕಾರಿ ಕೆಂಪು ಹಳದಿ ಬಿ ಟಿ ಯಸ್ ಬಸ್ಸುಗಳಲ್ಲೇ ತಿರುಗಾಡುವುದಿತ್ತು.

ಒಮ್ಮೆ ಮಡಿಕೇರಿ ಯಲ್ಲಿ ರಾಜಾ ಬಂಗಲೆ ಕಟ್ಟಿಸಿದ ಬಹಳ ಪ್ರೀತಿಯಿಂದಿದ್ದ ಸಂಬಂಧಿಕರ ಗೃಹಪ್ರವೇಶಕ್ಕೆ ಹೋದ ತಂದೆತಾಯಿ ಅವರ ಮನೆಯ ವ್ಯಭವದಿಂದ ಬೆರಗಾಗಿ ಅವರ ಉಟಉಪಚಾರ ಆತಿಥ್ಯ ಸ್ವೀಕರಿಸಿ ಸಮಾರಂಭಕ್ಕೆ ಬರದೇ ಮನೆಯಲ್ಲಿ ಉಳಿದುಕೊಂಡಿರುವ ಮಕ್ಕಳು

ಮತ್ತಿತರರಿಗೆಂದು ತುಂಬಿ ತುಂಬಿ ಕೊಟ್ಟ ಸಿಹಿ ತಿನಿಸು ಮತ್ತಿತರ ಸಾಮಗ್ರಿಗಳು ತುಂಬಿದ ಒಂದು ರಟ್ಟಿನ ಪೆಟ್ಟಿಗೆಯನ್ನು ಆಟೋರಿಕ್ಷಾದಲ್ಲಿ ಸೀಟಿನ ಹಿಂದೆ ಇಟ್ಟು ಇಳಿಯುವಾಗ ಮರೆತು ಈಗ 50 ವರುಷ ಕಳೆದರೂ ನಮಗೆ ಸೀಟಿನ ಹಿಂಭಾಗದಲ್ಲಿ ಏನನ್ನಾದರೂ ಇಡುವಾಗ ಆಗಾಗ್ಗೆ ಈ ನೆನಪು.

ಆ ಡಬ್ಬದಲ್ಲಿದ್ದ ಸಕ್ಕರೆಗೋಡಂಬಿಯನ್ನು ಕಳೆದುಕೊಂಡ ದುಃಖ ಇಂದು ಮದುವೆಮುಂಜಿಗಳಲ್ಲಿ ಲೆಕ್ಕ ಮಾಡಿ 2–3 ಬಡಿಸುವ ಈ ಬಿಳಿ ಸಕ್ಕರೆ ಪಾಕದಲ್ಲಿ ಅದ್ದಿ ತಯಾರಿಸಿದ ಗೋಡಂಬಿ ಸಕ್ಕರೆ ಕಾಯಿಲೆ ಯವರಿಗೆ ಹೆಚ್ಚು ಪ್ರಿಯವೇನೋ ಎಂದು ತಿನ್ನುವಾಗೆಲ್ಲಾ ಈ ಆಟೋ ಕಥೆ ನೆನಪಾಗುತ್ತದೆ ...

ಈ ಆಟೋ ಬಗ್ಗೆ ತಿಳಿದುಕೊಳ್ಳೋಣಾ ಎಂದು ಅಲ್ಲಿ ಇಲ್ಲಿ ಗೂಗಲ್ ವೈಕೀ ಎಂದೆಲ್ಲಾ ಹುಡುಕಿದಾಗ ಕೆಲವು ಮಾಹಿತಿಗಳು ನನ್ನ ಗಮನ ಸೆಳೆದವು .. ಈ ನಮ್ಮ ಪ್ರೀತಿಯ ಆಟೋರಿಕ್ಷಾ ಮೊದಲ ಬಾರಿಗೆ ಓಡಿದ್ದು 1950ರ ಡಿಸೆಂಬರ್ ತಿಂಗಳಿನಲ್ಲಿ .. ಈ ಮೊದಲ ಆಟೋ ಒಂದು ವಿಸ್ತರಿಸಿದ ಸ್ಕೂಟರಿನಂತೆ ಇದ್ದು ಅದಕ್ಕೊಂದು ಬೋಗಿ ಜೋಡಿಸಿದಂತೆ ಇದ್ದು ಕ್ರಮೇಣ ಈ ದಶಕಗಳಲ್ಲಿ ಬಣ್ಣ ಆಕಾರ ಇಂಧನ ಬಳಕೆ ಎಲ್ಲವೂ ಕಾಲಕ್ಕೆ ತಕ್ಕಂತೆ ಬದಲು ಬದಲಾಗಿ ಹೊಸ ರೂಪವನ್ನು ತಾಳಿದೆ ..

1950ರ ನವೆಂಬರ ನಲ್ಲಿ ಬೆಂಗಳೂರಿನ ಮೊದಲ ಚುನಾಯಿತ ಮೇಯರ್ ಏನ್ ಕೇಶವ ರವರ ಕಾರ್ಪೋರೇಶನ್ ಬಳೀಯ ಚೆಂಬರಿನಲ್ಲಿ ಕೆಲವು ಮಂದಿ ಮೋಟಾರು ನಿಯಂತ್ರಿತ ಆಟೋರಿಕ್ಷಾ ಆರಂಭಿಸುವ ಬಗ್ಗೆ ಪ್ರಸ್ತಾವವೊಂದನ್ನು ಇಟ್ಟಾಗ ಜಟಕಾಬಂಡಿ ಓಡಿಸುವವರು ಇದನ್ನು ಖಂಡಿಸಿದರು ಜಟಕಾ ಕುದರೆ ಕಟ್ಟಿದ ಗಾಡಿಗಳು ಅಂದಿನ ಬಡಮಧ್ಯಮ ವರ್ಗಕ್ಕೆ ತಿರುಗಾಡಲು ಪುಡಿಗಾಸಿಗೆ ಸಿಗುವ ವಾಹನವಾಗಿತ್ತು ..

ಬದುಕು ಜಟಕಾ ಬಂಡಿ ಎಂದೆವೆ ಹೊರತು ಎಪ್ಪತ್ತು ವರುಷಕಳೆದರೂ ಬದುಕೊಂದು ಆಟೋರಿಕ್ಷಾ ಎಂದು ಯಾವ ನವ್ಯ ಕವಿಯು ವರ್ಣಿಸಲಿಲ್ಲಾ ...

ಮಧ್ಯಮ ವರ್ಗದವರಿಗೆ ಸಿಗುವ ಸೌಲಭ್ಯಗಳನ್ನು ವಿವರಿಸಿ ಮೊಟ್ಟಮೊದಲಿಗೆ 10 ಆಟೋರಿಕ್ಷಾ ಗಳಿಗೆ ಲೈಸನ್ಸ್ ನೀಡುವ ಮೂಲಕ ರಿಕ್ಷಾ ಪುರಾಣದ ಶುಭಾರಂಭದ ಘಳಿಗೆ ಚರಿತ್ರೆಯ ಪುಟವನ್ನು ಸೇರಿತು ...

ಅಂದಿನ ಮೇಯರ್ ಕೇಶವ ರವರ "ಕೇಶವ್, ನನ್ನ ಆತ್ಮಕಥೆ " 1950ರಲ್ಲಿ ಅವರ ಜಟಕಾಬಂಡಿ ಮಾಲಕರೊಡನೆ ನಡೆದ ಮಾತುಕತೆ .. ತೆಗೆದು ಕೊಂಡ ನಿಲುವು ನಿರ್ಧಾರದಬಗ್ಗೆ ಉಲ್ಲೇಖಿಸಲಾಗಿದೆ . 1950 ರ

ಡಿಸೆಂಬರ್ ನ ಒಂದುದಿನ ಮೇಯರ್ ಖುದ್ದಾಗಿ ರಿಕ್ಷಾ ಮಾಲೀಕ ಮತ್ತು ಆತನ ಇಟಲಿ ದೇಶದ ಪತ್ನಿಯನ್ನು ತನ್ನ ನಿವಾಸದಿಂದ ಅವರು ವಾಸಿಸುತ್ತಿದ್ದ ಬಳೇಪೇಟೆಯ ಬಂಗಲೆಯ ವರೆಗೆ ಬೆಂಗಳೂರಿನ ರಸ್ತೆಗಳ ಮೇಲೆ ಓಡಿಸುವುದರೊಂದಿಗೆ ಬೆಂಗಳೂರಿನ ರಿಕ್ಷಾ ಓಡಾಟಗಳು ಪ್ರಾರಂಭವಾದವು... ಮೊದಲ 10 ರಿಕ್ಷಾ ಗಳೊಡನೆ ನಗರ 1951 ರಲ್ಲಿ ಮತ್ತೆ 45 ರಿಕ್ಷಾಗಳು ಸೇರಲ್ಪಟ್ಟವು. ಅಂದಿನ ದಿನಗಳಲ್ಲಿ 60, 70, 80, 90 ರ ದಶಕದಲ್ಲಿ ರಿಕ್ಷಾ ಬಹಳ ಜನಪ್ರಿಯವಾಗಿರಲಿಲ್ಲಾ .. ಅಂದಿನ ಜನ ಸರ್ಕಾರಿ ಕೆಂಪು ಬಸ್ಸುಗಳಲ್ಲಿ ತಿರಿಗಾಡುವುದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು .. 1970ರ ವರೆಗೆ ಮೀಟರ ದರ ಬಳಕೆಯಲ್ಲಿರಲಿಲ್ಲಾ .. ಕನ್ನಡ ಚಲನಚಿತ್ರ ಗಳಲ್ಲಿ ನಾಯಕ ನಟ ಶಂಕರ ನಾಗ, ವಿಷ್ಣುವರ್ಧನ್ ಮುಂತಾದವರು ರಿಕ್ಷಾ ಓಡಿಸಿ ಜನರಲ್ಲಿ ಆಟೋ ರಿಕ್ಷಾ ಜನಪ್ರಿಯತೆಯನ್ನು ಹೆಚ್ಚಿಸಿದರು ..

1990 ರವರೆಗೆ ಪೆಟ್ರೋಲಿನಂದಲೇ ಓಡಿಸಲಾಗುತ್ತಿದ್ದ ರಿಕ್ಷಾಗಳು .. ಮನೆಯ ಅಡಿಗೆಗೆಬಳ ಸಲಾಗುತ್ತಿದ್ದ ಇಂಧನದಿಂದ ಪ್ರಾಯೋಗಾತ್ಮಕವಾಗಿ ಚಲಾಯಿಸಿದವರಿಗೆ ಶಿಕ್ಷೆ ದಂಡವನ್ನು ವಿಧಿಸಲಾಗಿತ್ತು ... ಬದಲಾವಣೆ ಗಳೊಂದಿಗೆ 2004 ರಲ್ಲಿ S M ಕೃಷ್ಣಾ ಸರ್ಕಾರ 5000 LPG ಪರ್ಮಿಟ್ಟುಗಳನ್ನು ಆಟೋ ಚಾಲಕರಿಗೆ ಒಂದು ಪ್ರಯೋಗಾತ್ಮಕ ನಿಟ್ಟಿನಲ್ಲಿ ಕೊಡುವುದರೊಂದಿಗೆ ಒಂದು ಹೊಸ ಅಧ್ಯಾಯದ ಆರಂಭವಾಯಿತು .. ಇಂದು ಆಟೋರಿಕ್ಷಾ ಗಳು ಪೆಟ್ರೋಲ್ ಡೀಸೆಲ್ LPG ಮತ್ತು CNG ಬಳಸುತ್ತವೆ.. ಇತ್ತೀಚಿಗೆ 2020ರಲ್ಲಿ ಇಲೆಕ್ಟ್ರಿಕ್ ಆಟೋ ಗಳು ಬಳಕೆಗೆ ಬಂದಿವೆ.

10 ಮತ್ತೆ 45 ಹೀಗೆ ಮೊದಲ ಹೆಜ್ಜೆಗಳನ್ನಿಟ್ಟ ನಮ್ಮ ಆಟೋರಿಕ್ಷಾ ಇಂದು 73 ವರುಷಗಳ ನಂತರ 2.5 ಲಕ್ಷ ಸಂಖ್ಯೆಯಲ್ಲಿ ಜನರ ಮೆಚ್ಚಿನ ವಾಹನವಾಗಿ ಓಡಾಡುತ್ತಿವೆ ...

ಭಾಗ 2


ಇಂದು ಮಧ್ಯಮವರ್ಗದವರ ವಾಹನ ವೆಂದರೆ ಆಟೋ ಎನ್ನುವ ಮಟ್ಟಿಗೆ ನಾವು ಆಟೋ ವನ್ನು ಅವಲಂಬಿಸಿದ್ದೇವೆ ..

ಯಾರನ್ನು ನಂಬಿದರೂ ಈ ಆಟೋ ಚಾಲಕರನ್ನು ನಂಬಬಾರದು ... ಹೇಳಿದ ಕಡೆ ಬರಲು ಒಪ್ಪರು .. ಅವ್ರು ಎಲ್ಲಿಗೆ ಹೋಗುತ್ತಾರೆ ಕೇಳಿ ನಾವು ಅಲ್ಲಿಗೆ ಹೋಗುವುದು ಲೇಸು .. ಹೀಗೆಲ್ಲಾ ಆಡಿಕೊಂಡರು ಆಟೋರಿಕ್ಷಾದಷ್ಟು

ಸುಲಭ ಸವಾರಿ ಯಾವುದು ಇಲ್ಲಾ ..

ಈಗ ಮುಂದಿನ ಭಾಗವನ್ನು ನೋಡೋಣ..

ಮಲ್ಲಮ್ಮನ ಪವಾಡ ಎಂಬ ಹೆಸರಿನ ಸಿನಿಮಾ 1969 ರಲ್ಲಿ ಬೆಂಗಳೂರಿನ ಭಾರತ್ ಟಾಕೀಸ್ ನಲ್ಲಿ ಬಿಡುಗಡೆ ಆಗಿತ್ತು ಅದು ಕೊನೆ



ಕೊನೆಯ ಕಪ್ಪು ಬಿಳುಪು ಚಿತ್ರಗಳಲ್ಲಿ ಒಂದು .. ಸಾದಾರಣ 1970 ರಿಂದ ಬಂದ ಚಲನಚಿತ್ರಗಳಲ್ಲಿ ಕಪ್ಪು ಬಿಳುಪು ಬೆರಳೆಣಿಕೆ ಯಷ್ಟು ... ಮಲ್ಲಮ್ಮನ ಪವಾಡ ಡಾ ರಾಜಕುಮಾರ್ ಸರೋಜಾದೇವಿ ವಜ್ರಮುನಿ ಮುಂತಾದ ನಟನಟಿಯರು ಇದ್ದ ಚಲನಚಿತ್ರ .. ಇದು ಖಳನಾಯಕ ವಜ್ರಮುನಿ ಯವರ ಮೊಟ್ಟಮೊದಲ ಚಿತ್ರ ಮತ್ತು ಪುಟ್ಟಣ್ಣ ಕಣಗಾಲ ಸ್ವತಂತ್ರ ನಿರ್ದೇಶಕರಾಗಿ ಡಾ ರಾಜಕುಮಾರರನ್ನು ನಿರ್ದೇಶಿಸಿದ ಪ್ರಥಮ ಚಿತ್ರ.

ಒಬ್ಬ ಕಲಿತ ಚಾಣಾಕ್ಷೆ ಹೆಣ್ಣು ಬಾಲ್ಯದಲ್ಲಿ ಅಫಿಮು ಮುಂತಾದ ಔಷದಿಗಳನ್ನು ಉಣ್ಣಿಸಿ ಆಸ್ತಿಗಾಗಿ ಪೆದ್ದನನ್ನಾಗಿಸಿದ್ದ ವಾರೀಸುದಾರ ಗಂಡನನ್ನು ಪಳಗಿಸಿ ವಿದ್ಯಾವಂತನನ್ನಾಗಿಸಿ ಖಳನಾಯಕ ಬಳಗವನ್ನು ದಿಟ್ಟವಾಗಿ ಎದುರಿಸುವ ಕಥೆ. ಇದು ಪ್ರಥಮವಾಗಿ ಬಂಗಾಳಿ ಯಲ್ಲಿ ಮಣಿಲಾಲ್ ಬ್ಯಾನರ್ಜಿ ಯವರ "ಸ್ವಯಂಸಿದ್ಧ" ಎಂಬ ಕಾದಂಬರಿಯ ಪ್ರೇರಿತ ತೆಲುಗು ಕಾದಂಬರಿ ಅರ್ದಾಂಗಿ ಯ ಕನ್ನಡ ಅನುವಾದಿತ ಕಥೆ ಅರ್ದಾಂಗಿಯ ಚಿತ್ರೀಕರಣವಾಗಿತ್ತು. ಬಂಗಾಳಿ ಕಥೆ "ಸ್ವಯಂಸಿದ್ಧ" 1975 ರಲ್ಲಿ ಅದೇ ಹೆಸರಿನಲ್ಲಿ ಚಲನಚಿತ್ರವಾಗಿ ಮುಂದೆ ತಮಿಳು ಭಾಷೆಯಲ್ಲಿ ಪೆಣ್ಣಿನ್ ಪೆರುಮಯಿ ಎಂಬ ಹೆಸರಿನಲ್ಲಿ ಬಂದು ... ಮತ್ತೆ ಹಿಂದಿಯಲ್ಲಿ ಎರಡು ಸಲ ಬಹೂರಾಣಿ 1963 ಹಾಗು ಜ್ಯೋತಿ 1975 ರಲ್ಲಿ ಬಂದಿವೆ.

ಮಲ್ಲಮ್ಮನ ಪವಾಡ ಮತ್ತೊಮ್ಮೆ ಪ್ರೇರಪಿಸಿ ತಮಿಳಿನಲ್ಲಿ "ಎಂಗ ಚಿನ್ನ ರಸ " ಎಂಬ ಚಿತ್ರವಾಗಿ ತೆಲುಗಿನಲ್ಲಿ "ಅಬ್ಬಾಯಿಗಾರು" ಎಂದು ಚಿತ್ರಿತ ಗೊಂಡಿತು ಇದನ್ನು ಪುನಃ ಹಿಂದಿಯಲ್ಲಿ ಬೇಟಾ ಕನ್ನಡದಲ್ಲಿ ಅಣ್ಣಯ್ಯ ಮತ್ತು ಒರಿಯದಲ್ಲಿ ಸಂತಾನ 1998 ಎಂಬ ಹೆಸರಿನಲ್ಲಿ ಜನಪ್ರಿಯ ಚಿತ್ರಗಳೆನಿಸಿವೆ.

ಮಲ್ಲಮ್ಮನ ಪವಾಡ ಹೆಣ್ಣೊಬ್ಬಳು ಸಾಹಸದಿಂದ ಪವಾಡಸದ್ರಶ ಬದಲಾವಣೆಯನ್ನು ತರುವುದಕ್ಕೆ ಒಂದು ಮಾದರಿ ...

ನಾನು ಚಿಕ್ಕ ಹುಡುಗ ಅಂದರೆ ಶಾಲೆಗೆ ಹೋಗುವ ದಿನಗಳಿಂದ ಕಂಡ ಆಟೊರಿಕ್ಷ ಮುಂದೆ ಬ್ಯಾಂಕ್ ಅಧಿಕಾರಿ ಆದಾಗ ಹೆಚ್ಚಿನ ಅಗತ್ಯಕ್ಕೆ ಒದಗಿ ನನಗೆ ಆಟೋ ಚಾಲಕರ ಒಂದು ಬಳಗವೇ ಗೆಳೆಯರಾಗಿದ್ದಾರೆ ... ಹೀಗೆ ನಾ ಹೊರ ಹೊರಟರೆ ಮೊದಲು ಹುಡುಕುವುದು ಒಂದು ಆಟೋ ವನ್ನು ಈಗ ಮೊಬೈಲಿನಲ್ಲಿ ಓಲಾ ಉಬರ್ ಮುಂತಾದ ಯಾಪ್ ಗಳಿಂದ ಈ ಆಟೋ ನಾವಿದ್ದೇಡೆ ಬರುತ್ತದೆ ...

ಇತ್ತೀಚಿಗೆ ಕೋಣನಕುಂಟೆ ಮೆಟ್ರೋ ಬಳಿ ಓಲಾ ಹಾಕಿದಾಗ ಎಂದಿನಂತೆ ಗಂಡಿನ ಧ್ವನಿಯ ಬದಲು ಒಂದು ಹೆಣ್ಣು ಧ್ವನಿ ಉತ್ತರಿಸಿ 4–5 ನಿಮಿಷಗಳಲ್ಲಿ ಯುನಿಫಾರ್ಮ್ ತೊಟ್ಟ ಚಾಲಾಕಿ ಓರ್ವಳು ಆಟೋ ನನ್ನ ಮುಂದೆ ನಿಲ್ಲಿಸಿದಳು ನನ್ನ 66 ವರುಷದ ಜೀವಮಾನದಲ್ಲಿ ಇದು ನಾನು ಪಯಣಿಸಿದ ಮೊತ್ತ ಮೊದಲ ಹೆಣ್ಣು ನಿರ್ವಾಹಕಿ ನಿಯಂತ್ರಿತ ಆಟೋ ಕುಶಲೋಪರಿ ಜೀವನ ಶೈಲಿಯ ಬಗ್ಗೆ ಮಾತಾಡಿ ..



ಬಹಳ ಹುಡುಗಿಯರು ಈಗ ಆಟೋ ಓಡಿಸುತ್ತಾ ಇದ್ದರು ತನಗೆ ಈ ಬಡಾವಣೆಯ ಸಮೀಪ ಒಬ್ಬಳೇ ಗೆಳತೀ ತನ್ನ ಹಾಗೆ ಆಟೋ ಓಡಿಸುತ್ತಿರುವುದಾಗಿ ಹೇಳಿದಳು . ಎನ್ನಮ್ಮಾ ಬರೀ ಹೆಂಗಸು ಅಥವಾ ಹುಡುಗಿಯರನ್ನು ಒಂದು ದಿನ ಊರು ಸುತ್ತಲೂ ಕರೆದುಕೊಂಡು ಹೋಗುವುದಾದರೆ ಬರುವಿಯೇನು ಎಂದು ಕೇಳಿದಾಗ ಆಕೆ ಹೌದು ಸರ್ ಮೊದಲೇ ಹೇಳಿ ... ಫ್ರೀ ಇದ್ದರೆ .. ಇಲ್ಲವೇ ಫ್ರೀ ಮಾಡಿಕೊಂಡು ಬರಲು ಆಗುತ್ತಾದ್ರೆ ಖಂಡಿತಾ ಬರುತ್ತೇನೆ ಅಂದಳು ... ಎನ್ನಮ್ಮ ನಿನ್ನ ಹೆಸರು ಮತ್ತು ನಂಬರ್ ಅಂದಾಗ ಆಕೆ ಹೇಳಿದಳು...

"ನನ್ನ ಹೆಸರು ಮಲ್ಲಮ್ಮ ನನ್ನ ನಂಬರ್ 96639 54921"

ಇದು ಒಂದು ಮಲ್ಲಮ್ಮ ನ ಪವಾಡವೇ ಅಲ್ಲವೇ

15. ಎಂ.ಎಸ್.ನರಸಿಂಹಮೂರ್ತಿ



ಜಿಪುಣತನದ ಪರಮಾವಧಿ

ಮನುಷ್ಯ ದುಂದುವೆಚ್ಚ ಮಾಡಬಾರದು ಅಂತ ಸಾಮಾನ್ಯವಾಗಿ ಮನುಷ್ಯರೇ ಹೇಳ್ತಾರೆ. ಜಾಸ್ತಿ ಖರ್ಚು ಮಾಡಿದ್ರೂ ಸಮಾಜ ಬೈಯುತ್ತೆ. ಕಡಿಮೆ ಖರ್ಚು ಮಾಡಿದ್ರೂ ಬೈಯುತ್ತೆ. ಖರ್ಚೇ ಮಾಡಲಿಲ್ಲ ಅಂದಾಗ 'ಜುಗ್ಗ', 'ಕಂಜೂಸ್' ಅಂತ ಕರೆಯುತ್ತೆ.

ನಾನು ಅನೇಕ ಜಿಪುಣರನ್ನ ಕಂಡಿದ್ದೇನೆ. ಜಿಪುಣತನದಲ್ಲೇ ಮಹಡಿ ಮನೆಗಳನ್ನು ಕಟ್ಟಿದ ಮಹನೀಯರಿದ್ದಾರೆ.

ಒಬ್ಬ ಜಿಪುಣ ಸಿಕ್ಕಿದ್ದ. ಅವನಿಗೆ ಸುಮಾರು ೩೦ ವರ್ಷ ಇರಬಹುದು. ಚಕ್ಕುಲಿ ಕೊಟ್ಟಾಗ ಕುಟಾಣಿ ತರಿಸಿ ಪುಡಿ ಮಾಡಿ ತಿಂದ. ನನ್ಗೆ ಆಶ್ಚರ್ಯ ಆಯ್ತು.

'ಹಲೋ, ನಿಂಗೆ ಇನ್ನೂ ಚಿಕ್ಕ ವಯಸ್ಸು, ಏನಾಗಿದೆ ನಿನ್ನ ಹಲ್ಲುಗಳಿಗೆ. ಚಕ್ಕಲೀನಾ ಯಾರಾದ್ರೂ ಕುಟಾಣೀಲಿ ಪುಡಿ ಮಾಡಿ ತಿಂತಾರಾ?' ಅಂದೆ.

'ಹಾಗಲ್ಲ. ೫೦ ವರ್ಷ ಆದ್ಮೇಲೆ ಹಲ್ಲುಗಳು ಸವೆದೋದ್ರೆ ರೂಟ್ ಕೆನಾಲ್ ಟ್ರೀಟ್‌ಮೆಂಟ್ ಮಾಡ್ಬೇಕಾಗುತ್ತೆ. ಒಂದೊಂದು ಹಲ್ಲಿಗೆ ಈಗ ಸುಮಾರು ೧೦ ಸಾವಿರ ತಗೋತಾರೆ. ೩೨ ಹಲ್ಲಿಗೆ ೩.೫೦ ಲಕ್ಷ ಖರ್ಚಾಗುತ್ತೆ. ಮುಂದೆ ಬರೋ ವೃಥಾ ಖರ್ಚು ಉಳಿಸ್ಬೇಕು ಅಂದ್ರೆ ನಾವು ಈಗಲಿಂದ ಚಕ್ಕುಲಿ ಕಡೀಬರ್ದು' ಅಂದ.

'ಇನ್ನೂ ಹೇಗೆಲ್ಲಾ ಉಳಿತಾಯ ಮಾಡ್ತೀಯಾ' ಅಂತ ಕುತೂಹಲದಿಂದ ಕೇಳಿದೆ.

'ನಿಮ್ಮ ಮನೆಗೆ ಬರಬೇಕಾದರೆ ನಾನು ಸಾವಿರ ಹೆಜ್ಜೆ ಇಡ್ಬೇಕು. ಚಪ್ಪಲಿ ಸವೆಯುತ್ತೆ. ಅದಕ್ಕೆ ನಾನು ದೂರ ದೂರ ಹೆಜ್ಜೆ ಇಟ್ಟು ೭೫೦ ಹೆಜ್ಜೆಗಳಲ್ಲಿ ನಿಮ್ಮ ಮನೆ ತಲುಪಿದೆ. ೨೫೦ ಸಲ ಚಪ್ಪಲಿ ಊರೋದು ಕಡಿಮೆ ಆಯ್ತಲ್ಲ?' ಎಂದ.

ಇಷ್ಟೆಲ್ಲಾ ಜಾಣ್ಮೆ ವಹಿಸುತ್ತಿದ್ದರೆ ಒಂದಲ್ಲ ಒಂದು ದಿನ ದೇವಸ್ಥಾನದ

ಬಳಿ ಆ ಚಪ್ಪಲಿ ಮಾಯ ಆಗೋದು ಗ್ಯಾರಂಟಿ ಎನ್ನಿಸಿತು.

ನಾನು ಗೆಳೆಯ ವಿಶ್ವನ ಜೊತೆ ಈ ಬಗ್ಗೆ ಮಾತಾಡುತ್ತಾ ಜಿಪುಣತನವನ್ನು ಕಟುವಾಗಿ ವಿರೋಧಿಸಿದ್ದೆ.

'ನಾಲ್ಕು ಅಡಿ ಉದ್ದದ ಒಂದು ಹಳ್ಳ ಹಾರ ಬೇಕಾದರೆ ನೀನು ನಾಲ್ಕು ಅಡಿಗಿಂತ ಜಾಸ್ತೀನೇ ಹಾರಬೇಕು. ಅದರಲ್ಲಿ ಉಳಿತಾಯ ಮಾಡೋಕೆ ಹೋಗಿ ೩.೫ ಅಡಿ ಹಾರಿದ್ರೆ ಒಳಗಡೆ ಬಿದ್ದು ಮೂಳೆ ಮರ್ರ್ಕೋತೀಯಾ' ಅಂದೆ. ಅದಕ್ಕೆ ಅವನು ಒಪ್ಪಲು ತಯಾರಿರಲಿಲ್ಲ.

ನೀರನ್ನು ಉಳಿಸಲು ಕಡಿಮೆ ಕುಡಿಯೋ ಜನರನ್ನು ನೋಡಿದ್ದೇನೆ. ಸೋಪನ್ನು ಉಳಿಸಲು ದಿನ ಬಿಟ್ಟು ದಿನ ಸ್ನಾನ ಮಾಡುವವರನ್ನು ನೋಡಿದ್ದೇನೆ. ಕೆಲವರು ಸೋಪಿನ ಪ್ಲಾಸ್ಟಿಕ್ ರ್‍ಯಾಪರ್ ತೆಗೆಯದೆ ಹಾಗೇ ಬಳಸುತ್ತಾರೆ. ಆಗ ಸೋಪು ಕರಗುವುದಿಲ್ಲ. ಆದರೆ ಇದರಿಂದ ಮತ್ತೇನೋ ಸಮಸ್ಯೆ ಶುರುವಾಗಿ ಒಂದಕ್ಕೆ ನಾಲ್ಕರಷ್ಟು ಆಸ್ಪತ್ರೆಗೆ ಖರ್ಚು ಮಾಡುವ ಸಂದರ್ಭಗಳು ಬಂದಿರೋದೇ ಹೆಚ್ಚು.

ಗೆಳೆಯ ಮೋಹನ ಟಿಫನ್ ಉಳಿಸಲು ಒಂದು ಅದ್ಭುತವಾದ ಸ್ಕೀಮ್ ಶುರು ಮಾಡಿದ್ದ. ಅವನು ಇರುವುದು ದೇವಸ್ಥಾನಗಳು ಹೆಚ್ಚಾಗಿರುವ ಟೆಂಪಲ್ ರಸ್ತೆಯಲ್ಲಿ.

ಬೆಳಗಾಗೆದ್ದು ಟಿಫನ್ ತಯಾರಿ ಮಾಡ್ಲೇಬೇಕು. ಪೂರಿ, ಚಪಾತಿ, ಉಪ್ಪಿಟ್ಟು ಇವೆಲ್ಲಾ ಮಾಡೋಕೆ ತುಂಬಾ ಹಣ ಖರ್ಚಾಗುತ್ತೆ. ಬೆಳಗಾಗೆದ್ದು ಏನಾದರೂ ತಿನ್ನಲಿಲ್ಲ ಅಂದ್ರೆ ಗಾಡಿ ಮುಂದೆ ಹೋಗೋದೇ ಇಲ್ಲ. ಅದಕ್ಕೆ ಅವನು ಮಾಡಿದ ಸುಲಭ ಐಡಿಯಾ ನನಗೆ ಹೇಳಿದ.

'ದೇವರಲ್ಲಿ ಭಕ್ತಿ ಇದ್ರೆ ಹಣ ಉಳಿಯುತ್ತೆ. ಮನೇಲಿ ಟಿಫನ್ ತಯಾರು ಮಾಡೋಷ್ಟಿಲ್ಲ' ಎಂದ.

ನನಗೆ ಆಶ್ಚರ್ಯವಾಯಿತು. ದೇವರಿಗೂ ಇದಕ್ಕೂ ಸಂಬಂಧ ಏನು ಎಂದು ಯೋಚಿಸಿದೆ.

'ಹಣ ಹೇಗೆ ಉಳಿತಾಯ ಮಾಡ್ತೀಯಾ?' ಎಂದು ಕೇಳಿದೆ.

'ಬೆಳಗಾಗೆದ್ದು ದೇವಸ್ಥಾನಕ್ಕೆ ಹೋಗೋದು. ದೇವರಿಗೆ ಒಂದು ನಮಸ್ಕಾರ ಹಾಕೋದು. ಹೊರಗಡೆ ಖಾರಾ ಪೊಂಗಲ್ ಅಥವಾ ಮೊಸರನ್ನ ದೊನ್ನೇಲಿ ಕೊಡ್ತಾರಲ್ಲ ತಿಂದ್ಕೊಂಡು ಬಂದ್ರೆ ಟಿಫನ್ ಮುಗೀತು.'

ನನಗೆ ನಗು ಬಂತು. ದೇವಸ್ಥಾನದಲ್ಲಿ ಕೊಡೋ ಪ್ರಸಾದ ಕೈಯಲ್ಲಿ ಕೊಡ್ತಾರೆ, ಇಲ್ಲ ಪುಟ್ಟ ದೊನ್ನೆಯಲ್ಲಿ ಕೊಡ್ತಾರೆ. ಅದು ಯಾವ ಮೂಲೆಗೆ

ಸಾಧ್ಯ ?

'ಎಲ್ಲಾ ದೇವರಲ್ಲೂ ಭಕ್ತಿ ಇರಬೇಕು.' ಎಂದು ಅವನೇ ಹೇಳಿದ. 'ದೇವರೊಬ್ಬ ನಾಮ ಹಲವು ಅಂತ ಅದಕ್ಕೇ ಹೇಳಿರೋದು' ಎಂದು ನನಗೆ ಉಪದೇಶ ಕೊಟ್ಟ.

'ಅಂದರೆ ಬೇರೆ ದೇವರುಗಳನ್ನ ನೋಡಿ ನಮಸ್ಕಾರ ಹಾಕೋದಾ.?'

'ಹೌದು, ಬೇರೆ ದೇವಸ್ಥಾನಗಳಿಗೂ ಹೋಗ್ತೀನಿ. ಅಲ್ಲಿ ಕೂಡ ನಮಸ್ಕಾರ ಮಾಡ್ತೀನಿ. ನಾನು ಭಕ್ತಿಯಿಂದ ನಮಸ್ಕಾರ ಮಾಡ್ತಿರೋವಾಗ ನನ್ನ ಭಕ್ತಿಗೆ ಮೆಚ್ಚಿದ ಕೆಲವು ಭಕ್ತಾದಿಗಳು ಬಾಳೆ ಹಣ್ಣು, ಕಲ್ಲು ಸಕ್ಕರೆ ಪ್ರಸಾದ ಕೊಟ್ಟಿದ್ದುಂಟು. ಬೇರೆ ಬೇರೆ ದೇವಸ್ಥಾನದಲ್ಲಿ ಬೇರೆ ಬೇರೆ ಪ್ರಸಾದ ಇರುತ್ತೆ. ಕೆಲವು ಕಡೆ ಉಸುಲಿ ಮಾಡ್ತಾರೆ. ಕೆಲವು ಕಡೆ ರಸಾಯನ ಮಾಡ್ತಾರೆ. ಪೊಂಗಲ್, ಪುಳಿಯೊಗರೆ ಅಂತೂ ಮಾಮೂಲು' ಎಂದು ತಿಂಡಿಗಳ ಲಿಸ್ಟೇ ಕೊಟ್ಟ.

'ದೇವಸ್ಥಾನದಲ್ಲಿ ಬರೀ ತೀರ್ಥ ಕೊಟ್ರೆ ಏನು ಮಾಡುತ್ತೀಯಾ?' ಎಂದು ಕೇಳಿದೆ.

'ಪ್ರಸಾದ ಕೊಡೋ ದೇವಸ್ಥಾನಗಳೇ ಬೇರೆ ಇವೆ. ಅವನ್ನು ಲಿಸ್ಟ್ ಮಾಡ್ಕೋಬೇಕು ನಾವು. ಪೂಜಾರೀನ ಗುರುತು ಮಾಡ್ಕೋಬೇಕು. ಕ್ರಮವಾಗಿ ಹೋಗಬೇಕು. ರ್‍ತಾ ಹುಂಡಿ ಮೇಲೆ ಕೈ ಇಟ್ಟು ಬಂದ್ರೆ ಸಾಕು'.

'ಖಾಲಿ ಕೈ ಯಾಕೆ ಇಡಬೇಕು?' ಎಂದು ಕೇಳಿದೆ.

'ಹಣ ಹಾಕ್ತಾ ಇದ್ದಾನೆ ಅಂತ ಜನಕ್ಕೆ ಅನ್ನಿಸಬೇಕು, ಅದು ಗೌರವ ಕಾಪಾಡುತ್ತೆ' ಎಂದ.

ನಾನು ಸಿಂಗಾಪೂರ್‌ಗೆ ಭಾಷಣಕ್ಕೆ ಹೋಗಿದ್ದಾಗ ಅಲ್ಲೊಂದು ವಿಚಿತ್ರ ಕಂಡೆ. ಅಲ್ಲಿನ ಡಾಲರ್ ರೇಟ್ ವಿಪರೀತ ದುಬಾರಿ. ಒಮ್ಮೆ ಟಿಫನ್ ಮಾಡಿದರೆ ನಮ್ಮ ಕರೆನ್ಸೀಲಿ ಕನಿಷ್ಟ ೫೦೦ ರಿಂದ ೧೦೦೦ ರೂಪಾಯಿವರೆಗೂ ಆಗುತ್ತದೆ. 'ಅನ್ನಲಕ್ಷ್ಮಿ' ಎಂಬ ಹೋಟೆಲ್ಲಿಗೆ ನನ್ನ ಗೆಳೆಯ ಕರೆದುಕೊಂಡು ಹೋಗಿದ್ದ. 'ಏನಾದರೂ ತಿನ್ನಿ, ಎಷ್ಟಾದರೂ ತಿನ್ನಿ. ಬಿಲ್ಲು ಇಲ್ಲ' ಇಂಥ ಫ್ರೀ ಸ್ಕೀಮ್ ಅಲ್ಲಿದೆ.

ನಾವು ಏನು ಬೇಕಾದರೂ ತಿನ್ನಬಹುದು. ಅಲ್ಲೊಂದು ಹುಂಡಿ ಇಟ್ಟಿರುತ್ತಾರೆ. ನಾವು ಎಷ್ಟು ತಿಂದರ್ತೀವೋ ಅದಕ್ಕೆ ತಕ್ಕಂತೆ ಆ ಹುಂಡಿಗೆ ನಾವೇ ಹಣ ಹಾಕಬೇಕು. ಆದರೆ ಅದು ಕಂಪಲ್ಸರಿ ಅಲ್ಲ.

'ಅನ್ನಲಕ್ಷ್ಮಿ'ಗೆ ಒಂದು ಡಾಲರ್ ಹಾಕಿ ಬಂದರೂ ಸಾಕು.

ಬೇಕಾದ್ದೆಲ್ಲಾ ನಾವು ಆರ್ಡರ್ ಮಾಡಿದೆವು. ಮಾಣಿ ತಂದು ಕೊಟ್ಟ, ನಾವು ತಿಂದೆವು. ನಾವು ನಾಲ್ಕು ಮಂದಿ ಸೇರಿ ೨೦೦೦ ರೂಪಾಯಿವರೆಗೂ ತಿಂದಿದ್ದೆವು. ಹೊರಗಡೆ ಬರುವಾಗ ಐನೂರು ರೂಪಾಯಿ ಹುಂಡಿಗೆ ಹಾಕಿ ಬಂದೆವು. 'ಅನ್ನ ಲಕ್ಷ್ಮಿ ಎಂಬ ಆ ಹೋಟೆಲ್ಲಿನ ಹೆಸರು. ಅನ್ವರ್ಥ ಎನ್ನಿಸಿತು. ಇಂಥ ಹೋಟೆಲ್‌ಗಳು ನಮ್ಮಲ್ಲಿ ಶುರುವಾದರೆ ಏನು ಗತಿ ಎಂದು ಯೋಚನೆ ಮಾಡಿದೆ. ಆರಾಮಾಗಿ ಅನ್ನ ಛತ್ರದಲ್ಲಿ ತಿಂದು ಎದ್ದು ಬರುವಂತೆ ತಿಂದು ಬರುತ್ತಾರೆ. ಅಪ್ಪಿ ತಪ್ಪಿ ಕೇಳಿದರೂ ಹಣ ಕೊಡುವುದಿಲ್ಲ. ಜಗಳ ಶುರುವಾಗುತ್ತದೆ.

ಮನುಷ್ಯ ಜಿಪುಣತನವನ್ನು ಎಲ್ಲಾ ಕಡೆ ತೋರುವುದು ತಪ್ಪು. ಇರುವಾಗ ನಾವು ಆನಂದ ಪಡಬೇಕು. ಚಾರ್ವಾಕ ತನ್ನ ಸಿದ್ಧಾಂತದಲ್ಲಿ ಇದನ್ನೇ ಹೇಳುತ್ತಾನೆ. ಸಾಲ ಮಾಡಿ ತುಪ್ಪ ತಿನ್ನು ಎಂದು ಸ್ಪಷ್ಟವಾಗೇ ಹೇಳುತ್ತಾನೆ. ಸತ್ತ ಮೇಲೆ ಈ ದೇಹ ಮತ್ತೆ ಹುಟ್ಟಿ ಬರುವುದೆಂಬ ಗ್ಯಾರಂಟಿ ಇಲ್ಲ. ಇದ್ದಾಗಲೇ ನೀನು ತುಪ್ಪವನ್ನು ತಿನ್ನು. ಸಾಲ ಮಾಡಿ ತುಪ್ಪ ತಿನ್ನು ಎಂದು ನೇರವಾಗಿ ಚಾರ್ವಾಕ ಕ್ರಿಸ್ತಪೂರ್ವದಲ್ಲೇ ಹೇಳಿದ್ದಾನೆ.

'ಕೊಟ್ಟಿದ್ದು ತನಗೆ. ಬಚ್ಚಿಟ್ಟಿದ್ದು ಪರರಿಗೆ' ಎಂದು ಸರ್ವಜ್ಞ ಸಹ ಹೇಳಿದ್ದಾನೆ. ನಮ್ಮ ಕೈ ನಡೆಯೋವಾಗ ಹೊಟ್ಟೆ ತುಂಬಾ ಊಟ ಮಾಡಬೇಕು ಅಷ್ಟೇ ಅಲ್ಲ, ಗೆಳೆಯರು, ಸಂಬಂಧಿಗಳನ್ನ ಕರೆಸಿ ಅವರಿಗೆ ಒಂದಷ್ಟು ಊಟ ಹಾಕಿ ಸಂತೋಷ ಪಡಿಸಬೇಕು. ಬದುಕಿರೋವಾಗ ಸಿಗೋ ಆನಂದ ಸತ್ತ ಮೇಲೆ ಸಿಗುವುದಿಲ್ಲ. ನನಗೆ ಸತ್ತು ಅಭ್ಯಾಸವಿಲ್ಲ. ಚಾರ್ವಾಕನ ಸಿದ್ಧಾಂತ ಓದಿ ಅಂದಾಜಿನ ಮೇಲೆ ಹೇಳಿದ್ದೇನೆ. ಹಂಚಿ ತಿಂದರೆ ಆನಂದ ಹೆಚ್ಚು ಎಂಬುದು ನನ್ನ ನಿಲುವು.

16. ಗಣಪತಿ ಹೆಗಡೆ



ನ್ಯಾಯ (ಕಾಯಿದೆ) ಬಾಹಿರ v/s ನೀತಿ ಬಾಹಿರ:

ಕೆಲವು ವರ್ಷಗಳ ಹಿಂದೆ ಸರ್ವೋಚ್ಚ ನ್ಯಾಯಾಲಯದ ಒಂದು ತೀರ್ಪನ್ನು ಓದಿದ ನೆನಪು. 'ವಿವಾಹೇತರ ಲೈಂಗಿಕ ಸಂಬಂಧ ಅನೀತಿಯಾದರೂ, ಸಂಬಂಧಿತರು ಪ್ರಾಪ್ತ ವಯಸ್ಕರಾದಲ್ಲಿ, ಅದು ಒಪ್ಪಿತ ಸಂಬಂಧ. ಅದು ಅಪರಾಧವಲ್ಲ' ಅಂತ. ಇಲ್ಲಿ ವಿವಾಹೇತರ ಸಂಬಂಧ ಎನ್ನುವದು ನೀತಿ ಬಾಹಿರವಾದರೂ ಕಾಯಿದೆ ಬಾಹಿರವಲ್ಲ ಅಂತ ಅರ್ಥೈಸಬಹುದು (ಕಾಯಿದೆ ಅಂದರೆ ನ್ಯಾಯಸ್ಥಾನದಲ್ಲಿ ನಿರ್ಣಯಿಸುವ ವಿಷಯ ಎನ್ನುವ ಹಿನ್ನೆಲೆಯಲ್ಲಿ)

ಅಂದರೆ ನೀತಿ ಹಾಗೂ ನ್ಯಾಯ ಎನ್ನುವ ಪರಿಕಲ್ಪನೆ ಬೇರೆ ಬೇರೆ ರೀತಿಯದ್ದು. ಸಮಾಜದಲ್ಲಿ ಬಹಳ ಕಾಲದಿಂದ ನಡೆದು ಬಂದ ಒಪ್ಪಿತ ಸಾಮಾಜಿಕ ಕ್ರಿಯೆಯೇ ನೀತಿ. ಇದು ಸಮಾಜದಿಂದ ಸಮಾಜಕ್ಕೆ ಬೇರೆ ಬೇರೆಯಾಗಿರುತ್ತದೆ. ಅಷ್ಟೇ ಅಲ್ಲ ಒಂದೇ ಸಮಾಜವಾದರೂ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆಯಾಗಿರುತ್ತದೆ. ಒಂದೇ ಪ್ರಭುತ್ವದ ಆಡಳಿತದಲ್ಲಿ ಇದ್ದರೂ ಬೇರೆ ಬೇರೆ ಸಮಾಜ ತಮ್ಮ ತಮ್ಮ ರೀತಿ ರಿವಾಜುಗಳನ್ನು ನಡೆಸಿಕೊಂಡು ಹೋಗುತ್ತಾರೆ. ಈ ರೀತಿ ರಿವಾಜುಗಳಿಗೆ ಅತಿರಿಕ್ತರಾಗಿ ನಡೆದುಕೊಂಡಲ್ಲಿ ಆ ಬಾಳುವೆ 'ನೀತಿಗೆಟ್ಟ ಬಾಳುವೆ' ಎನಿಸಿಕೊಳ್ಳುತ್ತದೆ. ಅಂತಹ ಜನರನ್ನು ಸಮಾಜ ನೀತಿಗೆಟ್ಟ ಜನ ಅಂತ ಗುರುತಿಸುತ್ತದೆ.

ಆದರೆ ಕಾಯಿದೆ ಹಾಗಲ್ಲ. 'ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಪ್ರಭುತ್ವ ಹೇರಿದ ನಿಯಮಾವಳಿಗಳೇ ಕಾಯಿದೆ.' ಹಿಂದಿನ ಕಾಲದಲ್ಲಿ ಇದನ್ನು ಶಾಸ್ತ್ರ ಎನ್ನುತ್ತಿದ್ದರು. 'ವಿಧಿ ನಿಷೇಧಗಳಿಂದ ಕೂಡಿದ್ದು ಶಾಸ್ತ್ರ. ಕಾಯಿದೆಯೂ ಹಾಗೇ. ಕೆಲವೊಂದು ಕೆಲಸಗಳನ್ನು ಮಾಡಬೇಕಾಗುತ್ತದೆ. ವಿಧಿ ಅಥವಾ ನಿಯಮ. ಉದಾ: ತೆರಿಗೆಯನ್ನು ಕೊಡಬೇಕಾಗಿರುವದು, ರಸ್ತೆಯಲ್ಲಿ ನಿಶ್ಚಿತ ಕ್ರಮದಲ್ಲಿ ವಾಹನ ಚಾಲನೆ ಇತ್ಯಾದಿ. ಹಾಗೂ ಇನ್ನು ಕೆಲವು ಕೆಲಸಗಳನ್ನು ಮಾಡಲೇ ಬಾರದು ಅಂದರೆ ನಿಷೇಧ. ಕುಡಿದು ವಾಹನ ಚಲಾಯಿಸಬಾರದು, ಅಸ್ಪ್ರಶ್ಯತೆ

ಆಚರಣೆ ಮಾಡಬಾರದು, ಇತ್ಯಾದಿ.

ಅವಳಿಗೆ ಮೋಸಮಾಡಬಾರದಿತ್ತು, ಅವನನ್ನು ಖಲಾಸೆ ಮಾಡಿದ್ದು ಅನ್ಯಾಯ, ಅವನನ್ನು ದೇವರು ಸುಮ್ಮನೆ ಬಿಡುವದಿಲ್ಲ, ಇಂತಹ ಹೇಳಿಕೆಗಳನ್ನು ನಾವು ದಿನನಿತ್ಯ ಕೇಳುತ್ತಿರುತ್ತೇವೆ. ಇಲ್ಲಿ ಕಾಯಿದೆಯ ವಿಷಯ ಪ್ರಸ್ಥಾಪಿಸಲ್ಪಡುವದಿಲ್ಲ. ಅವರಿಗೆ ಸಂದ ಶಿಕ್ಷೆಯೋ ಅಥವಾ ಪರಿಹಾರವೋ ಕಾಯಿದೆಯ ದೃಷ್ಟಿಯಿಂದ ಸರಿಯೇ ಇದ್ದೀತು. ಆದರೆ ಸಮಾಜದಲ್ಲಿ ಹಾಸು ಹೊಕ್ಕಾದ ನೈತಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಆಡುತ್ತಾರೆ ಜನರು, ಅಷ್ಟೇ.

ನಾವೆಲ್ಲ ಕನ್ನೇಶ್ವರ ರಾಮನ ಚರಿತ್ರೆಯನ್ನು ತಿಳಿದವರೇ ಇದ್ದೇವೆ. ಬ್ರಿಟೀಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರ. ಆ ಕಾಲದ ಪ್ರಭುತ್ವವನ್ನು ವಿರೋಧಿಸಿ ಶಿಕ್ಷೆ ಅನುಭವಿಸಿದವನು. ಆ ಶಿಕ್ಷೆ ಕಾಯಿದೆಯ ಪ್ರಕಾರ ಸರಿಯೇ. ಅಷ್ಟೇ ಅಲ್ಲ. ಅವನು ಒಬ್ಬ ದರೋಡೇಕೋರ. ಆದರೆ ಅವನು ಸಿರಿವಂತರನ್ನು, ದುಷ್ಟರನ್ನು ಬಡಿದು, ದುರ್ಮಾರ್ಗಿಗಳನ್ನು ಬಡಿದು ಬಡಜನತೆಗೆ ಉಪಕಾರ ಮಾಡುತ್ತಿದ್ದ. ಅವನ ಮಾನವೀಯ ವ್ಯಕ್ತಿತ್ವ ಇದೆಯಲ್ಲ, ಆ ಕಾರಣಕ್ಕಾಗಿ ಜನರು ಅವನನ್ನು ಮೆಚ್ಚುತ್ತಿದ್ದರು. ಬಲಿಷ್ಠರಾದ ದುಷ್ಟ ಜನರನ್ನು ನಿಗ್ರಹಿಸಿ ಬಡವರಿಗೆ ಅನುಕೂಲ ಮಾಡಿಕೊಡುವದು, ಅವರು ಸಾಮಾನ್ಯ ಜನರಾದರೂ, ಸಮಾಜದಲ್ಲಿ ನೀತಿ ಎನಿಸಿಕೊಳ್ಳುತ್ತದೆ. ಹಿಂದಿನ ಸ್ವಾತಂತ್ರ್ಯ ಹೋರಾಟದಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ಕಾಣಬಹುದು. ನಮ್ಮ ಕಡೆ ಆಲೂರು ಮುಶ್ಯ ಎನ್ನುವವನೂ ಸಿರಿವಂತ ಜನರನ್ನು ದೋಚಿ ಬಡವರಿಗೆ ಹಂಚುತ್ತಿದ್ದಾನಂತೆ. ಹೆಂಗಸರು ಮಕ್ಕಳ ಕುರಿತಾಗಿ ಉನ್ನತ ಭಾವನೆ ಇತ್ತಂತೆ. ಅವನ ದರೋಡೆಕೋರತನಕ್ಕೆ ಹೆದರುವವರು ಶ್ರೀಮಂತರು ಹಾಗೂ ಮೋಸಗಾರರೇ ವಿನಃ ಬಡ ಜನತೆ ಆಗಿರಲಿಲ್ಲ. ಇಂತಹ ಘಟನೆಗಳು ಕಾಯಿದೆ ಬಾಹಿರವೇ ವಿನಃ ನೀತಿ ಬಾಹಿರವಾಗಿರುವದಿಲ್ಲ.

ಪುರಾಣ ಕಾಲದಲ್ಲಿಯೂ ಇಂತಹ ಘಟನೆಗಳು ನಡೆಯುತ್ತಿದ್ದವು. ನ್ಯಾಯಶಾಸ್ತ್ರ (ಕಾಯಿದೆ) ಹಾಗೂ ನೀತಿ ಶಾಸ್ತ್ರ ಬೇರೆಬೇರೆಯವೇ. ಬಹಳ ಸಲ ಅವುಗಳ ಮಧ್ಯೆ ಸಂಘರ್ಷವೂ ನಡೆಯುವದಿತ್ತು. ಅಪರಾಧಕ್ಕೆ ಶಿಕ್ಷೆಯಾಗುವದು ನ್ಯಾಯ ಶಾಸ್ತ್ರದ ರೀತ್ಯ. ಅಲ್ಲಿ ಪ್ರಭುತ್ವದ (ರಾಜನ) ನಿರ್ಣಯವೇ ಅಂತಿಮ. ಎಷ್ಟೋ ಸಲ ಅದು ನೀತಿಬಾಹಿರವಾಗಿಯೂ ಇರುತ್ತಿತ್ತು.

ಆ ಕಾಲದಲ್ಲಿ ದಾಸ/ದಾಸಿಯರಿಗೆ ಸ್ವಾತಂತ್ರ್ಯವಿರಲಿಲ್ಲ. ಯಜಮಾನ/

ಯಜಮಾನಿಯ ಆಶೋತ್ತರಗಳಿಗೆ ಅನುಗುಣವಾಗಿ ದಾಸ/ದಾಸಿಯರು ನಡೆದು ಕೊಳ್ಳಬೇಕಿತ್ತು. ಕ್ರೂರವಾಗಿ ಅಥವಾ ಅಸಭ್ಯವಾಗಿ ಯಜಮಾನರು ನಡೆದು ಕೊಂಡರೂ ಆ ಕ್ರಿಯೆ ಕಾಯಿದೆ(ನ್ಯಾಯ) ಬಾಹಿರವಾಗಿರಲಿಲ್ಲ. ಆದರೆ ಇಂತಹ ಘಟನೆಗಳನ್ನು ನೀತಿ ಬಾಹಿರ ಅಂತಲೇ ಗುರುತಿಸುತ್ತಿದ್ದರು.

ಆದರೆ ಯಜಮಾನನಾದವನು ಉತ್ತಮನಾಗಿದ್ದಲ್ಲಿ ದಾಸ/ದಾಸಿಯರನ್ನು ಮಕ್ಕಳ ಹಾಗೆ, ಸಹೋದರರ ಹಾಗೆ ನಡೆಸಿಕೊಂಡಿದ್ದೂ ಇದೆ. ನ್ಯಾಯ ಎನ್ನುವದು ಯಜಮಾನನ ಮನೋಸ್ಥಿತಿಯನ್ನು ಅವಲಂಬಿಸಿರುತ್ತಿತ್ತು.

ಒಬ್ಬ ವ್ಯಕ್ತಿಗೆ ನಾಲ್ವರು ಮಕ್ಕಳು ಇದ್ದಾರೆ ಎಂದಿಟ್ಟುಕೊಳ್ಳೋಣ. ಇಬ್ಬರು ಹುಡುಗಿಯರು ಇನ್ನಿಬ್ಬರು ಹುಡುಗರು ಇರಲಿ. ಆ ವ್ಯಕ್ತಿಯ ಆಸ್ತಿಯಲ್ಲಿ ನಾಲ್ವರು ಮಕ್ಕಳಿಗೂ ಸಮನಾದ ಪಾಲಿರುವದು ಈಗಿನ ಕಾಯಿದೆ. ಯಾವುದೋ ಒಬ್ಬರಿಗೆ ಹೆಚ್ಚು ವಿದ್ಯೆ ಕಲಿಸಿ ಉನ್ನತ ನೌಕರಿಗೆ ಹಚ್ಚುವದರಿಂದಲೋ, ಮಗಳಿಗೆ ಯೋಗ್ಯ ಹಾಗೂ ಸಿರಿವಂತ ಸಂಬಂಧ ನೋಡಿ ಮದುವೆ ಮಾಡುವದರಿಂದಲೋ ಆಸ್ತಿಯ ವಿಭಜನೆಯಲ್ಲಿ, ಕಾಯಿದೆಯ ಪ್ರಕಾರ, ವ್ಯತ್ಯಾಸ ಮಾಡುವ ಹಾಗಿಲ್ಲ. ಅದು ಕಾಯಿದೆ. ಅಲ್ಲಿ ಆ ವ್ಯಕ್ತಿಯ ಮಕ್ಕಳಾದುದರಿಂದ ನಾಲ್ವರೂ ಸಮಾನ ಪಾಲುದಾರರು.

ಆ ವ್ಯಕ್ತಿಯ ಆಸ್ತಿ ಸ್ವಯಾರ್ಜಿತವಾದಲ್ಲಿ, ಅವನು ತನ್ನ ಸ್ವಂತ ವಿವೇಚನೆಯಂತೆ, ಆಸ್ತಿಯನ್ನು ತನ್ನ ಮಕ್ಕಳಲ್ಲಿ ಹಂಚಬಹುದು. ಆ ಸಂದರ್ಭದಲ್ಲಿ ಅವನು ತನ್ನ ಮಕ್ಕಳಲ್ಲಿ, ಪಕ್ಷಪಾತ ಮಾಡಿ ಆಸ್ತಿಯನ್ನು ಹಂಚಿಕೆ ಮಾಡಿದರೆ, ಕಾಯಿದೆಯ ಪ್ರಕಾರ, ಅದೇನೂ ಅಪರಾಧ ಎನಿಸಿಕೊಳ್ಳುವದಿಲ್ಲ. ಆದರೆ ಅದು ನೈತಿಕವಾಗಿ ತಪ್ಪು. ಆ ವ್ಯಕ್ತಿ ಸಮಾಜವನ್ನು ಎದುರಿಸುವಾಗ ಮುಜುಗರವನ್ನು ಎದುರಿಸಬೇಕಾಗುತ್ತದೆ.

ಹೀಗೆ ಎಷ್ಟೋ ವಿಷಯಗಳಲ್ಲಿ, ಕಾಯಿದೆ ಬಾಹಿರ ಹಾಗೂ ನೀತಿ ಬಾಹಿರ, ಹೀಗೆ ಎರಡೂ ವಿಷಯಗಳಲ್ಲಿ ಸಮತ್ವವನ್ನು ಸಾಧಿಸಿಕೊಳ್ಳಬೇಕು.



17 ಪೋಲೇನಹಳ್ಳಿ ರಮೇಶ್

ಶರಧಿ

ಶರಧಿಯನು ಮತ್ತೊಮ್ಮೆ ಮಥಿಸಿ ಅರಿಯುವ
ಆಸೆ ನನಗೇಕೆ ಬಂದಿತೋ ತಿಳಿಯಲಿಲ್ಲ.
ಅವನ ಪರ ವಾದ ಕೇಳಿ ಅರಿವಾದುದಿಷ್ಟೆ
ಜನಕಿಂತ ಕೆಡುಕರು ಬೇರೆ ಯಾರೂ ಇಲ್ಲ

ತುಂಬಿದ ಕೊಡ ಶರಧಿ ಭೂಮಿಗೆ ಪರಿಧಿ ನಿಧಿ
ಅವಗಿಲ್ಲ ಖಂಡಗಳ ಪ್ರತ್ಯೇಕ ಮಾಡುವ ಗೀಳು
ಎಲ್ಲವನು ಬೆಸೆದು ಏಕವಾಗಿದೆ ಶರಧಿ ಏಳೂ
ಮಡುವಲ್ಲ ಅವ ಸೈನ್ಯ ತೀರವನು ರಕ್ಷಿಪ ಆಳು

ದೂರ ತೀರದ ಕನಸುಗಳ ಅಳಿಸಿ ಹಾಕಲು
ಅಲೆ ಏಬ್ಬಿಸುವವನಲ್ಲ ಅವ ಕೋಟಿ ಕೋಟಿ
ಜಲಚರಗಳಿಗೆ ಆಶ್ರಯ ಜಲಧಿ ತವರು
ಅನಿವಾರ್ಯ ಸುನಾಮಿ ಒಡಲ ಉರಿ ಸುಡಲು

ಕತ್ತಲನು ಉಗುಳುವುದಿಲ್ಲ ರವಿಯ ನುಂಗಿ
ಹೆದರಬೇಕಿಲ್ಲ ಅವ ತೇಲಿಸುವ ತೆಳ್ಳನೆಯ ನೀರು
ಬಣ್ಣ ಬದಲಿಸದವನು ಜಗವ ಸುತ್ತಲು ಗಮ್ಯಹಾದಿ
ಹುಣ್ಣಿಮೆಗೆ ಉಕ್ಕುವನು ಆಗ ಜಗಕೆ ಬೆಳದಿಂಗಳು

ಜನ ತಿಳಿಗಾಳಿ ಇತ್ತವಗೆ ವಿಷಕಾರುತಿರುವರು
ಹರಿವ ನದಿಗಳಿಗೆ ವಿಷವಿಕ್ಕಿ ಅಡೆತಡೆಗಳನಿಕ್ಕಿ
ಅಡ್ಡ ಗೋಡೆಗಳ ನಡುಮನೆಗೆ ತಂದಿಕ್ಕಿ
ಸೇತುವೆಯ ಹುಡುಕುವ ಚಾಳಿಯವರು

ನಿದ್ರಿಸುವುದಿಲ್ಲ ಶರಧಿ ಇರುಳು ಆಕಾಶ ಹೊದ್ದು
ಮುತ್ತು ರತ್ನಗಳ ಒಡೆಯ ಲಕ್ಷ್ಮೀ ಒಡಲೊಳಗಿಹಳು
ಪ್ರತಿಯಾಗಿ ಒಗೆಯುವೆವು ಕಾಮಧೇನುವಿಗೆ
ಬಾಟಲಿಗಳು ಧರೆಗಿಳಿದ ಬಾಂಬು ರಾಕೆಟ್ಟುಗಳು.

ಶರಧಿಯನು ಮತ್ತೊಮ್ಮೆ ಮಥಿಸುವ ಆಸೆ
ನನಗೇಕೆ ಬಂದಿತೋ ತಿಳಿಯಲಿಲ್ಲ.
ಅವನ ಪರ ವಾದ ಕೇಳಿ ಅರಿವಾದುದಿಷ್ಟೆ
ಜನಕಿಂತ ಕೆಡುಕರು ಬೇರೆ ಯಾರೂ ಇಲ್ಲ.

18 ಟಿ.ಎಸ್.ಶ್ರವಣ ಕುಮಾರಿ



ಕಸ್ತ್ವಂ ಕೋಽಹಂ



ತುರ್ತು ಚಿಕಿತ್ಸಾ ಘಟಕದ ಡಾಕ್ಟರು ನನ್ನ ಹೆಸರನ್ನು ಕೂಗಿ "ಸಂದೇಶ ಬಂದಿದೆ, ಇವರನ್ನು ತೀವ್ರ ನಿಗಾ ಘಟಕಕ್ಕೆ ಕಳಿಸಿ" ಎನ್ನುತ್ತಾರೆ. ಸರಸರನೆ ತೀವ್ರ ನಿಗಾ ಘಟಕದ ಸ್ಟ್ರೆಚರಿಗೆ ವರ್ಗಾಯಿಸಿ ಆ ಇನ್ನೊಂದು ಬೇರೆಯೇ ಪ್ರಪಂಚದೊಳಗೆ ಕಾಲು, ಕಾಲಲ್ಲ – ಇಡೀ ದೇಹವೇ ಅಲ್ಲಿಗೆ ಸಾಗಿ ನನ್ನ ಚಿಕಿತ್ಸೆಯ ಪರ್ವ ಆರಂಭವಾಗುತ್ತದೆ...

ಸ್ಟ್ರೆಚರ್ ತೀವ್ರ ಚಿಕಿತ್ಸಾ ಘಟಕದ ಬಾಗಿಲ ಮುಂದೆ ನಿಂತೊಡನೆ ಸ್ವರ್ಗದ್ದೋ, ನರಕದ್ದೋ ಬಾಗಿಲು ತೆರೆದಂತೆ ಘಟಕದ ಎರಡೂ ಬಾಗಿಲುಗಳೂ ತೆರೆದುಕೊಂಡವು. ಅಷ್ಟರಲ್ಲೇ ಯಮಕಿಂಕರ ನನ್ನ ಹಿಂದೆಯೇ ತೂರಿಕೊಳ್ಳಲು ನೋಡಿದ. ಆದರೆ ಇಲ್ಲಿನ ದ್ವಾರಪಾಲಕ ಬಿಟ್ಟಾನೆಯೇ! "ಈಗ ನಿನಗಿಲ್ಲಿ ಪ್ರವೇಶವಿಲ್ಲ ಹೋಗಯ್ಯಾ. ಅವಶ್ಯಕತೆ ಬಿದ್ದರೆ ಬರುವೆಯಂತೆ" ಎಂದು ಅವನನ್ನು ಗದರಿ ಕಳುಹಿಸಿದ. "ಬೆಡ್ ನಂಬರ್ ಫೈವ್" ಎಂದು ಒಳಗೆ ಕರೆದುಕೊಳ್ಳುವ ಡಾಕ್ಟರ್ ಸೂಚನೆ ನೀಡಿದರು. ಅಲ್ಲಿಂದ ಮುಂದೆ ನನ್ನ ಹೆಸರು 'ಬೆಡ್ ನಂಬರ್ ಫೈವ್ ಪೇಶೆಂಟ್' ಎಂದೇ. ದಿನ ನಿತ್ಯ ಬಂದುಹೋಗುವ ಜನರಲ್ಲಿ ಅವರು ತಾನೇ ಅದೆಷ್ಟು ಜನರ ಹೆಸರನ್ನು ನೆನಪಿಟ್ಟುಕೊಳ್ಳಲು ಸಾಧ್ಯ ಹೇಳಿ. ನನ್ನ ಹಾಸಿಗೆಗೆ ನಿಯಮಿತಳಾಗಿರುವ ದಾದಿ ಅಲ್ಲಿರುವಷ್ಟು ಹೊತ್ತು ಸ್ವಲ್ಪ ನೆನಪಿಸಿಕೊಂಡು ಕರೆಯುತ್ತಾಳೇನೋ ಅಷ್ಟೇ. ಅದು ಬರಿ ತಾತ್ಕಾಲಿಕ ನೆನಪಷ್ಟೇ. ಮರುದಿನ ಬೇರೆ ರೋಗಿಗೆ ಅಲಾಟ್ ಆದರೆ ಮನಸ್ಸಿನಲ್ಲೇ ನನ್ನ ಹೆಸರು ಅಳಿಸಿ ಅವರ ಹೆಸರು ಅಲ್ಲಿ ಬರೆದುಕೊಳ್ಳುತ್ತಾಳಷ್ಟೇ!

ಅ ಚಾರ್ಟಿನಲ್ಲಿರುವ ವಿವರಗಳನ್ನು ಡ್ಯೂಟಿ ಡಾಕ್ಟರು ಸರಸರನೆ ಓದಿಕೊಂಡು, ದಾದಿಯನ್ನು ಕರೆದು ಎಲ್ಲಾ ಸೂಚನೆಗಳನ್ನೂ ಕೊಟ್ಟರು.

ಅಷ್ಟರಲ್ಲಿ ನನ್ನ ಡಾಕ್ಟರ್ ಇನ್ನೇನೋ ಸೂಚನೆಯನ್ನು ದೂರವಾಣಿಯ ಮುಖಾಂತರ ನೀಡಿದರೇನೋ, ಅದನ್ನೂ ಚಾರ್ಟಿನಲ್ಲಿ ಬರೆದಿಟ್ಟುಕೊಂಡು ದಾದಿಗೆ ಮುಂತೇದಿಸಿದರು. ನನ್ನ ದೇಹ ಅವಳ ಪಾಲಿಗೆ ಒಬ್ಬ ರೋಗಿಯ ದೇಹ ಮಾತ್ರಾ. ಅವಳು ಸರಸರನೆ ಮೂಗಿಗೆ ಆಕ್ಸಿಜನ್ ನಳಿಕೆಯನ್ನು ಸಿಕ್ಕಿಸಿ, ಕೈಗೆ ಪ್ರತಿ ಕಾಲುಗಂಟೆಗೆ ತಂತಾನೇ ನೋಡುವ ರಕ್ತದೊತ್ತಡದ ಯಂತ್ರವನ್ನು ಬಿಗಿದಳು. ಮುಂಗೈ ಮೇಲೆ ಹಾಕಿರುವ ಮೂರುಮೂತಿಯ ನಳಿಕೆಯಲ್ಲಿ ಒಂದರ ಬಾಯಿ ತೆರೆದು ಅಲ್ಲೇನೋ ಇಂಜಕ್ಷನ್ ಚುಚ್ಚಿ ಔಷಧಿ ಒಳಸೇರುವಂತೆ ಸವರಿದಳು. ಆಮ್ಲಜನಕದ ಮಟ್ಟವನ್ನು ದಾಖಲಿಸುತ್ತಾ ಹೋಗುವ ಯಂತ್ರವನ್ನು ಅಳವಡಿಸಿದಳು. ಮೂತ್ರ ಹರಿದುಹೋಗಲು ನಾಳವನ್ನು ತೂರಿಸಿ ಚೀಲಕ್ಕೆ ಹೊಂದಿಸಿದಳು. ಅಲ್ಲಿಗೆ ಅವಳು ಪೀಠಪೂಜೆಯನ್ನು ಮಾಡಿ ನನ್ನನ್ನು ಬೆಡ್‌ನಂಬರ್ ಐದರಲ್ಲಿ ಪ್ರತಿಷ್ಠಾಪಿಸಿದ್ದಾಯಿತು. ನನ್ನ ಸೇವೆಗೆ ದಿಕ್ಪಾಲಕರಂತೆ ಯಂತ್ರಗಳನ್ನು ನಿಯಮಿಸಿದ್ದಾಯಿತು.

ಮಿಕ್ಕೆಲ್ಲಾ ದಿನಗಳಲ್ಲಿ ಹಣೆಯಲ್ಲಿ ಇಟ್ಟುಕೊಂಡಿರುವ ಬಿಂದಿ ಸ್ವಲ್ಪ ಪಕ್ಕಕ್ಕಿದ್ದರೆ, ಸೀರೆಯ ಸೆರಗಿಗೆ ಹಾಕಿದ ಪಿನ್ ಸರಿಯಾಗಿಲ್ಲದಿದ್ದರೆ, ನೆರಿಗೆ ಸರಿಯಾಗಿ ಕೂರದಿದ್ದರೆ ಏನೋ ಮುಜುಗರ ಅನುಭವಿಸುವ ನನಗೆ ಅವಳು ಈ ದೇಹವನ್ನು ಒಂದು ಪರೀಕ್ಷೆಗೆ ಇಟ್ಟುಕೊಂಡಿರುವ ವಸ್ತುವಿನಂತೆ ಉಪಯೋಗಿಸುತ್ತಿರುವಾಗ ಏಕೆ ಅಂತಹ ಮುಜುಗರ ಕಾಡುತ್ತಿಲ್ಲ? 'ಈ ದೇಹಕ್ಕೆ ಏನಾಗಿದೆ?' ಎನ್ನುವ ಕುತೂಹಲವೊಂದೇ ಮನದಲ್ಲಿದೆಯಲ್ಲ! ಹಾಗಾದರೆ 'ನಾನು' ಎಂದರೆ ಯಾರು? ಈ ದೇಹವೇ ಅಥವಾ ಮನಸ್ಸೇ ಅಥವಾ ಅದನ್ನೂ ಮೀರಿದ ಬೇರೆ ಇನ್ನಾವುದೋ ಒಂದು ಪ್ರಜ್ಞೆಯೇ. ಸಧ್ಯಕ್ಕೆ ಈ ದೇಹಕ್ಕೆ ಅವರು ಮಾಡುತ್ತಿರುವುದೆಲ್ಲವನ್ನೂ ನಾನೂ ಕುತೂಹಲದಿಂದ, ಅಚ್ಚರಿಯಿಂದ ಎನ್ನುವಂತೆ ನೋಡುತ್ತಿದ್ದೇನಲ್ಲ! ದೇಹಕ್ಕೆ ನೋವಾಗುತ್ತಿದೆ, ಆಯಾಸವಾಗುತ್ತಿದೆ ನಿಜ. ಆದರೆ ಮನಸ್ಸು ಸಂಪೂರ್ಣವಾಗಿ ಎಚ್ಚರವಾಗಿದೆ. ನನ್ನನ್ನೇ ಕೇಳಿಕೊಳ್ಳುತ್ತಿದ್ದೇನೆ 'ಕೋಽಹಂ – ನೀನು ಯಾರು ಹಾಗಾದರೆ? ದೇಹವೇ, ಮನಸ್ಸೇ, ಆತ್ಮವೇ? ಕಸ್ತ್ವಂ – ದೇಹವೋ, ಮನಸ್ಸೋ, ಪ್ರಜ್ಞೆಯೋ –ಇವುಗಳಲ್ಲಿ ನಾನು ಯಾರು?' ಈ ದೇಹ 'ನನಗೆ' ಸಂಬಂಧಿಸಿದ್ದು ಎಂದು ಮಾತ್ರಾ ಅನ್ನಿಸುತ್ತಿದೆ ಆದರೆ 'ನನಗೆ' ಎನ್ನುವುದು ಯಾವುದು? ನನ್ನ ತರ್ಕ ಸರಣಿಗೆ ನನಗೇ ಉತ್ತರ ಸಿಗಲಿಲ್ಲ... ಅದೇನೂ ಆಗಲಿ. ನಾನು ಆಧ್ಯಾತ್ಮವನ್ನು ಹೆಚ್ಚು ಅರಿತವಳಲ್ಲ. ಹಾಗಾಗಿ ಆಗಿನಿಂದ ನನ್ನ ಮನಸ್ಸೋ, ಆತ್ಮವೋ, ಪ್ರಜ್ಞೆಯೋ... ಏನೋ ಒಂದು, ಅದು ಹೊರಗಿನಿಂದ ನನ್ನನ್ನೇ ವೀಕ್ಷಿಸಲು

ಆರಂಭಿಸಿತ್ತು. ನನ್ನ ದೇಹಕ್ಕೆ ಮಾಡುತ್ತಿರುವ ಎಲ್ಲಾ ಚಿಕಿತ್ಸೆಯನ್ನೂ ಎಚ್ಚರದಿಂದ ಗಮನಿಸುತ್ತಿತ್ತು.

ಈ ಆಕ್ಸಿಜನ್ ಒಂದು ಬೇಗ ಸರಿಹೋಗಿಬಿಟ್ಟರೆ ಸಾಕು. ಆದಷ್ಟು ಬೇಗ ಮನೆಗೆ ಹೋಗಿಬಿಡಬೇಕು. ದಾದಿಯನ್ನು ಕೇಳಿದೆ "ನನಗೇನಾಗಿದೆ?". ಅದನ್ನೇ ಇನ್‌ವೆಸ್ಟಿಗೇಶನ್ ಮಾಡ್ತಿದಾರೆ. ಸಧ್ಯಕ್ಕೆ ನಿಮ್ಮ ಆಕ್ಸಿಜನ್ ಏರಬೇಕು. ಎಲ್ಲಿ ಜೋರಾಗಿ ಉಸಿರು ತೊಗೊಳ್ಳಿ. ಮಾತಾಡಬೇಡಿ. ಆಯಾಸ ಮಾಡ್ಕೋಬೇಡಿ. ಹಾ... ಹಾಗೆ... ಜೋರಾಗಿ ಉಸಿರಾಡಿ ಇನ್ನೂ... ಇನ್ನೂ..." ಎನ್ನುತ್ತಾ ಹಿಂದಿರುವ ಮಾನಿಟರನ್ನು ನೋಡಿ ಹೊರಟಳು. 'ಉಸಿರಾಡಿ' ಅಂತ ಹೇಳಿಸಿಕೊಂಡು ಉಸಿರಾಡಬೇಕೆ? ಈ ಭೂಮಿಯಲ್ಲಿ ಬಿದ್ದ ಕ್ಷಣದಿಂದ ಅರಿವಿದ್ದೂ, ಇಲ್ಲದೆಯೂ ಸತತವಾಗಿ ಮಾಡುತ್ತಿರುವುದು ಅದೊಂದನ್ನೇ ಅಲ್ಲವೇ. ಅಂದರೆ ನನ್ನ ಉಸಿರು ಈಗ ಆಗಾಗ ನಿಂತುಹೋಗುತ್ತಿದೆಯೇ! ಅದ್ಯಾವ ಮಾಯದಲ್ಲಿ ತೂರಿಕೊಂಡು ಬಂದಿದ್ದನೋ ಯಮಕಿಂಕರ. ಹಾಸಿಗೆಯ ಬದಿಯಲ್ಲಿ ನಿಂತು ನಕ್ಕ. ಅಷ್ಟರಲ್ಲಿ ದಾದಿ ಮತ್ತೊಮ್ಮೆ "ಇನ್ನೂ ಜೋರಾಗಿ ಉಸಿರು ತೊಗೊಳ್ಳಿ" ಎನ್ನುತ್ತಾ ಮಾನಿಟರನ್ನು ನಿರೀಕ್ಷಿಸುತ್ತಾ ನಿಂತೇಬಿಟ್ಟಳು. ಸ್ವಲ್ಪ ಹೊತ್ತು ಕಾದವನು ಉಪಾಯವಿಲ್ಲದೆ ಬಂದಂತೆಯೇ ಮಾಯವಾದ.

ಪಕ್ಕದಲ್ಲಿ ತೋಳಿಗೆ ಬಿಗಿದಿದ್ದ ರಕ್ತದೊತ್ತಡದ ಮಾನಿಟರ್ ಕಾಲು ಗಂಟೆಗೊಮ್ಮೆ ತಂತಾನೇ ಬಿಗಿದುಕೊಳ್ಳುತ್ತಿತ್ತು, ಬಿಪಿಯನ್ನು ದಾಖಲಿಸಿ ಸಡಿಲಾಗುತ್ತಿತ್ತು. ಇದ್ದಕ್ಕಿದ್ದ ಹಾಗೆ ಮೊಮ್ಮಗನ ನೆನಪು ಬಂತು. ಅವನು ಪಕ್ಕದಲ್ಲಿ ಮಲಗಿದರೂ ಹೀಗೇ ಎಚ್ಚರವಾಯಿತೆಂದರೆ ತೋಳಮೇಲೆ ಮಲಗೋದು. ಇದೂ ಒಂಥರಾ ಅವನ ಹಾಗೇ ಎನ್ನಿಸಿ ನನ್ನ ಹೋಲಿಕೆಗೆ ನನಗೇ ನಗು ಬಂದು ಆ ಯಂತ್ರದ ಮೇಲೆ ಮಮತೆಯುಕ್ಕಿತು. ಮೇಲಿನ ಬಾಟಲಿಯಿಂದ ಡ್ರಿಪ್ ಒಳಸೇರುತ್ತಿದೆ; ಕೆಳಗಿನ ಚೀಲಕ್ಕೆ ಮೂತ್ರ ಹರಿಯುತ್ತಿದೆ; ಆಮ್ಲಜನಕ ಮೂಗಿನ ಮೂಲಕ ಒಳಸೇರುತ್ತಿದೆ; ದೇಹದ ಆಮ್ಲಜನಕದ ಪ್ರಮಾಣ ಹಿಂದುಗಡೆಯಿರುವ ತೆರೆಯಲ್ಲಿ ತೋರಿಸುತ್ತಿದೆ. ಇನ್ನೊಂದು ತೆರೆಯಲ್ಲಿ ಬಿ.ಪಿ. ದಾಖಲಾಗುತ್ತಿದೆ. ನನ್ನ ತಲೆಯ ಹಿಂದೆ ಇನ್ನೇನೇನು ಇದೆಯೋ ತಿಳಿಯದು... ಎಲ್ಲೋ ಸಣ್ಣಗೆ ಮಂಪರು... ಮಧ್ಯರಾತ್ರಿ... ಇದ್ದಕ್ಕಿದ್ದ ಹಾಗೇ ಎಚ್ಚರವಾಯಿತು ಎದುರಿಗೆ ನನ್ನ ಡಾಕ್ಟರ್ ನಿಂತಿದ್ದರು. ಅದುವರೆಗೆ ಬರೆದಿಟ್ಟಿದ್ದ ಎಲ್ಲಾ ವರದಿಗಳನ್ನೂ ಪರಿಶೀಲಿಸುತ್ತಿದ್ದರು. ನಾನು ಕಣ್ಣು ಬಿಟ್ಟಿದ್ದಕ್ಕೆ "ಹೇಗಿದೀಯ?" ಕೇಳಿದರು "ಚೆನ್ನಾಗಿದೀನಿ" ಎಂದೆ. ಬರಿದೆ ನಕ್ಕರು. 'ನಡುರಾತ್ರೀಲಿ ಮನೆಯಿಂದ ಇವರ್‍ಯಾಕೆ ಬಂದ್ರು? ನಂಗೆ ಅಂಥದೇನಾಗಿದೆ?'

ನನ್ನ ಯೋಚನೆ. ದಾದಿಯನ್ನು ಕರೆದು ಮಾನಿಟರ್ ತೋರಿಸುತ್ತಾ ತಗ್ಗಿದ ದನಿಯಲ್ಲಿ ಏನೋ ನಿರ್ದೇಶನಗಳನ್ನು ಕೊಟ್ಟು, ನನ್ನ ಕಡೆ ತಿರುಗಿ "ಏನೂ ಹೆದರ್ಬೇಡ, ಎಲ್ಲಾ ಸರಿಯಾಗತ್ತೆ" ಅಂದರು. "ಹೆದರಿಕೇನಾ? ಯಾತಕ್ಕೆ?" ಅಂದುಕೊಂಡೆ.

ಸ್ವಲ್ಪ ಹೊತ್ತಿನಲ್ಲೇ ಮೂಲೆಯ ಬೆಡ್ಡಿನಿಂದ "ನಮ್ಮಮ್ಮ ತಾಯಿ... ಚಾಮುಂಡೇಸ್ವರಿ... ಈ ನೋವು ನೀಗಿ... ಕಾಪಾಡು ತಾಯಿ" ಎಂದು ಆರ್ತಸ್ವರ ಕೇಳಿತು. ಇದೇನಿದು ಹಾಡುತ್ತಿರುವುದೇ! ದೇವರ ಧ್ಯಾನವೇ! ಗಲಿಬಿಲಿಯಾಯಿತು. ಮತ್ತೆ ಮತ್ತೆ ಅದೇ ಆರ್ತನಾದ... ಈಗ ಸ್ವಲ್ಪ ಅಳುವೂ ಜೊತೆಗೆ ಸೇರಿತ್ತು. 'ಈ ಸರಿರಾತ್ರಿಯಲ್ಲಿ ಚಾಮುಂಡೇಶ್ವರಿ ಇಡೀ ದಿನವೆಲ್ಲಾ ಪೂಜೆ, ಮಂಗಳಾರತಿ ಮಾಡಿಸಿಕೊಂಡು ದಣಿದು, ಭಕ್ತರು ತಂದಿದ್ದ ಕಾಯಿ ಹಣ್ಣು ತಿಂದು ಸಾಕಾಗಿ, ಮಲಗಿದರೆ ಸಾಕಪ್ಪಾ ಎಂದು ಮೈಸೂರಿನ ಬೆಟ್ಟದಮೇಲೆ ಮಲಗಿರುತ್ತಾಳೆ. ಇವನ ಮೊರೆ ಅವಳಿಗೆ ಕೇಳೀತೇ?' ಎಂದು ಯೋಚನೆಯಾಯಿತು. ಇಲ್ಲ... ಅವನು ಕರೆಯುತ್ತಿದ್ದದ್ದು ಅವಳನ್ನಲ್ಲ ದಾದಿಯನ್ನು ಎಂದು ಅರ್ಥವಾಗಿದ್ದು ದಾದಿ ಅವನ ಬಳಿಸಾರಿ "ನೋಡಿ, ಡಾಕ್ಟರ್ ಹೇಳಿದ್ದ, ನೋವು ಕಮ್ಮಿ ಮಾಡೋ ಇಂಜೆಕ್ಷನ್, ನಿದ್ರೆ ಬರಕ್ಕೆ ಮಾತ್ರೆ ಎಲ್ಲಾ ಕೊಟ್ಟಿದೀನಿ. ನೀವೀಗ ಸ್ವಲ್ಪ ಹೊತ್ತು ಕಣ್ಮುಚ್ಚಿಕೊಂಡು ನಿದ್ದೆ ಮಾಡಕ್ಕೆ ಪ್ರಯತ್ನ ಮಾಡಿ" ಎಂದಾಗಲೇ. "ಅಮ್ಮಾ, ನೀನೇ ಚಾಮುಂಡೇಶ್ವರಿ ತಾಯಿ. ಭಾಳಾ ನೋವು ಕಣ್ತಾಯಿ. ಏನಾದ್ರೂ ಮಾಡವ್ವಾ. ಡಾಕ್ಟ್ರಿಗೆ ಫೋನ್‌ಮಾಡು" ಎಂದು ಬೇಡಿದ. ಇಷ್ಟೊತ್ತಲ್ಲಿ ಡಾಕ್ಟ್ರಿಗೆ ಸುಮ್ಸುಮ್ನೆ ಫೋನ್ ಮಾಡಕ್ಕಾಗಲ್ಲ, ಡ್ಯೂಟಿ ಡಾಕ್ಟ್ರು ನೋಡ್ತಿದಾರಲ್ಲ; ನೀವು ಮಲ್ಗಿ" ಎನ್ನುತ್ತಾ ಹೊರಟಾಗ. "ಅಮ್ಮಾ ಚಾಮುಂಡೇಸ್ವರಿ, ಬಾತಾಯಿ...." ಎಂದವನು ಎಷ್ಟೋ ಹೊತ್ತು ರಾಗರಾಗವಾಗಿ ಕರೆಯುತ್ತಲೇ ಇದ್ದ. ಅತ್ತು ಅತ್ತು ಸಾಕಾಗಿ ಮಲಗುವ ಮಗುವಿನಂತೆ ಅಂತೂ ಎಷ್ಟೋ ಹೊತ್ತಿನ ಮೇಲೆ ಮಲಗಿದನೇನೋ, ಸದ್ದಡಗಿತು... ನನ್ನ ದಾದಿ ಆಗೀಗ ಬಂದು 'ನಾನು ಪ್ರಜ್ಞೆಯಲ್ಲಿದ್ದೇನಾ' ಎಂದು ನೋಡಿ, ಹಿಂದಿರುವ ಮಾನಿಟರ್‌ಗಳ ವಿವರಗಳನ್ನು, ಕೊಟ್ಟ ಔಷಧಿಗಳ ವಿವರಗಳನ್ನೂ ಕೇಸ್‌ಶೀಟ್‌ನಲ್ಲಿ ಬರೆದು ಹೋಗುತ್ತಿದ್ದಳು.

ಹಗಲೋ ರಾತ್ರಿಯೋ ಎಂದು ತಿಳಿಯಲು ಸಾಧ್ಯವಿಲ್ಲದ ಹಾಗೆ ಎಲ್ಲೂ ಕಿಟಕಿಗಳಿಲ್ಲದ ಹವಾನಿಯಂತ್ರಿತ ಹಜಾರವದು. ಪ್ರತಿಯೊಂದು ಬೆಡ್ಡಿನ ಮೇಲಿರುವ ಬೆಳಕಿಂಡಿಗೂ ಕಪ್ಪುಗಾಜನ್ನು ಹೊದಿಸಿರುವುದರಿಂದ ಹೊರಗಿನ ಆಕಾಶದ ಬಣ್ಣ ಕಾಣುವುದೇ ಇಲ್ಲ. ಆಗೊಂದು ಈಗೊಂದು ಹಕ್ಕಿ

ಹಾರುವುದನ್ನು ಕಾಣುವುದೇ ಹೊರಗಿನ ಲೋಕ. ಅದೂ ಕಾಣದೇ ಪೂರಾ ಕಪ್ಪಾಯಿತೆಂದರೆ ಅಲ್ಲಿಗೆ ರಾತ್ರಿ. ಹೊರಲೋಕದ ಸಂಪರ್ಕ ಕಲ್ಪಿಸುವ ಕಿಟಕಿಯೆಂಬ ಕಿಂಡಿಯಿಲ್ಲದೆ ಕಾಲ ಕಳೆಯುವುದು ಅದೆಷ್ಟು ಕಷ್ಟ! ಎದುರು ಹಾಸಿಗೆಯ ಮೇಲೆ ಹಾಕಿರುವ ಅರ್ಥವಾಗದ ನವ್ಯಕಲೆಯ ಚಿತ್ತಾರವನ್ನು ಬಿಟ್ಟರೆ ನೋಡಲು ಏನೂ ಇಲ್ಲ. ಹದಿನಾರು ಕಕ್ಷೆಗಳಲ್ಲಿರುವ ಹಾಸಿಗೆಗಳು, ಮಾನಿಟರ್‌ಗಳು, ನಳಿಕೆಗಳು. ಕೇಳಲಾದರೂ ಏನಿದೆ – ನಿರಂತರವಾಗಿ ಸದ್ದು ಮಾಡುವ ಮಾನಿಟರ್‌ಗಳ ಸಾವಿನ ಎಚ್ಚರಿಕೆಯ ಗಂಟೆ, ದಾದಿಯರ ಬೂಟಿನ ಟಕ್‌ಟಕ್ ಎನ್ನುವ ಸದ್ದು, ರೋಗಿಗಳ ಮುಲುಗು–ನರಳಾಟ, ಆಗೀಗ ವಿಸಿಟ್‌ಗೆಂದು ಬರುವ ಡಾಕ್ಟರುಗಳ ಧ್ವನಿ. ಆಯಾಗಳನ್ನೋ, ವಾರ್ಡ್‌ಬಾಯ್‌ಗಳನ್ನೋ ಕರೆಯುವ ಒಂದಿಷ್ಟು ಆವಾಜ್‌ಗಳು. ನರಳುತ್ತಿರುವವರಿಗೆ ಇದೇ ಲೋಕ – ಹಗಲೇನು, ಇರುಳೇನು? ಹೊರಗೆ ಕಾಯುತ್ತಿರುವವರಿಗಲ್ಲವೇ ಎಷ್ಟು ದಿನ ಕಳೆಯಿತೆನ್ನುವ ಲೆಕ್ಕ!

19. ಜೆ ಎಸ್ ಜಗನ್ನಾಥ್



ಕಳೆ ಕಳೆದಾಗ

ಸೊಂಪಾಗಿಬೆಳೆದ ಪೈರಿನ ನಡುವೆ
ಬೇಡದ ಗಿಡವೊಂದು ಬೆಳೆದಾಗ ಕೀಳುವಂತೆ
ಕನ್ನಡಿಯ ಎದುರು ನಿಂತು ಕಷ್ಟಪಟ್ಟು
ಬೇರ್ಪಡಿಸಿ ಅಪರೂಪಕ್ಕೆ ಕಾಣುವ
ಬೆಳ್ಳಿ ಕೂದಲು ಕಿತ್ತಾಗ
ಎವರೆಸ್ಟ್ ಏರಿದ ಸಂತಸ
ಯವ್ವನದಲ್ಲಿ

ನಲವತ್ತಾದಾಗ ಸೊಂಪು ಬೆಳೆಯ ನಡುವೆ
ವೃತಾಕಾರದ ಪುಟಾಣಿ ಖಾಲಿ ಜಾಗ
ನಂತರ ದಿನ ಬೆಳೆದಂತೆ
ಸುತ್ತಲ ಜಾಗ ಕಳೆ ಕಳೆದಂತೆ

ಹಜಾಮ ನಿಧಾನವಾಗಿ ಒಂದೊಂದೇ
ಕೂದಲನ್ನು ಹುಡುಕಿ ಕತ್ತರಿಸುವಾಗ
ಕಳೆ ಕಿತ್ತು, ಬೀಜ ಬಿತ್ತಲು ಬಿಟ್ಟ
ಬಯಲಿನಂತೆ

ಮುಖ ತಲೆಯ ಹಿಂದಿನವರೆಗೆ
ತೊಳೆಯುವಂತಾದಾಗ ಸಾಬೂನು ಹೆಚ್ಚು
ಶಾಂಪೂ ಕಡಿಮೆ ಉಪಯೋಗ
ಒಂದು ಹೆಚ್ಚಾದಾಗ
ಮತ್ತೊಂದು ಕಡಮೆಯಾಗುವುದೇ ಜೀವನ

20. ರಾಜೇಂದ್ರ ಪ್ರಸಾದ್.



ಗಡ್ಡ ಪುರಾಣಂ

ಇಂದು ಎಲ್ಲಿ ನೋಡಲಲ್ಲಿ ಗಡ್ಡಗಳದೆ ಸಂತೆ,
ನೀಳಗಡ್ಡ ಬಿಳಿಯಗಡ್ಡ ಉಪ್ಪುಮೆಣಸಿನಂತ ಗಡ್ಡ
ಮೂಗು ಬಾಯಿ ಕಾಣದಂತೆ ಹುಲುಸಾಗಿ ಬೆಳೆದ ಗಡ್ಡ
ಮೂಗು ಬಾಯಿ ಮಾತ್ರ ಕಾಣುವಂತೆ ಕೆರೆದುಕೊಂಡ ಗಡ್ಡ
ತರ ತರದಿ ಟ್ರಿಮ್ ಮಾಡಿದಂತ ಕುರುಚು ಗಡ್ಡ
ಅರೆ ನೆರೆತ ಕೂದಲಿಗೆ ಬಣ್ಣ ಬಳಿದುಕೊಂಡ ಗಡ್ಡ
ಅದೆಂತು ಸೆಳೆಯಿತಯ್ಯ ಈ ಗಡ್ಡದೊಲವು ನಮ್ಮ ಪುರುಷ ಸಿಂಹರ

ಇಂದು ನೆನ್ನೆ ಬಂದುದಲ್ಲ ಈ ಗಡ್ಡದಾ ಕೃಷಿ
ಸಪ್ತ ಋಷಿಯ ಕಾಲದಿಂದ ಬೆಳೆದು ಬಂದ ಸಂಸ್ಕೃತಿ
ತಪವ ಮಾಡೋ ಭರದಿ ಋಷಿಗಳೆಲ್ಲ
ಮರೆತಿರಲೂ ಬಹುದು ಹುಲುಸಾಗಿ ಬೆಳದ ಗಡ್ಡವ
ಇಂದ್ರ ಚಂದ್ರ ರಾಮ ಕೃಷ್ಣ ದೇವತೆಗಳ ಮುಖದಿ ಕಾಣದಿರುವ ಗಡ್ಡ
ಹನುಮ ನರಸಿಂಹರಾ ಮುಖದಲೇಕೆ ಮೆರೆಯಿತೆಂಬುದನು ಹರಿಯೆ ಬಲ್ಲನು
ವಿದುರ ಭೀಷ್ಮ ದಶರಥ ಜನಕನಂತ
ರಾಜ ಋಷಿಗಳೆಲ್ಲ ಗಡ್ಡ ಬೆಳಸಿ ಮೆರೆದರು

ಮಹಾ ಸಾಧಕರಿಗೆಲ್ಲ ಗಡ್ಡ ಇದ್ದರೇನೇ ಗೌರವ ಎಂಬ ಕಲ್ಪನೆಯೇ ಈ ಗಡ್ಡ ಬೆಳೆಸೊ ಸಂಸ್ಕೃತಿ ಬೆಳೆಸಿದಂತಿದೆ ಇತಿಹಾಸದಲ್ಲಿ ಕೂಡ ರಾಜ ಮಂತ್ರಿ ದಳಪತಿ ಗುರು ಕವಿಗಳೆಲ್ಲ ಗಡ್ಡ ಪ್ರಿಯರಾಗೆ ಕಾಣಸಿಗುವರು ಆಂಗ್ಲ ಮಹಮಧೀಯರೆಲ್ಲ ಭಾರತಕ್ಕೆ ಲಗ್ಗೆ ಇಟ್ಟಮೇಲೆ ತರ ತರದ ಗಡ್ಡ ಭಾರತಕ್ಕೆ ಧುಮುಕಿತು.
ಮಹಮಧೀಯ ಸಿಕ್ಕ ಮತದಲಂತು ಗಡ್ಡ ಧರ್ಮ ಪಾಲಿಸುವ

ಚಿನ್ಹೆಯಾಯಿತು
ಅಬ್ರಹಾಂ ಲಿಂಕನ್ ರ ಗಡ್ಡವಂತು ಜಗದಿ ಬಹಳ ಸದ್ದು ಮಾಡಿತು
ಐನ್‌ಸ್ಟೈನ್ ಎಡಿಸನ್ ನಂತ ವಿಜ್ಞಾನಿಗಳ ಗಡ್ಡ ಸಂಶೋಧಕರ ಗುರುತು
ಎನ್ನುವಂತಾಯಿತು
ಅಮಿತಾಬ್ ಬಚ್ಚನ್ ರವರ ಬೆಳಿಯ ಗಡ್ಡವಂತು ಇಳಿವಯಸ್ಸಿನವರಿಗೆಲ್ಲ
ಯೌವನದ ಹುರುಪು ತಂದಿತು
ಹಲವು ಕವಿ ಸಾಹಿತಿಗಳಿಗೆ ಜ್ಞಾನ ಹೆಚ್ಚಿ ಅದರ ಜಳಕೆ ಕೇಶರಾಶಿ ತಲೆಯಿಂದ
ಮುಖಕೆ ಜಾರಿ ಜೈ ಎಂದಿತವರ ಗಡ್ಡ ಪ್ರೀತಿಗೆ
ಕ್ರಿಕೆಟಿಗರು ಸಿನಿಮ ಹೀರೊ ಸಲೆಬ್ರೆಟಿಗಳ ವಿಧವಿಧದ ಗಡ್ಡ ಕಂಡು ನಮ್ಮ
ಯುವಕರೆಲ್ಲ ಶರಣು ಎಂದರೀಗಡ್ಡ ಮೋಹಕೆ
ಗಡ್ಡ ಪ್ರೇಮಿ ಯುವತಿಯರು ಮದುವೆಗಾಗಿ
ಗಡ್ಡ ಮುಖಗಳನೇ ಅರಸುತಿರುವರು
ಪುರುಷ ಸಿಂಹರೀ ಗಡ್ಡದಲ್ಲಿ ಅಂತ ಇಂದ್ರ ಜಾಲವೇನಿಹುದೋ
ನಾರಿಮಣಿಯರಷ್ಟೇ ಬಲ್ಲರು
ಗಡ್ಡ ಬೆಳಸದಿರುವ ಗಂಡಗಳ ಯಾವ ಹೆಣ್ಣೂ ವರಿಸಳು

ಧರ್ಮ ಗುರುವೆಂದು ತೋರಿಕೊಳಲು ಬೇಕು ಗಡ್ಡ
ಸ್ವಾಮಿ ಸಾಧು ಸಂತನೆಂದು ಹೇಳಿಕೊಳಲು ಬೇಕು ಗಡ್ಡ
ಮುಖದ ಕಲೆಯ ಮುಚ್ಚುವಂತ ಗಡ್ಡ
ಹಲ್ಲು ಉದುರಿ ಗುಳಿಬಿದ್ದ ಕೆನ್ನೆ ಕಾಣದಾಗಿಸುವುವ ಗಡ್ಡ
ಚಳಿಗಾಲದಲ್ಲಿ ಬೆಚ್ಚಗಿರಲು ಬೇಕೆ ಬೇಕು ಈ ಗಡ್ಡ
ಬ್ಲೇಡು ಕ್ರೀಮು ಬಳಕೆ ಖರ್ಚು ಉಳಿಸುವಂತ ಗಡ್ಡ
ಹೀಗೆ ಗಡ್ಡ ಕಲ್ಪವೃಕ್ಷವಾಗಿ ನಮ್ಮ ಪರುಷರನ್ನು ಹರಸುತಿರುವುದು

ಜಗದಲೆಲ್ಲ ಪಸರಿಸಿರುವ ಈ ಗಡ್ಡ ಪ್ರೇಮ ಕಂಡು
ಉದ್ಯಮಿಗಳಂತೂ ಗಡ್ಡ ಬೆಳೆಸೊ ಕ್ರೀಮು ಎಣ್ಣೆ ಬಣ್ಣ ಅಸ್ತ್ರ ಶಸ್ತ್ರ ಸಲೂನ್
ಪಾರ್ಲರ್ ಮಾಡಿ ಹಣವ ದೋಚುತಿರುವರು
ಟಗರು ಬಂಡೆ ಸರ್ಕಾರ ಕೂಡ ಗಡ್ಡ ಬೆಳಸಿದವರಿಗೆಲ್ಲ
ಎಣ್ಣೆ ಬ್ಲೇಡು ಕತ್ತರಿ ಖರ್ಚಿಗಾಗಿ ಮಾಸ ಭತ್ಯ ಕೊಡುವ ಗಡ್ಡ ಭಾಗ್ಯವೆಂಬ
ಯೋಜನೆಯ ಜಾರಿ ಮಾಡೋ ಚಿಂತನೆಯ ಮಾಡುತಿರುವರು

ಇಂತ ವಿವುಧೋಪಯೋಗಿ ಗಡ್ಡ ಬೆಳಸಿ ಪುರುಷರೇ
ಗಡ್ಡ ಬೆಳಸಿರೆಂದು ಹೇಳಿ ಅಪ್ತ ಜನರಿಗೆ

ಬರುವ ದಿನಗಳಲ್ಲಿ

"ಗಡ್ಡಂ ಪುರುಷ ಲಕ್ಷಣಂ"
"ಗುಂಡಿಗೆ ಇಲ್ಲದಿದ್ದರೂ ಗಡ್ಡ ಇರಬೇಕು"
"ಉಂಡವಗೆ ಊಟವಿಕ್ಕಬೇಡ
ಗಡ್ಡ ಇರದವಗೆ ಮಗಳ ಕೊಡಬೇಡ "
"ಜುಟ್ಟಿಗೊಂದು ಕಾಲ ಗಡ್ಡಕೊಂದು ಕಾಲ"

ಇಂತ ನೂರು ಗಾದೆ ಕುಣಿಯಬಹುದು ಜನರ ನಾಲಿಗೆಯ ತುದಿಯಲಿ .
ಭವಿಷ್ಯದಲ್ಲಿ ಗಡ್ಡ ಕುರಿತು ಪದವಿ ಡಾಕ್ಟರೇಟ್ ಗಳು ಕೂಡ ಶುರುವಾಗಬಹುದು
ಎಂಬಲ್ಲಿಗೆ ಗಡ್ಡ ಪುರಾಣ ಸಂಪೂರ್ಣಂ

21. ರೇಣುಕಾ ದೇಸಾಯಿ



–:ಪುಸ್ತಕ ಬಿಡುಗಡೆಯ ಸಮಾರಂಭ :–

'ಮಹಾನಾರಾಯಣ ಉಪನಿಷತ್'' ಒಂದು ವಿಶೇಷ ಪುಸ್ತಕ, ಮೇ ೯ ಮಂಗಳವಾರ ಬಸವನಗುಡಿಯ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಒಳಾಂಗಣದಲ್ಲಿ ಇರುವ ಭ್ರಮರಾಂಭಾ ಸಭಾ ಮಂಟಪದಲ್ಲಿ ಬಹು ವಿಶಿಷ್ಟವಾಗಿ ಲೋಕಾರ್ಪಣೆಯಾಯಿತು. ಇದರ ಕರ್ತೃಗಳು ಶ್ರೀ ಬಿ. ಎಸ್. ಚಂದ್ರಶೇಖರ್ ಮತ್ತು ಶ್ರೀ ಬಿ. ಆರ್. ಪ್ರಭಾಕರ್, ಈ ಇಬ್ಬರು ವಿದ್ವಾಂಸರಲ್ಲಿ ಶ್ರೀ ಬಿ. ಎಸ್. ಚಂದ್ರಶೇಖರ್ ಅವರು ನಮ್ಮ ಸ ಸ ಕ ಸ ವೇದಿಕೆಯ ಸದಸ್ಯರು ಎನ್ನುವದು ವೇದಿಕೆಗೆ ಮತ್ತು ಎಲ್ಲಾ ಸದಸ್ಯರಿಗೆ ಹೆಮ್ಮೆಯನ್ನುಂಟು ಮಾಡಿದೆ.



ನಾರಾಯಣ ಉಪನಿಷತ್ ಗ್ರಂಥ ಎಷ್ಟು ಪೂಜನಿಯವೋ ಅಷ್ಟೇ ಸಾಂಪ್ರದಾಯಿಕವಾಗಿ ಪುಸ್ತಕ ಬಿಡುಗಡೆಸಮಾರಂಭ ಆಯೋಜಿಸಲಾಗಿತ್ತು, ಸಭಾಂಗಣದ ಮುಂಭಾಗ ತೆಂಗಿನ ಗರಿಗಳಿಂದ ಚಪ್ಪರ ಹಾಕಿ ಕದಳಿಕುಡಿ ಮತ್ತು ಹೂವುಗಳಿಂದ ಅಲಂಕಾರ ಗೊಂಡಿದ್ದು, ಮಂಗಳ ಕಾರ್ಯದ ದ್ಯೋತಕವಾಗಿತ್ತು. ಚಿರಪರಿಚಿತರಾದ ಚಂದ್ರಶೇಖರ ದಂಪತಿಗಳಿಂದ ಆತ್ಮೀಯ ಸ್ವಾಗತ ಮತ್ತು ಕಾಫಿಯೊಂದಿಗೆ ಉಪಚಾರ.

ಸಭಾಂಗಣವು ಸಾಹಿತ್ಯಾಸಕ್ತರಿಂದ , ವೇದೋಪನಿಷತ್ತುಗಳ ಬಗೆಗೆ ತಿಳುವಳಿಕೆಯುಳ್ಳ, ವೇದೋಪನಿಷತ್ತುಗಳನ್ನು ತಿಳಿಯಬೇಕೆಂಬ ಹಂಬಲ ಇರುವ ಸಭಿಕರಿಂದ, ನಮ್ಮ ವೇದಿಕೆಯ ಅನೇಕ ಸದಸ್ಯರಿಂದ, ಸಾಹಿತ್ಯಕೂಟ, ಮಹಾನಾರಾಯಣ ಉಪನಿಷತ್ ಗ್ರೂಪ್–ರುದ್ರ ಪಾರಾಯಣ ವೇದಿಕೆಯ ಸದಸ್ಯರಿಂದ ತುಂಬಿತ್ತು.

ವಿಧಿವತ್ತಾಗಿ ವೇದಮಾತೆ ಗಾಯತ್ರಿದೇವಿ ಮತ್ತು ಪರಮಪೂಜ್ಯ

ವೇದವ್ಯಾಸರ ಪೂಜಾ ವಿಧಿ ಪೂರ್ಣಗೊಂಡು ಆಮಂತ್ರಣ ಪತ್ರಿಕೆಯಲ್ಲಿ ಅಚ್ಚಾದ ಸಮಯಕ್ಕೆ ಸರಿಯಾಗಿ ಮಹಾನಾರಾಯಣ ಉಪನಿಷತ್ ಸಾಮೂಹಿಕ ಪಠಣ



ಪ್ರಾರಂಭವಾಯಿತು, ವೇದಿಕೆಯ ಮೇಲೆ ದೇವಿ ವೇದಮಾತೆ ಗಾಯತ್ರಿ ರಾರಾಜಿಸುತ್ತಿದ್ದಳು, ಅವಳ ಪದತಲದಲ್ಲಿ ಕುಳಿತ ಸುಮಾರು ಇಪ್ಪತ್ತು ಜನ ಋತ್ವಿಕರು ಸಮನಾದ ಸಂಖ್ಯೆಯಲ್ಲಿ ಎಡಬಲದಲ್ಲಿ ಕುಳಿತು, ಉದಾತ್ತ,ಅನುದಾತ್ತ ಸ್ವರಿತಾದಿ ಸ್ವರವಿನ್ಯಾಸದಲ್ಲಿ ಎಡದ ಗುಂಪು ಎರಡು ಸಾಲು ಪಠಿಸಿದ ನಂತರ ಅದೇ ರಾಗವನ್ನು ಎತ್ತಿ, ಅದಕ್ಕೆ ಸಂವಾದೀಯೋ ಎನ್ನುವಂತೆ ಬಲದ ಗುಂಪು ಉಳಿದೆರಡು ಸಾಲು ಪಠಿಸುತ್ತಿದ್ದು, ಸಭಾಂಗಣದಲ್ಲಿದ್ದ ಇತರರು ಅವರನ್ನು ಅನುಕರಿಸಿ ಪಠಿಸುತ್ತಿದ್ದರು,ವೇದ ಘೋಷದ ನಾದನಿನಾದ ಪೂರ್ತಿ ಆವರಣ ತುಂಬಿ ಆಚೆಗೂ ಧ್ವನಿಸುತ್ತಿತ್ತು. ಒಂದೂವರೆ ಗಂಟೆ ಸತತ ವೇದ ಘೋಷ ನಡೆಯಿತು. ಮಹಾನಾರಾಯಣ ಉಪನಿಷತ್ ಪಠಣ ಮುಗಿಯುವಷ್ಟರಲ್ಲಿ ಅಲ್ಲೊಂದು ದೈವೀಕಭಾವ ತಾನೇ ತಾನಾಗಿ ಪಸರಿಸಿತ್ತು, ನಿಗದಿತ ಸಮಯಕ್ಕೆ ಸರಿಯಾಗಿ ಪಠಣ ಪೂರ್ಣಗೊಂಡಿತು, ಎಲ್ಲರಿಗೂ ರುಚಿಯಾದ, ಪರಿಮಳಯುಕ್ತ ಪುದೀನಾ ಪಾನಕ ವಿತರಣೆ ಆಯಿತು, ಅದರಲ್ಲೂ ನಾರಾಯಣ ಸ್ಮರಣೆಯ ಶಕ್ತಿ ತುಂಬಿತ್ತು ಎನ್ನುವ ಭಾವ ನನ್ನಲ್ಲಿ ಮೂಡಿತ್ತು.

ನಂತರ ವೇದ ಮಾತೆಯ ಬಲಬದಿಯಲ್ಲಿ ಪುಟ್ಟದೊಂದು ವೇದಿಕೆ ನಿರ್ಮಾಣವಾಯಿತು,ಕೃತಿ ಲೋಕಾರ್ಪಣೆಯ ಕಲಾಪವು ಶ್ರೀಮತಿ ದಿವ್ಯಾ ಪ್ರಮೋದ್ ಅವರ ಸುಶ್ರಾವ್ಯ ದೇವರನಾಮದೊಂದಿಗೆ ಆರಂಭವಾಯಿತು. ಈ ಗ್ರಂಥದ ಕರ್ತೃಗಳಲ್ಲಿ ಒಬ್ಬರಾದ ಶ್ರೀ ಪಿ.ಆರ್.ಪ್ರಭಾಕರ್ ಸ್ವಾಗತ ಮತ್ತು ಪ್ರಸ್ತಾವನೆ ಮಾಡಿದರು. ವೇದೋಉಪನಿಷತ್ತಗಳು ಸರ್ವಕಾಲಿಕಸತ್ಯ. ದಶೋಪನಿಷತ್ತುಗಳಲ್ಲಿ ನಾಲ್ಕನೆಯದು ನಾರಾಯಣ ಉಪನಿಷತ್, ಈ ನಾಲ್ಕು ಉಪನಿಷತ್ ಗಳಿಗೆ ಮಾತ್ರ ಮನೋಜ್ಞವಾದ ಸ್ವರ ವಿನ್ಯಾಸ, ಸ್ವರವಿಸ್ತಾರವಿದೆ ಎಂದು ವಿವರಿಸುವದರೊಂದಿಗೆ,ತಮಗಿಬ್ಬರಿಗೂ ಈ ಪುಸ್ತಕ ರಚನೆಯ ಪ್ರೇರಣೆ ಮತ್ತು ಒತ್ತಾಸೆ,ತಮ್ಮ ಸಾಹಿತ್ಯಕೂಟದರೂವಾರಿ ಹಾಗೂ ಪ್ರಸಿದ್ಧ ಹಿರಿಯ ಲೇಖಕರಾದ ಶ್ರೀ ಶಶಿಧರ್ ವಿಶ್ವಾಮಿತ್ರ ಎಂದು ಸ್ಮರಿಸಿದರು. ಈ ಪುಸ್ತಕ ಸಂಸ್ಕೃತ., ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಗೊಂಡಿರುವುದರಿಂದ ಅದು ಈಗಿನ ಮತ್ತು ಮುಂದಿನ ಪೀಳಿಗೆಯ ಓದಿಗೆ ಸಹಕಾರಿಯಾಗುತ್ತದೆ,ವೇದೋಪನಿಷತ್ತು ಬಗೆಗಿನ ಜ್ಞಾನವನ್ನು ನೀಡುತ್ತದೆ ಮತ್ತು ಅದರಲ್ಲಿರುವ ವಿಜ್ಞಾನದ ಅರಿವನ್ನು ನೀಡುತ್ತದೆ ಎಂದು

ಪುಸ್ತಕದ ಉಪಯುಕ್ತತೆಯನ್ನು ತಿಳಿಸಿದರು. ನಿಜ, ನಮ್ಮದು ವೈಜ್ಞಾನಿಕ ಮೂಸೆಯಲ್ಲಿ ಮೂಡಿರುವ ಅಧ್ಯಾತ್ಮ, ಪೂಜಾವಿಧಿ ಮತ್ತು ಜೀವನಕ್ರಮ. ಈ ಪುಸ್ತಕ ರೂಪಗೊಳಿಸುವದರಲ್ಲಿ ತಾವಿಬ್ಬರೂ ಸತತವಾಗಿ ಎರಡು ವರ್ಷ ಪಟ್ಟ ಶ್ರಮ, ಮುದ್ರಣಗೊಳ್ಳುವ ಸಮಯದಲ್ಲಿ ಪಟ್ಟ ಭವಣೆ, ಸಂಸ್ಕೃತ ಭಾಷೆಯಲ್ಲಿ ಬರುವ ಚಿಹ್ನೆಗಳನ್ನು ಹೇಗೆ ಒಂದೊಂದಾಗಿ ತಾವು ಪರೀಕ್ಷಿಸಿ ಮುದ್ರಣಕಾರರಿಗೆ ಅದರ ಬಗೆಗಿನ ತಿಳುವಳಿಕೆ ಹೇಳಿ ಮುದ್ರಿಸ ಬೇಕಾಗಿ ಬಂತು ಎನ್ನುವದನ್ನು ತುಂಬ ಮಾರ್ಮಿಕವಾಗಿ ಸಭೆಗೆ ತಿಳಿಸಿಕೊಟ್ಟರು. ಹಾಸ್ಯಕ್ಕೋಸ್ಕರ "ಮೈಲಿಗೆಯವರು ಮಾಡಿದ ಮಡಿ ಕೆಲಸವಿದು" ಎಂದು ಬಣ್ಣಿಸಿದರು.

ಸಾಹಿತ್ಯ ಕೂಟದ ಸ್ಥಾಪಕರಾದ ಪ್ರಸಿದ್ಧ ಲೇಖಕ ಶ್ರೀ ಶಶಿಧರ ವಿಶ್ವಾಮಿತ್ರ ಅವರು ಕೃತಿಯನ್ನು ಲೋಕಾರ್ಪಣೆ ಮಾಡುತ್ತಾ ಇಂಥದೊಂದು ಶ್ರೇಷ್ಟ ಕೃತಿ ಹೊರಬಂದಿರುವುದಕ್ಕೆ ಅತೀವ ಸಂತಸ ವ್ಯಕ್ತಪಡಿಸಿದರು.
ಕೃತಿಯನ್ನು ಸಭೆಗೆ ಪರಿಚಯಿಸಿದ ಪ್ರಸಿದ್ಧ ಲೇಕಖ, ವಿದ್ವತ್ತುಳ್ಳವ್ಯಕ್ತಿ ಹಾಗೂ ಬ್ಯಾಂಕ್ ನ ನಿವೃತ್ತ ಉದ್ಯೋಗಿಯಾದ ಶ್ರೀ ಜನಾರ್ದನ ತುಂಗ ಅವರು ಕೃತಿಯ ಮಹತ್ವವನ್ನು ಸೋದಾಹರಣವಾಗಿ ಹಾಗೂ ಪ್ರಬುದ್ಧವಾಗಿ, ಮನಮುಟ್ಟುವಂತೆ ತಿಳಿಸಿಕೊಡುವದರೊಂದಿಗೆ, ಇಂದಿನ ಪೀಳಿಗೆಗೆ ಈ ಪುಸ್ತಕ ವೇದಾಭ್ಯಾಸದ ಕಡೆಗೆ ಒಲವು ಮೂಡಿಸುತ್ತದೆ ನಂತರ ಅದರ ಶಕ್ತಿಯುತವಾದ ಸಾರ ತಿಳಿಯಲು ಸಂಸ್ಕೃತ ಅಭ್ಯಸಿಸುವೆಡೆಗೆ ಅವರನ್ನು ತರುತ್ತದೆ ಎನ್ನುವ ಆಶೆಯ ವ್ಯಕ್ತಪಡಿಸಿದರು.

ತದನಂತರ ಕೃತಿಯನ್ನು ಲೋಕಾರ್ಪಣೆ ಮಾಡಿದ ಶ್ರೀ ಶಶಿಧರ್ ವಿಶ್ವಾಮಿತ್ರ ಅವರಿಗೆ ಕೃತಿರಚನೆಕಾರರಾದ ಶ್ರೀ ಬಿ. ಎಸ್. ಚಂದ್ರಶೇಖರ್ ಮತ್ತು ಶ್ರೀ ಬಿ. ಆರ್. ಪ್ರಭಾಕರ್ ಅವರಿಂದ ಸನ್ಮಾನ ಏರ್ಪಟ್ಟಿತು, ಲೇಖಕದ್ವಯರಿಗೆ ಮತ್ತು ಈ ಕೃತಿಯನ್ನು ಸಭೆಗೆ ಪರಿಚಯಿಸಿದ ಶ್ರೀ ಜನಾರ್ಧನ್ ತುಂಗಾ ಅವರಿಗೆ ಸಭೆಯಲ್ಲಿ ಉಪಸ್ಥಿತರಿದ್ದ ಸಾಹಿತ್ಯಾಸಕ್ತರಿಂದ, ಸಮಾರಂಭದ ಆಯೋಜಕರಿಂದ ಸನ್ಮಾನಗಳು ಏರ್ಪಟ್ಟವು.

ಈ ಪುಸ್ತಕದ ಮುಖಪುಟವನ್ನು ಬರಹಗಾರರು, ಹಾಗೂ ಕಲಾವಿದರಾದ ಶ್ರೀ ಕೆ ಆರ್ ಎಸ್ ಮೂರ್ತಿಯವರು ತುಂಬಾ ಅರ್ಥಪೂರ್ಣವಾಗಿ ಅಂದವಾಗಿ ರಚಿಸಿದ್ದಾರೆ ಮತ್ತು ಇವರೂ ಸ ಸ ಕ ಸ ವೇದಿಕೆಯ ಸದಸ್ಯರು ಎನ್ನುವುದು ತುಂಬಾ ಸಂತೋಷದ, ಹೆಮ್ಮೆಯ ವಿಷಯ ಕೃತಿಕಾರರು, ಕೃತಿಯ ರಚನೆ,ಮುದ್ರಣ ಹಾಗೂ ಪ್ರಕಾಶನದ ಹಾದಿಯಲ್ಲಿ ಸಹಕರಿಸಿದ ಪ್ರತಿಯೊಬ್ಬರನ್ನೂ ಸ್ಮರಿಸಿದರು,ಉಡುಗೊರೆಯಾಗಿ ಪುಸ್ತಕ ನೀಡಿ ಸಂತಸಪಟ್ಟರು. ಇದೊಂದು ಅನುಕರಣೀಯ ನಡೆಯನ್ನಿಸಿತು.

ಕೃತಿಯ ಮತ್ತೊಬ್ಬ ಲೇಖಕರಾದ ಶ್ರೀ ಬಿ ಎಸ್ ಚಂದ್ರಶೇಖರ್ ಅವರು ಕೃತಿ, ವಾಟ್ಸ್ ಆಪ್ ವೇದಿಕೆಯಲ್ಲಿ ಕಂತುಗಳಲ್ಲಿ ಬಂದಾಗ

ಉತ್ಸಾಹದಿಂದ ಪ್ರತಿಕ್ರಿಯಿಸಿದ ಆಸಕ್ತರಿಗೆ,ಪ್ರಕಟಣೆಯ ಪೂರ್ವದಲ್ಲಿ ಕೃತಿಗಳನ್ನು ಖರೀದಿಸಿ ಪ್ರೋತ್ಸಾಹಿಸಿದವರಿಗೆ, ಪ್ರಕಾಶಕರಿಗೆ, ಮುದ್ರಣವರ್ಗಕ್ಕೆ , ಸಭಾಸದರಿಗೆ ಹಾಗೂ ಸಹಕರಿಸಿದ ಪ್ರತಿಯೊಬ್ಬರಿಗೆ ವಂದನೆಗಳನ್ನು ಸಲ್ಲಿಸಿದರು.

ಸಾಹಿತಿ, ಸೇವಾಮನೋಭಾವದ ಮತ್ತೋರ್ವ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀ ರಂಗನಾಥ್ ಅವರು ಸಭೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ನಿರೂಪಣೆ ಮಾಡಿದರು. ಕೊನೆಯಲ್ಲಿ ಎಲ್ಲರಿಗೂ ಸುಗ್ರಾಸ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಯ ಆ ವಿಶಾಲ ಭೋಜನ ಮಂದಿರ ಒಂದು ರೀತಿಯಲ್ಲಿ ಋಷ್ಯಾಶ್ರಮದ ಭೋಜನ ಮಂದಿರದಂತೆ ಇದ್ದಿದ್ದು ಒಂದು ವಿಶೇಷವೇ. ಅಂದು ನನಗೆ ಮತ್ತು ಈ ವೇದಿಕೆಯ ನನ್ನ ಹಿರಿಯ ಸ್ನೇಹಿತರು, ಆತ್ಮೀಯರಾದ ಶ್ರೀಮತಿ ಮಾಲತಿ ಶ್ರೀನಿವಾಸ್ ಇಬ್ಬರಿಗೂ ಋತ್ವಿಕರ ಸಾಲಿನಲ್ಲಿ ಪಂಕ್ತಿ ಭೋಜನ ಮಾಡುವ ಸದಾವಕಾಶ!!ಇದೊಂದು ಸದಾ ನಮ್ಮ ಸ್ಮರಣೆಯಲ್ಲಿ ಇರುತ್ತದೆ ಎಂದು ಇಬ್ಬರೂ ಸಂತಸ ಪಟ್ಟೆವು.
ಪ್ರಭಾಕರ್ ಅವರ ಪ್ರಸ್ತಾವನೆ,ಜನಾರ್ಧನ ತುಂಗಾ ಅವರ ಪುಸ್ತಕ ಪರಿಚಯ ಹಾಗೂ ಚಂದ್ರಶೇಖರ್ ಅವರ ಅರಿಕೆ, ಅಲ್ಲಿರುವ ಎಲ್ಲರಿಗೂ ಗ್ರಂಥದ ಮಹತ್ವದ ಅರಿವನ್ನುಂಟುಮಾಡಿತ್ತು, ಅದರ ಫಲಶ್ರುತಿಯಾಗಿ, ಹೆಚ್ಚಿನಜನ ಸರತಿ ಸಾಲಿನಲ್ಲಿ ನಿಂತು ಗ್ರಂಥವನ್ನು ಕೊಂಡುಕೊಂಡು ತಮ್ಮದಾಗಿಸಿಕೊಂಡರು. ನಿಜ, ಮನೆ ಮನೆಯಲ್ಲಿ ಇರಬೇಕಾದ ಗ್ರಂಥವಿದು.
ಇದಿಷ್ಟು ಆ ದಿನದ ಗ್ರಂಥ- ಬಿಡುಗಡೆಯ ಸಮಾರಂಭದ ವಿವರಣೆಯಾದರೆ, ಈ ಗ್ರಂಥದ ಬಗೆಗೂ ಒಂದಿಷ್ಟು ವಿವರ ಓದುಗರಿಗೆ ಲಭಿಸಲಿ ಎನ್ನುವ ಅಭಿಲಾಷೆ ನನ್ನದು ಹಾಗಾಗಿ ಶ್ರೀ ಜನಾರ್ಧನ್ ತುಂಗಾರವರು ಅತಿ ಸರಳವಾಗಿ, ವಿವರವಾಗಿ ವಿವರಿಸಿದ ವಿವರಣೆಯ ಸಂಕ್ಷಿಪ್ತರೂಪ ವೇದಿಕೆಯಲ್ಲಿ ಅಂಟಿಸಿದ್ದರು ಅದನ್ನು ಯಾಥಾವತ್ ಈ ವರದಿಯೊಂದಿಗೆ ಲಗತ್ತಿಸಿರುವೆ. ಪುಸ್ತಕದ ರಸಸಾರ ಹಂಚುವ ಸದಾಶಯ ನನ್ನದು. ಇದಕ್ಕೆ ಅನುಮತಿಯನ್ನಿತ್ತ ಅವರಿಗೆ ಧನ್ಯವಾದಗಳು.

ಜನಾರ್ಧನ ತುಂಗರವರಿಂದ ಪುಸ್ತಕ ಪರಿಚಯ

ಶ್ರೀ ಬಿ ಎಸ್ ಚಂದ್ರಶೇಖರ್ ಮತ್ತು ಶ್ರೀ ಬಿ ಆರ್ ಪ್ರಭಾಕರ್ ರಚಿಸಿರುವ "ಮಹಾನಾರಾಯಣ ಉಪನಿಷತ್ತು" ಪುಸ್ತಕದ ಕಿರು ಪರಿಚಯ
ದಶೋಪನಿಷತ್ತುಗಳಲ್ಲಿ ತೈತ್ತಿರೀಯೋಪನಿಷತ್ತಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಕೃಷ್ಣಯಜುರ್ವೇದದ ತೈತ್ತಿರೀಯ ಆರಣ್ಯಕದ ನಾಲ್ಕನೆಯ ಪ್ರಪಾಠಕ (ಅಧ್ಯಾಯ) ಅಥವಾ ಪ್ರಶ್ನೆಯು ತುಂಬಾ ದೀರ್ಘವಾಗಿದ್ದು ಇದನ್ನೇ

ಪ್ರತ್ಯೇಕವಾಗಿ ಮಹಾನಾರಾಯಣೋಪನಿಷತ್ತು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಎಲ್ಲ ಉಪನಿಷತ್ತುಗಳು ಜ್ಞಾನಕ್ಕೆ ಪ್ರಾಧಾನ್ಯ ನೀಡುತ್ತವೆ. ಆದರೆ ಮಹಾನಾರಾಯಣೋಪನಿಷತ್ತು ಜಗತ್ತು ಮತ್ತು ಜೀವಗಳ ಉಗಮದ ಬಗ್ಗೆ ತಿಳಿಸುವುದಲ್ಲದೆ ಕರ್ಮಾನುಷ್ಠಾನಗಳ ಮೂಲಕ ಆತ್ಮಜ್ಞಾನ ಅರ್ಥಾತ್ ಮೋಕ್ಷವನ್ನು ಸಾಧಿಸಬಹುದೆಂಬುದನ್ನು ನಿರೂಪಿಸುತ್ತದೆ.

ಬಹುತೇಕ ಎಲ್ಲ ಉಪನಿಷತ್ತುಗಳ ಸಾರವನ್ನು ಒಳಗೊಂಡಿರುವ ಈ ಉಪನಿಷತ್ತನ್ನು ಸಂಧ್ಯಾವಂದನೆ, ಪ್ರಾರ್ಥನೆ, ಔಪಾಸನೆ, ಜಪ, ಪೂಜನ ಅನುಷ್ಠಾನ ಮುಂತಾದ ನಿತ್ಯಕರ್ಮಗಳ ಮಂತ್ರಗಳು, ಹೋಮ, ಹವನ, ದಾನ, ಶಾಂತಿಕ್ರಿಯೆ, ಶ್ರಾದ್ಧ, ಪ್ರಾಯಶ್ಚಿತ್ತ ಮುಂತಾದ ನೈಮಿತ್ತಿಕ ಕರ್ಮಗಳ ಮಂತ್ರಗಳು ಹಾಗೂ ಪರಬ್ರಹ್ಮ ತತ್ತ್ವವನ್ನು ನಿರೂಪಿಸುವ ಮಂತ್ರಗಳನ್ನು ಒಳಗೊಂಡಿರುವ ಕಾರಣ ಯಾಜ್ಞಿಕೀ ಉಪನಿಷತ್ತು ಎಂತಲೂ ಕರೆಯುತ್ತಾರೆ.

"ಕರ್ಮ ಬ್ರಹ್ಮೋದ್ಭವಂ" ಎಂದು ಗೀತೆಯಲ್ಲಿ ಹೇಳಲಾಗಿದೆ. ಈ ಪ್ರಕಟಿತ ಜಗತ್ತು ಕರ್ಮಭೂಮಿ. ಇಲ್ಲಿನ ಕರ್ಮವನ್ನು ಯಜ್ಞದಂತೆ ನಡೆಸಬೇಕು. "ಯಜ್ಞಃ ಕರ್ಮ ಸಮುದ್ಭವಃ" ನಿತ್ಯ, ನೈಮಿತ್ತಿಕ ಕರ್ಮಗಳೆಲ್ಲವೂ ಯಜ್ಞವೇ ಆಗಬೇಕು. ಇಂತಹ ಉದಾತ್ತತೆಯನ್ನು ಬೋಧಿಸುತ್ತದೆ, ಮಹಾನಾರಾಯಣೋಪನಿಷತ್ತು.

ನಮ್ಮ ನಡುವಣ ಪ್ರಮುಖ ಆಧ್ಯಾತ್ಮ ಚಿಂತಕರಾದ ಬಿ ಎಸ್ ಚಂದ್ರಶೇಖರರು ತಮ್ಮ ಆಪ್ತವಲಯದಲ್ಲಿ ಆಧ್ಯಾತ್ಮ ಜ್ಞಾನವನ್ನು ಹಂಚಿಕೊಳ್ಳುತ್ತಿದ್ದಾರೆ. ಆಧ್ಯಾತ್ಮ ವಿಚಾರಗಳ ಕುರಿತು ಹಲವು ಸರಣಿ ಲೇಖನಗಳನ್ನೂ ಬರೆದಿದ್ದಾರೆ. ಅವರ ಸರಳ ನಿರೂಪಣಾ ಕ್ರಮ ಸಾಮಾನ್ಯರಿಗೂ ಆಪ್ಯಾಯಮಾನವಾಗುತ್ತದೆ. ತಮ್ಮ ಜ್ಞಾನವನ್ನು ನಿಕಷಕ್ಕೊಡ್ಡುವ ರೀತಿಯಲ್ಲಿ ಹಿರಿಯ ವಿದ್ವಾಂಸರಾದ ಶ್ರೀ ಬಿ ಆರ್ ಪ್ರಭಾಕರ್ ಅವರ ಜೊತೆಗೂಡಿ ಮಹಾನಾರಾಯಣೋಪನಿಷತ್ತಿನ ಬಗ್ಗೆ ಅವರು ಬರೆದಿರುವ ಪುಸ್ತಕ ಇದೇ ಮೇ ಒಂಬತ್ತರಂದು ಬೆಂಗಳೂರಿನಲ್ಲಿ ಬಿಡುಗಡೆಯಾಗುತ್ತಿದೆ.

ಮಹಾನಾರಾಯಣೋಪನಿಷತ್ತಿನ ಸಂಸ್ಕೃತ ಮಂತ್ರಗಳು ದೇವನಾಗರೀ ಹಾಗೂ ಕನ್ನಡ ಲಿಪಿಗಳಲ್ಲಿ ಮತ್ತು ಮಂತ್ರಗಳ ಅನುವಾದ ಹಾಗೂ ವ್ಯಾಖ್ಯಾನ ಆಂಗ್ಲ ಭಾಷೆಯಲ್ಲಿವೆ. ಇಡೀ ಉಪನಿಷತ್ತಿನ ಕನ್ನಡ ಅನುವಾದವೂ ಈ ಪುಸ್ತಕದಲ್ಲಿದೆ. ಸುಮಾರು ಒಂದು ವರ್ಷದ ಕಾಲ ಅವಿರತ ಪರಿಶ್ರಮದಿಂದ ಸಾಹಿತ್ಯಕೂಟ ವೇದಿಕೆಯಲ್ಲಿ ಪ್ರಸ್ತುತಗೊಂಡ ಈ ಪುಸ್ತಕ ಹಲವು ರೀತಿಗಳಿಂದ ವಿಶಿಷ್ಟವಾಗಿದೆ.

ಉಪನಿಷತ್ತುಗಳ ಕುರಿತು ಸಾವಿರಾರು ವರ್ಷಗಳಿಂದ ನಿರಂತರವಾಗಿ ವ್ಯಾಖ್ಯಾನಗಳು ನಡೆಯುತ್ತಲೇ ಬಂದಿವೆ. ಸತ್ಯ ಒಂದೇ ಆದರೂ ಅದನ್ನು ಮನವರಿಕೆ ಮಾಡಿಕೊಳ್ಳುವ ಕ್ರಮವು ಕಾಲಕ್ಕೆ ತಕ್ಕಂತೆ, ಬದಲಾದ ಮನಸ್ಥಿತಿಗೆ

ತಕ್ಕಂತೆ ಬೇರೆಯಾಗುತ್ತದೆ. ಇತ್ತೀಚಿನ ಓದುಗರಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ಕೂಡ ಆಂಗ್ಲ ಭಾಷೆಯ ಮೂಲಕ ಓದುವ ಪ್ರವೃತ್ತಿಯಿದೆ. ಭಾರತೀಯ ಆಧ್ಯಾತ್ಮದ ಹಲವು ಸೂಕ್ಷ್ಮಗಳನ್ನು ಹಿಡಿದಿಡಲು ಆಂಗ್ಲ ಭಾಷೆ ಅಸಮರ್ಥ. ಆಗ ಮೂಲ ಸಂಸ್ಕೃತ ಪಠ್ಯವನ್ನು ಪರಿಶೀಲಿಸಬೇಕಾಗುತ್ತದೆ. ಆದರೆ ಸಂಸ್ಕೃತದ ಗಂಧಗಾಳಿ ಇಲ್ಲದವರು ಏನು ಮಾಡಬೇಕು? ಈ ನಿಟ್ಟಿನಲ್ಲಿ ಸಂಸ್ಕೃತ (ಮೂಲ ಪಠ್ಯ) ಇಂಗ್ಲಿಶ್ ಮತ್ತು ಕನ್ನಡ – ಮೂರೂ ಭಾಷೆಗಳಲ್ಲಿರುವ ಈ ಪುಸ್ತಕ ಉಪಯುಕ್ತವಾಗಿದೆ.

ಈ ಪುಸ್ತಕದಲ್ಲಿ ಸಂಸ್ಕೃತದ ಮಂತ್ರಗಳನ್ನು ಉದಾತ್ತ ಅನುದಾತ್ತಾದಿ ಸ್ವರಸಹಿತವಾಗಿ ಪ್ರಕಟಿಸಲಾಗಿದೆ. ಇಂಗ್ಲಿಶ್ ಅನುವಾದ ಅತ್ಯಂತ ಸರಳವಾಗಿದ್ದು ಸ್ವಾಧ್ಯಾಯಿಗಳಿಗೆ ಸಹಾಯಕವಾಗಿದೆ. ಮೂಲ ಸಂಸ್ಕೃತ ಪಾಠದ ಮಂತ್ರ ಮತ್ತು ಪ್ರಬಂಧ ಭಾಗಗಳ ಕನ್ನಡ ಅನುವಾದಕ್ಕೆ ಅಂಶಲಯವನ್ನು ಬಳಸಿಕೊಂಡಿರುವುದರಿಂದ ಓದು ಸುಲಭವಾಗಿದೆ. ಇಂಗ್ಲಿಶ್ ಅನುವಾದ, ಇಂಗ್ಲಿಶ್ ವ್ಯಾಖ್ಯಾನ ಮತ್ತು ಕನ್ನಡ ಅನುವಾದಗಳನ್ನು ಜೊತೆಜೊತೆಯಾಗಿ ಓದುವುದರಿಂದ ಬಹುತೇಕ ವಿಷಯಗಳು ಸ್ವಯಂವೇದ್ಯವಾಗುತ್ತವೆ. ಉಪನಿಷತ್ತುಗಳನ್ನು ಅರ್ಥಮಾಡಿಕೊಳ್ಳಲು ಇತರ ಅನೇಕ ವಿಷಯಗಳನ್ನು, ಉಪನಿಷತ್ತುಗಳನ್ನು, ಪುರಾಣಭಾಗಗಳನ್ನು, ಭಾಷ್ಯಗಳನ್ನು, ಸೂತ್ರಗಳನ್ನು ಪರಿಗಣಿಸಬೇಕಾಗುತ್ತದೆ. ಈ ಅಗತ್ಯವನ್ನು ಲೇಖಕರು ತಮ್ಮ ಇಂಗ್ಲಿಶ್ ವ್ಯಾಖ್ಯಾನದಲ್ಲಿ ಬಹುತೇಕ ಪೂರೈಸಿದ್ದಾರೆ.

ಕರ್ಕಶ ವರ್ಣಗಳನ್ನು ಬಳಸದ ನಯವಾದ ಸರಳ ಕನ್ನಡದ, ಕೇವಲ ಕಣ್ಣು ಹಾಯಿಸಿದರೆ ಓದುಗರನ್ನು ಸೆಳೆಯಬಲ್ಲ, ಹೆಚ್ಚಿನ ಓದಿಗೆ ಪ್ರೇರಿಸಬಲ್ಲ ಮಹತ್ಕೃತಿಯಿದು ಎಂದರೆ ಅತಿಶಯೋಕ್ತಿಯಲ್ಲ. ಆ ಮಟ್ಟಿಗೆ ಇದೊಂದು ಯಶಸ್ವೀ ಪ್ರಯೋಗ, ಉಪಕ್ರಮ.

ಈ ಪುಸ್ತಕಕ್ಕೆ ಸ್ವಾಮಿ ವೀರೇಶಾನಂದ ಸರಸ್ವತಿಯವರ ಮುನ್ನುಡಿಯೊಂದಿಗೆ ಶ್ರೀ ಬಿ ಆರ್ ಪ್ರಭಾಕರ್ ಅವರ ವಿದ್ವತ್ಪೂರ್ಣ ಪ್ರಸ್ತಾವನೆಯಿದೆ. ವೇದಗಳ ಅಧ್ಯಯನಕ್ರಮಕ್ಕೆ ಕಿರುಮಾರ್ಗದರ್ಶಿಯಂತಿರುವ ಮುನ್ನುಡಿಯು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ.

ಉಪನಿಷತ್ತಿನ ಸಾರವನ್ನು ಸಂಗ್ರಹಿಸಿದಂತಿರುವ ಆಕರ್ಷಕ ಮುಖಪುಟವನ್ನು ಶ್ರೀ ಕೆ ಆರ್ ಶ್ರೀಕಂಠಮೂರ್ತಿಯವರು ರಚಿಸಿದ್ದಾರೆ. ಉಪನಿಷತ್ತಿನಲ್ಲಿ ಬರುವ ಕೆಲವು ಮಂತ್ರಗಳಿಗೆ ವಿವರಣಾತ್ಮಕ ಅನುಬಂಧಗಳನ್ನೂ ಪುಸ್ತಕದ ಕೊನೆಯಲ್ಲಿ ನೀಡಲಾಗಿದೆ. ಅನುಬಂಧಗಳ ಎರಡನೆಯ ಭಾಗದಲ್ಲಿ ಪಾಕ ಸಂಸ್ಥೆ, ಹವಿರ್ ಸಂಸ್ಥೆ ಮತ್ತು ಸೋಮ ಸಂಸ್ಥೆಯ ವಿವರಗಳನ್ನು ನೀಡಲಾಗಿದೆ. ಉಪನಿಷತ್ತಿಗೆ ಪೂರಕವಾದ ಧ್ಯಾನ ಶ್ಲೋಕಗಳನ್ನೂ ಅನುಬಂಧದಲ್ಲಿ ನೀಡಲಾಗಿದೆ, ಯಜ್ಞವೇದಿಯ ಸಚಿತ್ರ ವಿವರಣೆಯೂ ಇದರಲ್ಲಿದೆ. ಪುಸ್ತಕರಚನೆಯ ಸಂದರ್ಭದಲ್ಲಿ ಪರಾಂಬರಿಸಿದ ಗ್ರಂಥಗಳನ್ನೂ ಪಟ್ಟಿ ಮಾಡಿಕೊಟ್ಟಿದ್ದಾರೆ.

ಹೀಗಾಗಿ ಜಿಜ್ಞಾಸುಗಳಿಗೆ ಮಾತ್ರವಲ್ಲದೆ ಸಾಧಕರಿಗೂ ಉಪಯುಕ್ತವಾದ ಗ್ರಂಥವಿದು.
ಈ ಪುಸ್ತಕವನ್ನು ಬೆಂಗಳೂರಿನ ಸಾಹಿತ್ಯ ಭಂಡಾರ ಪ್ರಕಟಿಸಿದೆ. ೩೯೨ ಪುಟಗಳ ಈ ಪುಸ್ತಕದ ಬೆಲೆ ೪೮೦ ರೂಪಾಯಿಗಳು. ಪ್ರತಿ ಬೇಕಾದವರು ದೂರವಾಣಿ ಸಂಖ್ಯೆ (೯೯೮೦೦ ೭೧೭೧೫) ಯನ್ನು ಸಂಪರ್ಕಿಸಬಹುದು.
ಹಿರಿಯ ಲೇಖಕರಾದ ಶ್ರೀ ಶಶಿಧರ ವಿಶ್ವಾಮಿತ್ರರ ಪ್ರೇರಣೆಯಿಂದ ಬೆಳಕು ಕಾಣುತ್ತಿರುವ ಈ ಮಹತ್ಕೃತಿಯನ್ನು ಕನ್ನಡಿಗರು ಆದರದಿಂದ ಬರಮಾಡಿಕೊಂಡು ಭಾರತೀಯ ಆಧ್ಯಾತ್ಮ ವಿಜ್ಞಾನದ ಕುರಿತು ಪೂರ್ವಾಗ್ರಹಗಳಿದ್ದರೆ ಅವುಗಳನ್ನು ತೊಡೆದುಕೊಂಡು ಜ್ಞಾನತೃಷೆಯನ್ನು ಹೆಚ್ಚಿಸಿಕೊಳ್ಳಬಹುದು.



21. ಶ್ರೀಧರ ಬಾಣಾವರ

ಸಾಹಿತ್ಯ ದಾಸೋಹ ನಡೆದುಬಂದ ದಾರಿ; ನನ್ನ ದೃಷ್ಟಿಯಲ್ಲಿ.

೧೯೯೭ರಲ್ಲಿ ಇರಬಹುದು, ಗೆಳೆಯ ಭದ್ರಣ್ಣನವರ ಜೊತೆ ಒಂದು ಭಾನುವಾರ ಗೆಳೆಯರೊಬ್ಬರ ಮನೆಯಲ್ಲಿ ನಡೆದ ದಾಸೋಹವೊಂದರಲ್ಲಿ ಭಾಗವಹಿಸಿದ್ದು ಮೊದಲ ದಾಸೋಹದ ಅನುಭವ. ಆಗ ಬರೀ ಕೇಳುಗನಾಗಿ ಭಾಗವಹಿಸಿದ್ದೆ. ನಂತರ ಹೊರನಾಡ ಕನ್ನಡಿಗನಾಗಿ ಸುಮಾರು ಹದಿನೈದು ವರ್ಷಗಳ ಕಾಲ ಬೆಂಗಳೂರಿಂದ ಹೊರಗೆ ವಾಸ. ಈ ಸಂದರ್ಭದಲ್ಲಿ ನಾನು ಭಾಗವಹಿಸಿದ ದಾಸೋಹಗಳ ಸಂಖ್ಯೆ ಒಂದೋ ಎರಡೋ, ಹಾಗಾಗಿ ನನ್ನ ಬಳಿ ಹೆಚ್ಚಿನ ಮಾಹಿತಿ ಇಲ್ಲ. ನಿವೃತ್ತಿಯ ನಂತರ ೨೦೧೧ ರಲ್ಲಿ ಮರಳಿ ಬೆಂಗಳೂರು ವಾಸಿಯಾದ ಮೇಲೆ ನಿರಂತರವಾಗಿ ದಾಸೋಹಗಳಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ. ಮೊದಮೊದಲಿಗೆ ದಾಸೋಹದ ಸ್ವರೂಪ ಹೆಚ್ಚು ಬದಲಾದಂತೆ ಕಾಣಲಿಲ್ಲ. ಬಹಳ ಕಾಲ ಅದು ಮೊದಲಿನ ಸ್ವರೂಪವನ್ನೇ ಉಳಿಸಿಕೊಂಡಿತ್ತಾದರೂ, ನಂತರದ ವರ್ಷಗಳಲ್ಲಿ ಅದರ ಸ್ವರೂಪ ಬದಲಾಗುತ್ತಾ ಸಾಗಿದೆಯಾದರೂ ಮೂಲ ಉದ್ದೇಶ ಮಾತ್ರಾ ಹಾಗೆಯೇ ಉಳಿದಿದೆ. ಮೊದಲಿಗೆ ಬಹಳ ಕಾಲ ದಾಸೋಹಗಳು ತಿಂಗಳ ಒಂದು ಭಾನುವಾರದಂದು ಒಬ್ಬೊಬ್ಬರ ಮನೆಯಲ್ಲಿ ಜರುಗುತ್ತಿದ್ದವು. ಅಂದಿನ ದಾಸೋಹಿಗಳಲ್ಲಿ ಹೆಚ್ಚಿನವರು ಬ್ಯಾಂಕಿನ ಅದರಲ್ಲೂ ಎಸ್ ಬಿ ಐ , ಮೈಸೂರು ಬ್ಯಾಂಕಿನ ಉದ್ಯೋಗಿಗಳಾಗಿದ್ದರು. ಹೆಚ್ಚಿನವರು ನಡುವಯಸ್ಸಿನವರು. ಹಲವು ಯುವಕರು ಸಹಾ ಇದ್ದರು. ಪ್ರತಿ ತಿಂಗಳೂ ಒಬ್ಬರ ಆತಿಥ್ಯದಲ್ಲಿ ಅವರವರ ಮನೆಗಳಲ್ಲಿ ದಾಸೋಹ ಜರುಗುತ್ತಿತ್ತು.

ಮನೆಗಳಲ್ಲಿ ನಡೆಯುತ್ತಿದ್ದ ಕಾರಣ ಅದು ಮನೆಯವರಿಗೆ ಒಂದು ಕೌಟುಂಬಿಕ ಸಮಾರಂಭದ ಭಾವನೆ ತರುತ್ತಿತ್ತು. ಬಂಧು ಮಿತ್ರರು ಸಹಾ ಸೇರುತ್ತಿದ್ದರು. ದಾಸೋಹದ ಪ್ರಸ್ತುತಿಯ ಜೊತೆಗೆ ಭಾಗವಹಿಸಿದ ಕುಟುಂಬದ ಸದಸ್ಯರು, ಸ್ನೇಹಿತರಿಗೂ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶವಿರುತ್ತಿತ್ತು.

ಗೀತ ಗಾಯನ, ವಾದ್ಯಸಂಗೀತಗಳ ಪ್ರಸ್ತುತಿಗಳಾಗುತ್ತಿದ್ದವು. ಇನ್ನು ದಾಸೋಹ ಎಂದರೆ ತಿಂಡಿ ತಿನಿಸಿನ ವಿಭಾಗದಲ್ಲಿ ತೀವ್ರ ಪೈಪೋಟಿ ಕಾಣುತ್ತಿತ್ತು. ಹಲವಾರು ಮನೆಗಳಲ್ಲಿ ಅಪರೂಪದ ತಿನಿಸುಗಳಾದ ಕೊಟ್ಟೆ ಕಡುಬು, ಸಿಹಿ ಕಡುಬು, ಹೋಳಿಗೆ, ಹಾಲುಬಾಯಿ, ಗಸಗಸೆ ಪಾಯಸ, ಜೋಳದ ರೊಟ್ಟಿ–ಎಣಗಾಯಿ ಪಲ್ಯದ ಸರಬರಾಜು ಇರುತ್ತಿತ್ತು. ಮಹಿಳೆಯರಿಗೆ ಕುಂಕುಮ ವೀಳ್ಯ ಸಹ ಇರುತ್ತಿತ್ತು. ಸಮಾರಂಭಕ್ಕೆ ಹಲವೊಮ್ಮೆ ಪಾರ್ಟಿ ಹಾಲ್‌ಗಳನ್ನು ಸಹಾ ಬುಕ್ ಮಾಡಲಾಗುತ್ತಿತ್ತು.

ಇನ್ನು ಮುಖ್ಯ ದಾಸೋಹದ ಕಡೆಗೆ ಬಂದರೆ ಅಂದಿನ ಅಧ್ಯಕ್ಷತೆಯ ಪಟ್ಟ ಅಲ್ಲಿ ಹಾಜರಿರುವವರ ಪೈಕಿ ಒಬ್ಬರಿಗೆ ದೊರಕುತ್ತಿತ್ತು. ದಾಸೋಹಿಗಳು ಬರಹ ರೂಪದಲ್ಲಿದ್ದದ್ದನ್ನೇ ಓದಬೇಕೆಂಬ ನಿಯಮ ಕಡ್ಡಾಯವಾಗಿ ಪಾಲಿಸಲಾಗುತ್ತಿತ್ತು. ತಯಾರಿ ಇಲ್ಲದೇ ಬಂದ ಉತ್ಸಾಹಿಗಳೊಂದಿಬ್ಬರು ಅಲ್ಲೇ ಹಾಳೆ ಪೆನ್ನು ಪಡೆದು ಲೇಖನ ಬರೆದು ಪ್ರಸ್ತುತ ಪಡಿಸಿದ್ದೂ ಉಂಟು. ನೆಪಕ್ಕೆ ಕಾಗದವೊಂದನ್ನು ಹಿಡಿದು ಓದಿದಂತೆ ನಟಿಸಿ ಭಾಷಣ ಮಾಡಿದ ಸಂದರ್ಭಗಳೂ ಇಲ್ಲದಿರಲಿಲ್ಲ. ಪ್ರತಿ ಪ್ರಸ್ತುತಿಗೆ ಹತ್ತು ನಿಮಿಷದ ಮಿತಿ ಇತ್ತು. ಹೆಚ್ಚು ಪ್ರಸ್ತುತಿಗಳಿದ್ದಾಗ ರಾತ್ರಿ ಎಂಟರವರೆಗೂ ಕಾರ್ಯಕ್ರಮ ಎಳೆದದ್ದುಂಟು. ಈಗಿನಂತೆ ಪ್ರಸ್ತುತಿಗಳು ಮೊದಲಿಗೆ ಆಧ್ಯಕ್ಷರಿಗೆ ಸಿಗುತ್ತಿರಲಿಲ್ಲವಾದ ಕಾರಣ ಸಭೆಯಲ್ಲಿ ಪ್ರಸ್ತುತಿಪಡಿಸಲಾದ ಲೇಖನಗಳನ್ನು ಅವರು ಕಡ್ಡಾಯವಾಗಿ ಆಲಿಸಿ ಅವರಿಗೆ ಕಂಡುಬಂದ ಮುಖ್ಯಾಂಶಗಳನ್ನು ಗುರುತಿಸಿಕೊಂಡು ಅಧ್ಯಕ್ಷ ಪೀಠದಿಂದ ಪ್ರಸ್ತುತ ಪಡಿಸಬೇಕಾಗುತ್ತಿತ್ತು. ಇನ್ನು ಹಲವಾರು ದಾಸೋಹಗಳಲ್ಲಿ ಕೆಲವು ಹೆಸರಾಂತ ವ್ಯಕ್ತಿಗಳು ಭಾಗವಹಿಸಿದ್ದೂ ಉಂಟು. ದುಂಡಿರಾಜ್, ಕಾದಂಬರಿಕಾರ ಕೆ ಸತ್ಯನಾರಾಯಣ, ಬೇಳೂರು ಸುದರ್ಶನ, ಹಾಸ್ಯಲೇಖಕ ಗೋಪಾಲಕೃಷ್ಣ, ಆನಂದ ಮುಂತಾದವರು ಭಾಗವಹಿಸಿದ್ದು ನೆನಪಿದೆ. ಅವರೆಲ್ಲರೂ ದಾಸೋಹ ಕುರಿತಾಗಿ ಸಂತಸ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನ ದಾಸೋಹದ ಖಾಯಂ ಸದಸ್ಯರಾಗಿದ್ದ ಶ್ರೀ ಅನಂದ ಮತ್ತು ಅವರ ಪತ್ನಿ ಮೈಸೂರಿಗೆ ವಾಸ ಬದಲಾಯಿಸಿದ ಮೇಲೆ ಅಲ್ಲಿಯೂ ದಾಸೋಹಗಳನ್ನು ಏರ್ಪಡಿಸುವ ಕಾಯಕ ಮುಂದುವರೆಸಿದ್ದಾರೆ.

ದಾಸೋಹ ನಡೆಸುತ್ತಿದ್ದ ಮನೆಗಳು ಬೆಂಗಳೂರಿನ ಬೇರೆ ಬೇರೆ ಸ್ಥಳಗಳಲ್ಲಿದ್ದು ಹಲವರಿಗೆ ಹಾಜರಿ ಕಷ್ಟವೆನಿಸಿದಾಗ, ಎಲ್ಲರಿಗೂ ಅನುಕೂಲವಾಗುವ ಕೇಂದ್ರ ಸ್ಥಳದಲ್ಲಿ ಪ್ರತೀ ದಾಸೋಹವನ್ನು ನಡೆಸುವ ನಿರ್ಧಾರವನ್ನು ಸಂಚಾಲಕರು ತೆಗೆದುಕೊಳ್ಳಬೇಕಾಯಿತು. ಚಾಮರಾಜಪೇಟೆಯ

ಕನ್ನಡ ಗಣಕ ಪರಿಷತ್, ಜಯನಗರದ ರಾಣಿ ಸರಳಾದೇವಿ ವಿದ್ಯಾಸಂಸ್ಥೆ ಇಲ್ಲೆಲ್ಲಾ ಅನೇಕ ದಾಸೋಹಗಳು ನಡೆದ ಮೇಲೆ ಅಂತಿಮವಾಗಿ ನರಸಿಂಹರಾಜ ಕಾಲೋನಿಯ ಬಿ ಎಂ ಶ್ರೀ ಪ್ರತಿಷ್ಠಾನದ ಕಟ್ಟಡದಲ್ಲಿ ದಾಸೋಹ ನಡೆಯ ತೊಡಗಿತು. ಕಾರ್ಯಕ್ರಮದ ದಿನ ಸಹ ತಿಂಗಳ ಎರಡನೇ ಶನಿವಾರಕ್ಕೆ ನಿಗದಿಯಾಗಿ ಈಗಲೂ ಮುಂದುವರೆದಿದೆ. ಬೇರೆ ಬೇರೆ ಕ್ಷೇತ್ರದ ಆಸಕ್ತರು ಸಹಾ ದಾಸೋಹಿಗಳಾಗಿ ಭಾಗವಹಿಸುತ್ತಿದ್ದಾರೆ. ತಿಂಗಳ ದಾಸೋಹದ ಹೊರತಾಗಿ ಬೇರೆ ಬೇರೆ ಕಾರ್ಯಕ್ರಮಗಳು ಸಹಾ ಸ ಸ ಕ ಸ ವೇದಿಕೆಯ ನೇತೃತ್ವದಲ್ಲಿ ರೂಪಿತಗೊಂಡಿವೆ. ದಾಸೋಹದ ಆಯ್ದ ಪ್ರಸ್ತುತಿಗಳನ್ನು ಸಂಕಲಿಸಿ ಸುಂದರ ಮೌಲ್ಯಯುತ ಸಂಗ್ರಹ ಗ್ರಂಥಗಳನ್ನು ಸಹಾ ಹೊರತರಲಾಗಿದೆ.
ಕೊರೋನಾದ ಹಾವಳಿಯಿಂದ ನಿಂತೇ ಹೋಗುವಂತಾಗಿದ್ದ ದಾಸೋಹ ತಂತ್ರಜ್ಞಾನದ ಸಹಾಯದೊಂದಿಗೆ ನೋಡಿಯೋ ದಾಸೋಹದ ರೂಪದಲ್ಲಿ ಮುಂದುವರೆದಿರುವುದು ಸಂತಸದ ವಿಷಯ.

ನೋಡಿಯೋದಿಂದಾಗಿ ದಾಸೋಹದಲ್ಲಿ ಹೆಚ್ಚಿನ ಶಿಸ್ತನ್ನು ರೂಢಿಸಿಕೊಳ್ಳಲಾಗಿದೆ. ಅಧ್ಯಕ್ಷರ ಆಯ್ಕೆ ಮುಂದಾಗಿಯೇ ಅಗುತ್ತದೆ. ಪ್ರಸ್ತುತಿ ಮಾಡುವವರ ನೊಂದಣಿ ವ್ಯವಸ್ಥೆ ಬಂದಿದೆ. ಪ್ರಸ್ತುತಿ ಮಾಡುವ ಲೇಖನಗಳ ಟಂಕಿತ ಪ್ರತಿಗಳು ಅಧ್ಯಕ್ಷರಿಗೆ ಮುಂಚಿತವಾಗಿ ನಿಗದಿತ ಸಮಯದೊಳಗೆ ರವಾನೆಯಾಗಬೇಕು. ಅಧ್ಯಕ್ಷರು ಪ್ರಸ್ತುತಿಗಳನ್ನು ಮುಂಚೆಯೇ ಪರಿಶೀಲಿಸಿ ಅವರ ಅಭಿಪ್ರಾಯಗಳನ್ನು ದಾಖಲಿಸಿಕೊಳ್ಳುವ ಅನುಕೂಲವಿದೆ. ನೊಂದಣಿಯಾದ ಕ್ರಮದಲ್ಲಿ ತಂತ್ರಜ್ಞಾನದ ಆಧಾರದ ಮೇಲೆ ವ್ಯವಸ್ಥೆಗೊಂಡ ನೋಡಿಯೋದಲ್ಲಿ ಪ್ರಸ್ತುತಿಗಳು ನಡೆಯುತ್ತವೆ. ಕಡೆಯಲ್ಲಿ ಅಧ್ಯಕ್ಷರ ಅಭಿಪ್ರಾಯಗಳ ಪ್ರಸ್ತುತಿ. ಯೂಟ್ಯೂಬ್, ಪಿ ಡಿ ಎಫ್ ರೂಪದಲ್ಲಿ ಪ್ರಸ್ತುತಿಗಳ ಕಾಪಿಡುವಿಕೆ, ಸಾರ್ವಜನಿಕ ಲಭ್ಯತೆಗೆ ದಾರಿಯಾಗಿದೆ. ಗಂಟೆಗಳೊಳಗಾಗಿ ಯೂಟ್ಯೂಬ್‌ನಲ್ಲಿ ಇಡೀ ಕಾರ್ಯಕ್ರಮದ ರೆಕಾರ್ಡಿಂಗ್ ಹಾಜರಿರುತ್ತದೆ. ಮುಂದಿನ ದಾಸೋಹದಲ್ಲಿ ಪಿ ಡಿ ಎಫ್ ಪ್ರತಿ ಬಿಡುಗಡೆಯಾಗುತ್ತದೆ. ನೋಡಿಯೋ ದಾಸೋಹದ ಮುಖ್ಯ ಫಲವೆಂದರೆ ಭೌಗೋಳಿಕ ಮಿತಿಯನ್ನು ಮೀರಿ ವಿಶ್ವದ ಎಲ್ಲಿಂದಲಾದರೂ ಭಾಗವಹಿಸುವ ಅವಕಾಶ.

ಈಗ ಸಾಂಕ್ರಾಮಿಕದ ಭಯ ಮರೆಯಾಗಿರುವ ಕಾರಣ ಹಳೆಯ ರೂಪದ ದಾಸೋಹ ಆಗೊಮ್ಮೆ ಈಗೊಮ್ಮೆ ಮರುಕಳಿಸುವುದೇನೋ ಎಂಬ ಆಸೆ ಹಲವರಲ್ಲಿದೆ. ಧನ್ಯವಾದಗಳು.

ಸಾಹಿತ್ಯ ದಾಸೋಹ ೨೧೩.

ಪ್ರಸ್ತುತಿಗಳ ಕುರಿತು ಅಧ್ಯಕ್ಷರ ಅನಿಸಿಕೆ ನುಡಿಗಳು.



1. ಕೆ ಆರ್ ವೆಂಕಟೇಶ್ : ಅತಿ ಪರಿಚಯ. ಕವನ

ಅಪರೂಪಕ್ಕೊಮ್ಮೆ ಒದಗುವ ಸಂದರ್ಭಗಳು, ಅವಿರತವಾಗಿ ದಕ್ಕಿದಾಗ ಅದರ ಬಗ್ಗೆ ಯಾವುದೇ ಆಸಕ್ತಿಕರ ಭಾವನೆಗಳು ಹುಟ್ಟುವುದಿಲ್ಲ ಎಂಬುದನ್ನು ಹಲವು ಉದಾಹರಣೆಗಳೊಂದಿಗೆ ತಮ್ಮ ಕವನದಲ್ಲಿ ಪ್ರತಿಪಾದಿಸಿದ್ದಾರೆ. ಸದಾ ಅದೇ ವಾತಾವರಣದಲ್ಲಿ ಮುಳುಗಿರುವವರಿಗೆ ಭಾವನಾತ್ಮಕವಾಗಿ ಯಾವುದೇ ಆಸಕ್ತಿ ಬೆಳೆದಿರುವುದಿಲ್ಲ. ಅದರೆ ಇಲ್ಲಿ ಆಯಾವೃತ್ತಿಯನ್ನು ಆಯ್ದು ಕೊಂಡಿರುವ ಎಲ್ಲರೂ ಆಯಾ ಕ್ಷೇತ್ರದಲ್ಲಿ ವೃತ್ತಿಪರರು , ಹಾಗಾಗಿ ಅವರ ವೃತ್ತಿಪರತೆಯನ್ನು ಅಲ್ಲಗಳೆಯುವಂತಿಲ್ಲ. ಅದನ್ನು ಕಳೆದುಕೊಂಡರೆ ಅವರು ಕುಸಿಯುತ್ತಾರೆ. ಪರಿಚಯದ ಅತಿ-ಮಿತಿ ಹೆಚ್ಚು ಸಮಯ ರಿಲೆಟಿವ್ ಆಗಿರಬಹುದು.

2. ಗೌರಿ ಭಟ್ : ತುಮುಲ : ಸ್ವಾನುಭವ ವಿಚಾರಧಾರೆ

ತಾಯಿ ಮಗನ ಸಂಬಂಧಗಳಲ್ಲಿ ಬರಬಹುದಾದ ಸನ್ನಿವೇಶಗಳ ವಿವರಣೆ ಇಲ್ಲಿದೆ. ಅದರಲ್ಲೂ ಪಿ ಯು ಸಿ ಹಂತದಲ್ಲಿ ಒದಗಿದ ಸಂದರ್ಭಗಳನ್ನು ಎರಡು ಭಾಗಗಳಲ್ಲಿ ಲೇಖಕಿ ವಿವರಿಸಿದ್ದಾರೆ. ಮಗ ಬೆಳೆದಿದ್ದಾನೆ ಎಂದು ನಂಬದ ಸ್ಥಿತಿ ತಾಯಿಯದು. ತನ್ನ ಜವಾಬ್ದಾರಿ ಅರಿತು ಮುಂದಿನ ಜೀವನ ರೂಪಿಸಿಕೊಳ್ಳುವುದಕ್ಕೆ ತಯಾರಾಗಿದ್ದೇನೆ ಎಂದು ವಾಚ್ಯವಾಗಿಸದೇ ಕೃತಿಗಳಿಂದಲೇ ಸಮರ್ಥಿಸಿಕೊಳ್ಳುವ ಮಗನ ವರ್ತನೆ. ಅದರಿಂದ ತಾಯಿಗಾಗುವ ಅಚ್ಚರಿ., ಆನಂದ. ಅಮ್ಮನಿಗೇ ನಂಬಿಕೆಯ ಬಗ್ಗೆ ಪಾಠ ಹೇಳುವ ಮಟ್ಟದ ಮಗನ ಬೆಳವಣಿಗೆ. ಇದನ್ನು ಅರಿತ ತಾಯಿ, ಅವರವರ ಬದುಕನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ ಹಾಗೂ ಶಕ್ತಿಯನ್ನು ಒಪ್ಪಿಕೊಳ್ಳಬೇಕು ಎಂಬ ತಿಳುವಳಿಕೆಗೆ ಜಾರುವ ತಾಯಿ ಹಾಗೂ ಮಕ್ಕಳನ್ನು ಹದಿಹರಯದಲ್ಲಿ ಕಾಣ ಬೇಕಾಗುವ ರೀತಿ ತಿಳಿಸುವ ಲೇಖನ.

3. ಎಲ್ ಗಿರಿಜಾ ರಾಜ್ :
ಸಮಸ್ಥ ಜೀವ ಸಂಕುಲವ ಬೆಸೆವ ಪ್ರೀತಿ. ಲೇಖನ

ಎಲ್ಲ ಹಂತಗಳಲ್ಲೂ ಪ್ರೀತಿ ಹೇಗೆ ದ್ವೇಷ ಅಸೂಯೆ ಮುಂತಾದ

ಕಷ್ಟಗಳಿಗೆ ಮುಲಾಮಾಗಬಲ್ಲುದು ಎಂಬ ಕಾಳಜಿ ಪ್ರತಿಪಾದಿಸುವ ಲೇಖನ. ಗಾಂಧಿ, ಬುದ್ಧ, ತೆರೇಸಾ ಎಲ್ಲರೂ ತೋರಿಸಿದ ಪ್ರೀತಿಯ ಮಾದರಿ ಬಯಸಿ , ವೈಭವೀಕರಣ ಗೊಂಡಿರುವ ದ್ವೇಷ, ಬಡತನ, ಶ್ರೀಮಂತಿಕೆಯ ಅಟ್ಟಹಾಸಗಳಿಗೆ ಅಂತ್ಯಹಾಡುವ ಆಶಯದ ಬರಹ. ನಮ್ಮ ಮಧ್ಯದಲ್ಲೇ ಕಾಣುವ ತಾಯಿಯ ಪ್ರೀತಿ , ಗುರುಗಳ ಬೋಧನೆ, ನಮ್ಮ ನಡುವೆಯೇ ಇರುವ ಸಜ್ಜನರ ಮಾದರಿ ಅನುಸರಿಸಿ, ಅನುಭವಿಸಿ ಜೀವನವನ್ನು ಸುಂದರವಾಗಿಸಿ ಕೊಳ್ಳಬಹುದಾದ ಬಗ್ಗೆ ಸಲಹೆ. ಸ್ವಾರ್ಥ, ದ್ವೇಷ, ಅಸಮಾನತೆಗಳ ಹೊರತಾದ ಬದುಕ ದಕ್ಕಿಸಿಕೊಳ್ಳುವ ಸಾಧ್ಯತೆಗಳ ಬಗ್ಗೆ ಚಿಂತನೆ.

4. ರೇಣುಕಾ ದೇಸಾಯಿ. : ಪುಸ್ತಕ ಬಿಡುಗಡೆಯ ಸಮಾರಂಭದ ವರದಿ.

ಇದು ಒಂದು ಪುಸ್ತಕ ಬಿಡುಗಡೆಯ ಸಮಾರಂಭದ ವರದಿ. ಶ್ರೀ ಬಿ ಎಸ್ ಚಂದ್ರಶೆಖರ್, ಶ್ರೀ. ಪ್ರಭಾಕರ ಕೂಡಿ ರಚಿಸಿರುವ ,ಮೂರು ಭಾಷೆಯಲ್ಲಿ ಪ್ರಕಟವಾಗಿರುವ " ಮಹಾ ನಾರಾಯಣ ಉಪನಿಷತ್ " ಪುಸ್ತಕ ಬಿಡುಗಡೆಯ ಸಮಾರಂಭದ ವಿವರವಾದ ವರದಿ. ಗ್ರಂಥದ ಬಗ್ಗೆ ವಿವರಗಳಿರುವ ಬೇರೆಯೊಂದು ಲೇಖನ ಸಹಾ ಇದರ ಜೊತೆಗಿದೆ. ಲೇಖಕರು ಬೇರೆ ಆಗಿರುವ ಕಾರಣ ಅದರ ವಿವರ ಇಲ್ಲಿ ಪರಿಗಣಿಸಿಲ್ಲ . ಈ ಲೇಖನ ಈಗಾಗಲೇ ವೇದಿಕೆಯಲ್ಲಿ ಬಂದಿದೆ ಎಂದೂ ತಿಳಿಸಿದ್ದಾರೆ. ಸಮಾರಂಭವನ್ನು ಸವಿಸ್ತಾರವಾಗಿ ಕಾವ್ಯಮಯವಾಗಿ ವರದಿ ಮಾಡಿದ್ದಾರೆ. ನಿರೂಪಣೆ ನೀರಸವಾಗಿರದೇ ಸಾಹಿತ್ಯಿಕವಾಗಿದೆ. ಅಲ್ಲಿ ನಡೆದ ವೇದ ಪಠಣ ಸೃಷ್ಟಿಸಿದ ವಾತಾವರಣದ ವಿವರ ಚೆನ್ನಾಗಿ ಮೂಡಿ ಬಂದಿದೆ.

5. ರಾಧಿಕಾ ಗುಜ್ಜರ್ : ಬಳೆಗಳು : ಕವನ

ಸರಳ ವಸ್ತುವಿನ ಸುತ್ತ ಹೆಣೆದ ಸಂಕೀರ್ಣ ಕವನ. ಜೊತೆಜೊತೆಯಾಗಿ ಜೋಡಿಸಿಕೊಂಡಿರುವ, ಮಿಣುಕುವ,ಡುಂಡು ಆಕೃತಿಯ ನುಣುಪಿನ,ನಾಜೂಕಿನ ತನ್ನ ಗುಣಗಳನ್ನೆಲ್ಲಾ ಅದನ್ನು ಧರಿಸಿದ ಹೆಣ್ಣು ಮೈಗೂಡಿಸಿ ಕೊಳ್ಳಲು ಅನುವು ಮಾಡಿಕೊಡುವ ಗುಣದ ಬಳೆಗಳು. ಗಂಡಿಗೆ ಭೂಷಣಪ್ರಾಯವಾಗಿರಬೇಕಾದ ಗಂಡಸುತನ, ಧೈರ್ಯ ಇಲ್ಲವಾದಾಗ ಅವನ ನಿಷ್ಕ್ರಿಯತೆಯ ಹೆಣ್ತನವನ್ನು ಎತ್ತಿ ಆಡಲು ಬಳೆ ತೊಡಿಸುವಿಕೆಯ ಪ್ರತಿಮೆಯ ಬಳಕೆಯ ಸತ್ಯಾಸತ್ಯತೆಯನ್ನು ಪ್ರಶ್ನೆ ಮಾಡುವುದು ಕವನದಲ್ಲಿ ಮೂಡಿದೆ. ಚಲನೆಯಲ್ಲಿ ಘಲ್ಲೆನುವ ಬಳೆ ಕೈನ ಮೇಲ್ಭಾಗದಲ್ಲಿ ಏರಿ ಘಟ್ಟಿಯಾಗಿ ಕೂತು ಮೌನಕ್ಕೆ ಸಹಕಾರಿಯಾಗುವ ಗುಣದ ಬಳೆ, ಹೀಗೆ ಒಮ್ಮೆಲೇ ಎಲ್ಲಾ ಅರ್ಥಗಳೂ ಸುಲಭಕ್ಕೆ ದಕ್ಕದಾದಾಗ ಒಟ್ಟಿಗಿರುವ ಬಳೆಗಳನ್ನು ಬಿಡಿಬಿಡಿಯಾಗಿ

ನೋಡಿದಾಗ ಅಂದರೆ ಕಾವ್ಯದ ಸಾಲುಗಳನ್ನೂ ಅದೇ ರೀತಿಯಲ್ಲಿ ನೋಡಿದರೆ ಹೊಸ ಹೊಸ ಅರ್ಥಗಳು ಹುಟ್ಟುವ ಸಾಧ್ಯತೆಗಳಿವೆ.

6. ಕಮಲಾಕ್ಷಿ ಸಿ ಅರ್ :

ಸೂಜಿ ಎಂದರೆ ಸುಮ್ಮನೇನಾ : ಲಘುಲಹರಿ ಲೇಖನ.

ಕ್ಯಾಲೆಂಡರ್ ನಲ್ಲಿ ಸೂಜಿ ಸಿಕ್ಕಿಸುವ ಅಭ್ಯಾಸ ನೆನಪಿಗೆ ತರುತ್ತಾ ಸೂಜಿಯ ವಿವಿಧ ಉಪಯೋಗಗಳನ್ನು ಪಟ್ಟಿ ಮಾಡಿ ಅದರ ಹೆಚ್ಚುಗಾರಿಕೆಯನ್ನು ಬಿಂಬಿಸುವ ಲೇಖನ. ಸೂಜಿ ಕುರಿತಾದ ಗಾದೆಗಳು, ಅದರ ಇತಿಹಾಸ ಇವುಗಳ ಬಗ್ಗೆಯೂ ಲೇಖನದಲ್ಲಿ ವಿವರಗಳಿವೆ. ವೈದ್ಯಕೀಯದಲ್ಲಿಯೂ ಸೂಜಿ ಬಳಕೆಯ ವಿವರ ಸಹ ಚಿತ್ರಿತವಾಗಿದೆ.

7. ಅನ್ನಪೂರ್ಣ :

ಹೀಗೂ ಉಂಟಾ? ಒಂದು ಘಟನೆ ಆಧಾರಿತ ಲೇಖನ.

ದಿಟದ ನಾಗರವೊಂದು ಕಂಡರೆ ಭಕ್ತರು ಏನೆಲ್ಲಾ ಮಾಡಬಹುದು ಎಂಬ ಒಂದು ನಿಜ ಘಟನೆಯನ್ನು ಆಧರಿಸಿದ ಬರಹ. ಹೊಸದಾಗಿ ರೂಪಿತಗೊಂಡ ಬಡಾವಣೆಯ ಮನೆಯೊಂದರಲ್ಲಿ ಪ್ರತ್ಯಕ್ಷವಾದ ನಾಗರಹಾವೊಂದಕ್ಕೆ ಭಕ್ತಿ ಭಾವದಿಂದ ಪೂಜೆಮಾಡಿ ಎಲ್ಲರನ್ನೂ ಸೇರಿಸಿ ನಾಗ ಪೂಜೆ ಮಾಡ ಬಯಸಿದ್ದ ಮಹಿಳೆಯೊಬ್ಬರ ಧೈರ್ಯ(ಭಕ್ತಿಯ ಭಾವಾವೇಶದಲ್ಲಿ ಬಂದದ್ದು) ಕುರಿತಾದ ಬರಹ. ಮಗಳಾದಿಯಾಗಿ ಎಲ್ಲರೂ ಬೇಡವೆಂದರೂ ಕೇಳದೇ ಕೈಲಿದ್ದ ಊದುಗಡ್ಡಿಯ ಬೆಂಕಿ ಕೈಗೆ ತಗಲಿದರೂ ಲೆಕ್ಕಿಸದೇ ನಾಗನ ಪೂಜೆಯಲ್ಲಿ ತೊಡಗಿದ್ದ ಹೆಂಗಸೊಬ್ಬಳ ಕಥೆ. ಕಡೆಗೂ ತಪ್ಪಿಸಿಕೊಂಡು ಅಲ್ಲಿಂದ ಬಚಾವಾದ ನಾಗರಾಜ. ಹೀಗೂ ಇದೆ ಎಂಬ ಘಟನೆಯ ವಿವರದ ಲೇಖನ.

8. ನಾಗರತ್ನ ಚಂದ್ರಶೇಖರ್. :

ಕರ್ಣಗಳೇಕೆ ಕಠೋರವಾಗಿವೆ? (ಕರ್ಣಗಳು ಕಠೋರವಾದರೆ).

ಅನುಭವ ಕಥನ

ವಯಸ್ಸಾದಂತೆ ಪಂಚೇಂದ್ರಿಯಗಳ ಶಕ್ತಿ ಕುಂದುವುದು ಸಹಜ. ಇವುಗಳ ಪೈಕಿ ಕಿವಿಗೆ ಸಂಬಂಧಿಸಿದಂತೆ ಕಾಡುವ ತೊಂದರೆ ಕೇಳದಿರುವಿಕೆ. ನರಗಳ ಕೇಳುವ ಶಕ್ತಿ ಕುಗ್ಗಿ ಹೊರಗಿನ ಧ್ವನಿಗಳು ಕೇಳದಾದಾಗ ಆಂತರಿಕವಾಗಿ ಉತ್ಪತ್ತಿಯಾಗುವ ಶಬ್ಧಗಳ ಕಠೋರತೆಯ ತೊಂದರೆ, ಟಿನಿಟಸ್ ಎಂಬ ಖಾಯಿಲೆ. ಇದಕ್ಕೆ ಮದ್ದು ಇರುವಂತೆ ಕಾಣುವುದಿಲ್ಲ. ಆದರೆ ಈ ತೀರ್ಮಾನಕ್ಕೆ

ಬರಲು ಅನೇಕ ಪರೀಕ್ಷೆಗಳಿಗೆ ರೋಗಿ ಒಡ್ಡಿಕೊಳ್ಳಬೇಕಾಗುವುದು ಈಗಿನ ರೋಗನಿಧಾನ ಪದ್ದತಿಯ ಕ್ರಮ. ಈ ದಿಸೆಯಲ್ಲಿ ಲೇಖಕಿ ಪಟ್ಟ ಪಡಿಪಾಟಲು ಲೇಖನದ ವಿಷಯ. ಶ್ರವಣ ಸಾಧನಕ್ಕೆ ಮೊರೆಹೋಗಬೇಕೆನ್ನುವ ವೈದ್ಯರ ಸಲಹೆ ಇವರಿಗೆ ಇಷ್ಟವಾಗದೇ ಯಥಾಸ್ಥಿತಿ ಮುಂದುವರೆಸುವ ತೀರ್ಮಾನಕ್ಕೆ ಬರುತ್ತಾರೆ ಲೇಖಕಿ. ನನ್ನ ಹೆಂಡತಿಗೂ ಈ ತೊಂದರೆ ಹತ್ತಾರು ವರ್ಷಗಳಿಂದ ಇದ್ದು ಅದಕ್ಕೇ ಹೊಂದಿಕೊಂಡಿದ್ದಾರೆ. ಅವರಿಗೆ ಕರ್ಣಕಠೋರ ಶಬ್ಧಗಳಲ್ಲದೇ ಯಾವಾಗಲೋ ಕೇಳಿದ ಸಂಗೀತ, ಹಾಡುಗಳು ಟೇಪ್ ರೆಕಾರ್ಡರ್ ನಂತೆ ಮಾರ್ಧನಿಗೊಳ್ಳುವುದಂತೆ.

9. ಮಾಧುರಿ ಕೃಷ್ಣ.:

ನಾನೂ ನನ್ನ ಮಿತ್ರನೂ ಸರಣ : ಅಡಿಯ ಮುಂದಿಡೆ ಸ್ವರ್ಗ

ಬಹಳ ಕಾಲದ ಮೇಲೆ ಸಹಪಾಠಿಯೊಬ್ಬನ ಭೇಟಿಯ ಸಂದರ್ಭದಲ್ಲಿ ನಡೆದ ವಿದ್ಯಮಾನಗಳ ವಿವರಣೆ. ಈ ಭೇಟಿಯಲ್ಲಿ ಒಬ್ಬರಿಗೊಬ್ಬರು ಏನೋ ಹೇಳಿಕೊಳ್ಳುವ ಪ್ರಯತ್ನ. ನಂತರ ಗೆಳತಿ ಜ್ಞಾಪಿಸಿಕೊಳ್ಳುವ ಒಂದು ಮಳೆಗಾಲದ ಸಂದರ್ಭ. ಜಾರುತ್ತಿದ್ದರೂ ಸಂಭಾಳಿಸಿಕೊಂಡು ನಡೆದ ಗೆಳತಿಯರ ಗುಂಪು, ಅವರನ್ನು ಅನುಸರಿಸಹೋದ ಹುಡುಗರ ನಿರಂತರ ಜಾರುವಿಕೆ, ಏಳಲಾರದ ಸ್ಥಿತಿ, ನಂತರ ಗೆಳೆಯನಿಗೆ ಉಂಟಾದ ಅನಾರೋಗ್ಯ ಎಲ್ಲಾ ಸುಂದರವಾಗಿ ಮೂಡಿಬಂದಿದೆ. ಅಡಿಯ ಮುಂದಿಡೆ ಜಾರಿ ಜಾರಿ ಬೀಳುವ , ಏಳಲಾಗದ ಪರಿಸ್ಥಿತಿಯ ಕಥನ.

10. ಭ ರಾ ವಿಜಯ ಕುಮಾರ : ವಿವೇಚನೆ : ಕವನ

ಕತ್ತಲು ಬೆಳಕುಗಳ ಅವಶ್ಯಕತೆ, ಪರಿಮಿತಿಗಳನ್ನು ಗುರುತಿಸುವ ಕವನ. ಪರರ ಅನುಭವದಿಂದ ಪಾಠ ಕಲಿಯದೇ ಸ್ವಾನುಭವಕ್ಕೆ ಒಡ್ಡಿಕೊಳ್ಳುವುದರ ಔಚಿತ್ಯವೇನು? ಎಂಬ ಪ್ರಶ್ನೆ ಎತ್ತಿ ಅತಿ ಜ್ಞಾನದ ಬಳಕೆಯನ್ನು ಮಿತಿಗಳಿಸಿಕೊಂಡು ಸರಳ ಬದುಕಿಗೆ ಜಾರುವುದು ಸೂಕ್ತವೆಂಬ ನಂಬಿಕೆ ಪ್ರತಿಪಾದಿಸುವ ಕವನ. ಬದುಕಿನ ಸಾರ್ಥಕತೆಗೆ ವಿವೇಕ ತಂದುಕೊಡುವ ಅನುಭವದ ಔಚಿತ್ಯತೆಯನ್ನು ಉಲ್ಲ್ಲೇಖಿಸುವ ಕವನ.

11. ಬೆಂ ಶ್ರೀ ರವೀಂದ್ರ : ಕವಿ ನೆನಪು. ಪುಸ್ತಕ ಪರಿಚಯ.

ಕವಿ ಕೆ ಎಸ್ ನ ಅವರ ಕುರಿತಾಗಿ ಕೆ ಎನ್ ಮಹಾಬಲ ಅವರು ಬರೆದ, ಮುದ್ರಣಗೊಂಡು ಸದ್ಯದಲ್ಲೇ ಹೊರಬರಲಿರುವ ಗ್ರಂಥದ ಬಗ್ಗೆ ರವೀಂದ್ರ ಬರೆದಿದ್ದಾರೆ. ಐವತ್ನಾಲ್ಕು ಪುಟ್ಟ ಪುಟ್ಟ ಅಧ್ಯಾಯಗಳು ಪುಸ್ತಕದಲ್ಲಿ

ಇವೆಯಂತೆ. ಜೀವನ ಚರಿತ್ರಯಲ್ಲ. ಆದರೆ ಕವಿಯ ಜೀವನದ ಪ್ರಮುಖ ಘಟ್ಟಗಳನ್ನು ಮಗ ಕಂಡಂತೆ ಹೇಳುತ್ತಾ ಹೋಗಿದ್ದಾರೆ ಈ ಪುಸ್ತಕದಲ್ಲಿ ಮಗ ಮಹಾಬಲ. ಇವುಗಳ ವಿವರಗಳನ್ನು ಸೂಕ್ಷ್ಮವಾಗಿ ತೆರೆದಿಟ್ಟಿದ್ದಾರೆ ರವೀಂದ್ರ. ಬರಹಗಾರರಾಗಿ ಮಹಾಬಲ ಅವರ ಶಕ್ತಿಯನ್ನು ಸಹಾ ರವೀಂದ್ರ ಅವಲೋಕಿಸಿದ್ದಾರೆ. ಹಳೆಯ ಲೇಖನ ಆದರೂ ಸ್ವಲ್ಪ ನವೀಕರಿಸಿ ಪ್ರಸ್ತುತಿ ಪಡಿಸಿದ್ದಾರೆ ರವೀಂದ್ರ, ಹೊಸ ಸದಸ್ಯರ ಗಮನಕ್ಕೆ ಬರಲೆಂಬ ಉದ್ದೇಶದಿಂದ. ಪುಸ್ತಕ ಹೊರಬರುವ ದಿನಾಂಕಕ್ಕೆಕಾಯುತ್ತಿದ್ದೇವೆ. ಕವಿಯ ಬಗ್ಗೆ ಹೊಸ ಸಂಗತಿಗಳನ್ನು ಅವರ ಮಗನಿಂದ ತಿಳಿಯುವ ಲೇಖನಗಳಿಗಾಗಿ.

12. ಕೆ ಎನ್ ಮಹಾಬಲ :
ನವೋದಯ ಕವಿ ಪ್ರೊ. ಎಂ ವಿ ಸೀತಾರಾಮಯ್ಯ : ಕವಿ ಪರಿಚಯ.

ಹೂವಾಡಗಿತ್ತಿ ಹಾಡಿನ ಮೂಲಕ ಆರಂಭಿಸಿ ಎಂ ವಿ ಸೀ ಅವರ ಜನನ, ವಿಧ್ಯಾಭ್ಯಾಸ, ವೃತ್ತಿಗಳು, ಸಾಹಿತ್ಯ ಕ್ಷೇತ್ರದಲ್ಲಿನ ಅವರ ಮೈಲಿಗಲ್ಲುಗಳು, ಪಡೆದ ಪ್ರಶಸ್ತಿಗಳು, ಅವರ ಸಾಹಿತ್ಯದ ಹರಹು, ವೈಶಾಲ್ಯತೆಗಳನ್ನು ಎಂದಿನಂತೆ ತಮ್ಮ ವಿಶೇಷ ಶೈಲಿಯಲ್ಲಿ ಹೊರತಂದಿದ್ದಾರೆ. ಕವಿಯ ಕೃತಿಗಳನ್ನು ನಾವೆಲ್ಲರೂ ಓದುವಂತೆ ಪ್ರಚೋದಿಸುವಂತಿದೆ ಈ ಲೇಖನ. ಕವಿಯ ಸಮಗ್ರ ಸಾಹಿತ್ಯದ ತಿರುಳನ್ನು ಬಿಚ್ಚಿಡುವ ಬೇರೊಂದು ಲೇಖನ ಮಹಾಬಲ ಅವರಿಂದ ಬಂದರೆ ನಮಗೆಲ್ಲರಿಗೂ ಅನುಕೂಲವಾಗಬಲ್ಲುದು.

13. ಪತ್ತಂಗಿ ಮುರುಳಿ : ವಾಸ್ತವ : ಪ್ರಬಂಧ

ಇನ್ನೂ ವಾಸ್ತವವಾಗದಿರುವ, ಪ್ರಚಲಿತ ಚರ್ಚಾಸ್ಪದ, ಟ್ರೋಲಾಸ್ಪದ, ಮೀಮಾಸ್ಪದ, ಟಿಕ್ ಟಾಕಾಸ್ಪದ ವಿಷಯಗಳ ಕುರಿತಾದ ಒಂದು ಕಲ್ಪನೆಯ ಆಧಾರಿತ ಲೇಖನ. ಸಧ್ಯಕ್ಕೆ ಆಡಳಿತಕ್ಕೆ ಬಂದಿರುವ ಸರ್ಕಾರದ ಗ್ಯಾರಂಟಿಗಳು ಅನುಷ್ಠಾನಕ್ಕೆ ಬಂದರೆಏನಾಗಬಹುದು ಎನ್ನುವ ಬಗ್ಗೆ ಒಂದು ಲಹರಿ ಹರಿಬಿಟ್ಟಿದ್ದಾರೆ. ಕಾಡುತ್ತಿರುವ ಅನಿಶ್ಚಿತತೆ ಬಗೆಹರಿಯಬಹುದೇನೋಎಂಬ ಆಶಾಭಾವದಿಂದ ಕಾಯುತ್ತಿರುವ ಜನರ ಮನಸ್ತಿತಿಯ ಬಗೆಗಿನ ಬರಹ.

16 : ವಿಠ್ಠಲ ಇಜೇರಿ : ಕಥಾ ಪ್ರಪಂಚ ; ಮಕ್ಕಳ ಕಥೆಗಳು.

ರಾಮಕೃಷ್ಣಾಶ್ರಮ ಮಕ್ಕಳಿಗಾಗಿ ಹೊರತಂದಿರುವ ಕಥಾ ಸಂಕಲನದಲ್ಲಿ ಬರುವ ಚಿಕ್ಕ ಕಥೆಯೊಂದರ ತಿರುಳನ್ನು ಕಟ್ಟಿ ಕೊಟ್ಟಿದ್ದಾರೆ. ಕಥೆಯಲ್ಲಿ ಗುರುನಾನಕರ ಬಳಿಗೆ ಕಪಟಿ ಶಿಷ್ಯನೊಬ್ಬ , ತನಗೆ ಬೇಕಾದ ಗುರುಗಳನ್ನು ಹುಡುಕುವಲ್ಲಿ ನಾನಕರ ಸಹಾಯ ಕೋರುತ್ತಾನೆ. ಆಗ ನಾನಕರು ಸೂಚಿಸುವ

ವ್ಯಕ್ತಿ ಬಡಗಿ ಬೈಲಾಲೋ. ಬೈಲಾಲೋಗೆ ಮುಂದಾಗುವುದು ಗೊತ್ತಾಗುತ್ತದೆ. ಕಪಟ ಸನ್ಯಾಸಿಯ ಸಾವಿನ ಸಾಧ್ಯತೆಯನ್ನು ಬೈಲಾಲೋ ತಿಳಿಸಿದಾಗ ಅದನ್ನು ಸುಳ್ಳಾಗಿಸುವ ಪ್ರಯತ್ನದಲ್ಲಿ ಕಪಟ ಸನ್ಯಾಸಿ ಬಹುದೂರ ಹೋಗಿಬಿಡುತ್ತಾನೆ. ಆದರೂ ಸಾವು ಅವನ ಎದುರಿಗೆ ಬಂದು ನಿಲ್ಲುತ್ತದೆ. ಆಗ ಬೈಲಾಲೋ ಮಾಡುವ ಧ್ಯಾನದಿಂದ ಅವನ ಪ್ರಾಣ ಉಳಿಯುತ್ತೆ. ಭಗವಂತನ ದಯೆಯಿಂದಲೇ ಜೀವನದ ಆಗುಹೋಗುಗಳು ಎಂದು ಸಾರುವ ಕಥೆಯ ಸೂಕ್ತ ಪರಿಚಯ.

17. ವೆಂಕಟ ಕಾಮತ್ :
ಆಟೋ ಪುರಾಣ ಮತ್ತು ಮಲ್ಲಮ್ಮನ ಪವಾಡ. ಲಘು ಪ್ರಬಂಧ

ಲೇಖನವನ್ನು ಎರಡು ಭಾಗಗಳಲ್ಲಿ ಪ್ರಸ್ತುತ ಪಡಿಸಿದ್ದಾರೆ. ಮೊದಲ ಭಾಗದಲ್ಲಿ ಆಟೋ ಬಗೆಗಿನ ಹಲವು ಸವಿ ನೆನಪುಗಳು. ಆಟೋದಲ್ಲಿ ಬಿಟ್ಟುಬಂದ ಸಿಹಿತಿಂಡಿಯನ್ನು ಕಳೆದುಕೊಂಡ ನೆನಪು ಈಗಲೂ ಹಸಿಯಾಗಿರುವುದು. ಅಟೋದ ಇತಿಹಾಸ ಗೂಗಲ್ ಮೂಲಕ ತಿಳಿದದ್ದು, ಬೆಂಗಳೂರಲ್ಲಿ ಆಟೋ ಶುರುವಾದ ಘಟನೆಗಳ ವಿವರ ಕೊಟ್ಟಿದ್ದಾರೆ. ಎರಡನೇ ಭಾಗದಲ್ಲಿ ಮಲ್ಲಮ್ಮನ ಪವಾಡ ಚಿತ್ರದ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಮೊದಲ ಭಾಗಕ್ಕೂ ಮಲ್ಲಮ್ಮನಿಗೂ ಏನು ಸಂಬಂಧ ಎಂದು ತಿಳಿಯುವ ಕುತೂಹಲ ಓದುಗನಲ್ಲಿ ಮೂಡುವಾಗ ಪ್ರತ್ಯಕ್ಷವಾಗುವವಳೇ ಆಟೋ ಚಾಲಕಿ ಮಲ್ಲಮ್ಮ. ಅವಳೊಡನೆ ನಡೆಸಿದ ಸಣ್ಣ ಮಾತುಕತೆಯ ವಿವರದೊಂದಿಗೆ ಲೇಖನ ಮುಕ್ತಾಯವಾಗುತ್ತದೆ.

17. ಎಂ ಎಸ್ ನರಸಿಂಹ ಮೂರ್ತಿ :
ಜಿಪುಣತನದ ಪರಮಾವಧಿ. ಹಾಸ್ಯ ಲೇಖನ.

ಎಂದಿನಂತೆ ಸಾಲು ಸಾಲಿಗೂ ಹಾಸ್ಯ ಉಕ್ಕಿಸುವ ಲೇಖನ. ಜಿಪುಣತನದ ಉತ್ತುಂಗವನ್ನು ಮುಟ್ಟಿದ ವ್ಯಕ್ತಿಗಳ ಕಥೆಗಳು. ಹಲ್ಲು ಚಪ್ಪಲಿಗಳ ಸವೆಯುವಿಕೆ ತಪ್ಪಿಸಲು ಜಿಪುಣವೀರರು ರೂಪಿಸಿದ ತಂತ್ರಗಳು. ಸೋಪು, ತಿಂಡಿಯ ಖರ್ಚು ಉಳಿಸಲು ಖತರ್ನಾಕ್ ತಂತ್ರಗಳನ್ನು ರೂಪಿಸಿಕೊಂಡಿರುವ ಜಿಪುಣ ವಿಭೂಷಣರು, ಸಿಂಗಪೂರದ ಘಟನೆ, ಎಲ್ಲದರಲ್ಲೂ ಜಿಪುಣರ ಕಾರ್ಯ ತಂತ್ರಗಳನ್ನು ವಿವರಿಸುವ ಮೂರ್ತಿ, ಕಡೆಯಲ್ಲಿ, ಬಚ್ಚಿಡದೇ ಕೊಟ್ಟು ಜೀವಿಸಬೇಕೆನ್ನುವ, ಹಂಚಿ ತಿನ್ನುವ ಮನೋಭಾವ ಬೆಳೆಸಿಕೊಳ್ಳಬೇಕೆನ್ನುವ ಗಂಭೀರ ಸಂದೇಶ ನೀಡುತ್ತಾರೆ.

18. ಗಣಪತಿ ಹೆಗಡೆ :

ಕಾಯಿದೆ ಬಾಹಿರ vs ನೀತಿ ಬಾಹಿರ. : ಚಿಂತನೆ

ನೀತಿಯುತವಾಗಿ, ನ್ಯಾಯಯುತವಾಗಿ ಬಾಳುವುದನ್ನು ಸಮಾಜ ನಿರೀಕ್ಷಿಸುತ್ತದೆ. ಇದಕ್ಕೆ ವಿರುದ್ಧವಾಗಿ ಬಾಳಿದರೆ ಹೇಗೆ? ಇದು ಲೇಖಕರ ಚಿಂತನಕ್ಕೆ ಬಂದಿರುವ ವಿಷಯ. ಎರಡರ ನಡುವೆ ಇರುವ ವ್ಯತ್ಯಾಸವನ್ನು ವಿಶ್ಲೇಷಿಸುವ ಹಾಗೂ ಕಾನೂನು ಗಳ ವಿವರವಾದ ವರ್ಣನೆ ಲೇಖನದಲ್ಲಿದೆ. ಸ್ವಂತಕ್ಕೆ ಅನುಸರಿಸಬೇಕಾದ್ದು ನೀತಿಯಾಗಿದ್ದು ಅದರ ಪಾಲನೆಯಾಗದೆ ಸಮಾಜದ ಮೇಲೆ ದುಷ್ಪರಿಣಾಮ ಬೀರುವ ವಿಷಯವಾದರೆ ಅದು ಕಾಯ್ದೆ/ ಕಾನೂನಾಗಿ ಮಾರ್ಪಡುತ್ತದೆ. ನೀತಿಬಾಹಿರವಾದ ಕಾರ್ಯಕ್ಕೆ ಶಿಕ್ಷೆ ಸೇರಿಸಿದರೆ ಅದೇ ಕಾಯ್ದೆಯಾಗುತ್ತದೆ.

19. ಪೋಲೇನಹಳ್ಳಿ ರಮೇಶ್. : ಶರಧಿ : ಕವನ.

ಶರಧಿಯನು ಮಾನಸಿಕವಾಗಿ ಮತ್ತೊಮ್ಮೆ ಮಥಿಸಿ, ಹೊಸ ಹೊಸ ಅರಿವನ್ನು ಹುಟ್ಟಿಸಿಕೊಂಡ ವಿವರದ ಕವನ.ಶರಧಿಯ ಅಖಂಡತೆ, ಅದರ ಸ್ವಭಾವ , ಶಾಂತತೆ- ಉಗ್ರತೆಯ ರೂಪಗಳು, ನಿರಂತರತೆ, ವೈಶಾಲ್ಯ ಮುಂತಾದ ವರ್ಣನೆಗಳು ಕವನದ ಅಂದವನ್ನು ಹೆಚ್ಚಿಸಿವೆ. ಶರಧಿಗೆ ಮಾನವರು ಮಾಡುತ್ತಿರುವ ಅತ್ಯಾಚಾರಗಳನ್ನೂ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ.

20 ಟಿ ಎಸ್ ಶ್ರವಣಕುಮಾರಿ. :

ಕಸ್ತ್ವಂ- ಕೋಹಂ. ಅನುಭವ ಸರಣಿಯ ಲೇಖನ.

ನೀನು ಯಾರು? ನಾನು ಯಾರು? ಎಂಬ ಜಿಜ್ಞಾಸೆ ಶಂಕರಾಚಾರ್ಯರ ಭಜಗೋವಿಂದಂ ಸ್ತೋತ್ರದಲ್ಲಿ ಬರುವ ಪ್ರಶ್ನೆಗಳು. ಕಳೆದ ದಾಸೋಹದಲ್ಲಿ ಸ್ವಗತ ಎನ್ನವ ಶೀರ್ಷಿಕೆಯಡಿ ಪ್ರಸ್ತುತಪಡಿಸಿದ ಅನುಭವ ಕಥನದ ಮುಂದಿನ ಭಾಗ. ಲೇಖಕಿಯು ಅನಾರೋಗ್ಯದ ಕಾರಣ ಆಸ್ಪತ್ರೆಗೆ ದಾಖಲಾದಾಗ ನಡೆದ ಪರೀಕ್ಷೆಗಳ ಅನುಭವಗಳನ್ನು ಎರಡೂ ಭಾಗಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ನೆನೆಸಿಕೊಳ್ಳುವುದೇ ಬೇಡವೆನಿಸುವಾಗ ಅವನ್ನು ಸಮರ್ಥ ರೀತಿಯಲ್ಲಿ ದಾಖಲಿಸಿ , ರೋಗಿಯ ಮಾನಸಿಕ, ದೈಹಿಕ ತೊಳಲಾಟಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಕಲೆ ಶ್ರವಣ ಕುಮಾರಿಯವರಿಗೆ ದಕ್ಕಿದೆ. ಆಸ್ಪತ್ರೆಯಲ್ಲಿ ಪರೀಕ್ಷೆಗಳಿಗಾಗಿ ರೋಗಿ ವಿವಿಧ ಕೋಣೆಗಳನ್ನು ಹೊಕ್ಕು ಹೊರಬರುವ ಸಂದರ್ಭದಲ್ಲಿ ಅನುಭವಿಸಬೇಕಾದ ಯಾತನೆ, , ಸಾವು ಬದುಕಿನ ನಡುವೆ ನಡೆಯುವ ಹೋರಾಟ, ಮೃತ್ಯು ಕಾದಿರುವ ಭಾವನೆ ಎಲ್ಲದರ ಮನೋಜ್ಞ ಚಿತ್ರಣ ಇಲ್ಲಿದೆ. ಮತ್ತೊಬ್ಬ ರೋಗಿಯ ಪಡಿಪಾಟಲನ್ನು

ತಮ್ಮದೇ ನೋವಿನ ಪರಿಸ್ಥಿತಿಯಲ್ಲೂ ಗಮನಿಸಿ ಅದನ್ನೂ ದಾಖಲಿಸುವ ಪರಿ ಮೆಚ್ಚುವಂತಹುದು. ಇವರ ಬರಹವನ್ನು ಓದುತ್ತಾ ಹೋದರೆ ಪ್ರಸಿದ್ಧ ಕಾದಂಬರಿಕಾರರಾದ ಕಾಫ್ಕಾ, ಕಾಮು ಮುಂತಾದವರ ಕೃತಿಗಳ ನೆನಪಾಗುತ್ತದೆ.

21. ಜಗನ್ನಾಥ ಜೆ ಎನ್. : ಕಳೆ ಕಳೆದಾಗ. : ಕವನ.

ವಯಸ್ಸಾದಂತೆ ತಲೆಯೊಳಗಿನದು ಮಾಗುವುದು ಸಹಜ. ಹೊರಗಿನ ಕೂದಲೂ ಅಂತೆಯೇ ರೂಪಾಂತರ ಹೊಂದುತ್ತಾ ಹೋಗುತ್ತದೆ. ಅದರ ಬೆಳವಣಿಗೆಗಳನ್ನು ಗಮನಿಸಿ ಪರಿಣಾಮಗಳನ್ನು ಚಿತ್ರಿಸುವ ಕವನ. ಒಂದೊಂದಾಗಿ ಕಾಣಿಸಿಕೊಳ್ಳುವ ಬೆಳ್ಳಿ ಕೂದಲನ್ನು ನಿವಾರಿಸಿಕೊಳ್ಳುತ್ತಾ ಹೋಗುವಾಗ ಬಿಳಿಯದರ ಜೊತೆಗೆ ಸ್ವಾಭಾವಿಕವಾಗಿ ಕಪ್ಪು ಕೂದಲೂ ಕಡಿಮೆಯಾಗುತ್ತಾ ಹೋಗಿ ಬೊಕ್ಕತಲೆಯಲ್ಲಿ ಕೊನೆಗೊಂಡಾಗ ಉಂಟಾಗುವ ಪರಿಸ್ಥಿತಿಯ ಚಿತ್ರಣ ಕವನದಲ್ಲಿದೆ. ಇದು ಹೊರಗಿನ ಭಾಗದ್ದಾದರೆ ಒಳಭಾಗದಲ್ಲಿ ಹೆಚ್ಚು ಹೆಚ್ಚು ಪ್ರೌಢಿಮೆ, ಸುವಿಚಾರ ಚಿಂತನೆ ಬೆಳೆಸಿಕೊಳ್ಳುವ ಸಾಧ್ಯತೆಗಳು ಕವನದಾಚೆಗೆ ಹೊಳೆಯಬಹುದಾಗಿದೆ.

22. ರಾಜೇಂದ್ರ ಪ್ರಸಾದ್ : ದಾಡಿ ಪುರಾಣಂ : ಕವನ.

ತಾವು ಕಂಡ ತರತರದ ಗಡ್ಡಗಳ ವರ್ಣನೆ, ಪ್ರಸಿದ್ಧ ಗಡ್ಡದಾರಿಗಳ ಬಗ್ಗೆ ವಿವರಣೆ, ನಮಗೆ ವಾರಕ್ಕೆಲ್ಲಾ ಬೆಳೆದರೂ ಋಷಿ ಮುನಿಗಳ ಕಾಲದಿಂದ ಈ ದಿನದ ವರೆಗೂ ದೀರ್ಘಕಾಲ ಗಡ್ಡ ಬೆಳೆದು ಬಂದ ಹಾದಿಯನ್ನು ಗುರುತಿಸುವ ಕವನ. ಗದ್ಯದಂಶ ಹೆಚ್ಚು ಕಾಣಿಸುತ್ತದೆ. ಹಿಂದಿಯ ದಾಡಿಯ ಬದಲಿಗೆ ಕನ್ನಡದ ಗಡ್ಡ ಎಂಬ ಪದಕ್ಕೆ ಬದಲಾಯಿಸಿಕೊಂಡು ಇಡೀ ಪದ್ಯವನ್ನು ಓದಿದೆ. ಚನ್ನಾಗೇ ಹೊಂದಿಕೊಂಡಿತು. ಲೇಖಕರು ಗಮನಿಸಬಹುದು.

.